


**ಆಶಿಷ್ ರಾಯ್‌ಚೂರ್**

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಥಮ ಪ್ರತಿ: ಡಿಜಿಟಲ್ ಬಿಡುಗಡೆ ಮೇ 2021
ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ:ಕರುಣಾಜೆರೋಮ್, ಬ್ರೈಫ್ಯೆಯ್ಸ್ ಡಿಸೈನ್ಸ್

Contact information:
All Peoples Church& World Outreach,
#319,2nd Floor, 7th Main, HRBR Layout,
2nd Block, Kalyan Nagar, Bangalore 560043
Karnataka INDIA

Phone:+91-80-25452617
Email:bookrequest@apcwo.org
Website:apcwo.org

Unless otherwise indicated, all Scripture quotations are taken from the Holy Bible, New king lames Version. Copyright @1982 by Thoms Nelson, inc., Used by permission. All right reserved.
Scriptures marked as" (MSG)" are taken from THE MESSAGE: The Bible in Contemporary Language copyright 2002 by Eugene H. Peterson.
Scripture marker as" (GNB)" are taken from the GNB-Second Edition ©1992 by American Bible Society Used by permission.

**ಉಚಿತ ವಿತರಣೆಗಾಗಿ**
ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

ಮೇಲಿಂಗ್ ಪಟ್ಟಿ ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ
ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.
(Kannada Book – kingdom of God)

# ದೇವರ ರಾಜ್ಯ

# ಪರಿವಿಡಿ

ಪೀಠಿಕೆ ........................................................................................................ 1
1.ದೇವರ ರಾಜ್ಯವು ಯೋಜಿಸಲಾಗಿದೆ ....................................................................... 3
2.ಅರಸನು ಮತ್ತು ಆತನ ರಾಜ್ಯ ............................................................................ 11
4.ದೇವರ ರಾಜ್ಯದ ಆಲೋಚನೆ.............................................................................. 28
5.ದೇವರ ರಾಜ್ಯದ ಜೀವಿಸುವಿಕೆ (ಜೀವನ) ................................................................ 40
6.ದೇವರ ರಾಜ್ಯದ ಸಂಸ್ಕೃತಿ................................................................................ 51
7.ದೇವರ ರಾಜ್ಯದ ಸಾಮ್ಯಗಳು............................................................................. 56
8 ದೇವರ ರಾಜ್ಯದ ಅಧಿಕಾರ................................................................................ 66
9.ದೇವರ ರಾಜ್ಯದ ಸರ್ಕಾರ ................................................................................ 72
10.ಅಕ್ಷರಶಃ ದೇವರ ರಾಜ್ಯ ................................................................................ 83
11.ರಾಜ್ಯದ ಆದೇಶ........................................................................................... 93

# ಪೀಠಿಕೆ

ಸತ್ಯವೇದದ ಮೂಲಕವಾಗಿ ದೇವರ ರಾಜ್ಯವು ಒಂದು ಪ್ರಮುಖ ವಿಷಯವಾಗಿದೆ. ಯೇಸುವು ಆತನ ಭೂ ಲೋಕದ ಸೇವೆಯನ್ನು ಪರಲೋಕ ರಾಜ್ಯದ ಆಗಮನದ ಕುರಿತು ಸಾರುವ ಮುಖಾಂತರ ಆರಂಭಿಸಿದನು. ಆತನ ಸ್ವರ್ಗಾರೋಹಣಕ್ಕೆ ಮೊದಲೂ ಆತನ ಅಂತಿಮ ದಿವಸಗಳ ಅವಧಿಯಲ್ಲಿ, ದೇವರ ರಾಜ್ಯದ ಕುರಿತು ಆತನು ಉಪದೇಶಿಸಿದನು. ಆಧಿಸಭೆಯು ದೇವರ ರಾಜ್ಯದ ದೃಷ್ಟಿಕೋನದಿಂದ ಪ್ರಸಂಗಿಸಿತು. ಮತ್ತು ಉಪದೇಶಗಳನ್ನು ನೀಡಿತ್ತು. ಯುಗದ ಸಮಾಪ್ತಿಯು ಬರುವುದಕ್ಕೆ ಮೊದಲು ಪ್ರಪಂಚಕ್ಕೆಲ್ಲಾ ದೇವರ ರಾಜ್ಯದ ಸುವಾರ್ತೆಯನ್ನು ನಾವು ಸಾರುವುದು ವಾಸ್ತವವಾದುದಾಗಿದೆ. (ಮತ್ತಾಯ: 24:14) ಆದಾಗ್ಯೂ ಇಂದಿನ ಸಭೆಗಳಲ್ಲಿ ದೇವರ ರಾಜ್ಯದ ಮೇಲೆ ಉಪದೇಶಗಳನ್ನು ಮತ್ತು ಪ್ರಸಂಗಗಳನ್ನು ತುಂಬಾ ಅತೀ ವಿರಳವಾಗಿ ನಾವು ಕೇಳಿಸಿಕೊಳ್ಳುತ್ತೇವೆ. ಆತನು "ನಿನ್ನ ರಾಜ್ಯುವು ಬರಲಿ, ನಿಮ್ಮ ಚಿತ್ತವೂ ಪರಲೋಕದಲ್ಲಿ ನೆರವೇರುವ ಪ್ರಕಾರ ಭೂ ಲೋಕದಲ್ಲಿಯೂ ನೆರವೇರಲಿ" ಎಂಬುದಾಗಿ ಪ್ರಾರ್ಥಿಸಲೂ ಆತನು ಹೇಳಿದಾಗ ಯೇಸುವು ನಮಗೆ ಕೊಟ್ಟಂತಹ ಆದೇಶವನ್ನು ಹೇಗೆ ನೆರವೇರಿಸಬೇಕು ಎಂಬುದರ ಮೇಲೆ ವಿರಳವಾದ ಅಥವಾ ಯಾವುದೇ ಒತ್ತು ಇಲ್ಲದಿರುವುದನ್ನು ನಾವು ನೋಡುತ್ತೇವೆ. ಸ್ಪಷ್ಟವಾಗಿ ಆ ಒಂದು ಪ್ರಾರ್ಥನೆಯನ್ನು ನಾವು ಮಾಡಿದ್ದರೆ, ನಮ್ಮ ಜೀವಿತದಲ್ಲಿ ಅದರ ಮೂಲಕ ಉತ್ತರಿಸಬೇಕೆಂದು ಆತನ ಸಂಪೂರ್ಣವಾಗಿ ಉದ್ದೇಶಿಸಿದ್ದಾನೆ.

ದೇವರ ರಾಜ್ಯವು ನಮ್ಮೊಳಗೆ ಇದೆ ಎಂಬುದನ್ನು ತಿಳಿಯಬೇಕು. ಈ ಲೋಕಕ್ಕೆ ಒಳ್ಳೆಯ ಬೀಜಗಳಾಗಿ ಬಿತ್ತಲ್ಪಟ್ಟಂತಹ ದೇವರ ರಾಜ್ಯದ ಪುತ್ರರು ಮತ್ತು ಪುತ್ರಿಯರು ನಾವಾಗಿದ್ದೇವೆಂಬುದನ್ನು ನಾವು ಗುರುತಿಸಬೇಕು. ಈ ಅಧ್ಯಯನವು "ದೇವರ ರಾಜ್ಯದ ದೃಷ್ಟಿಕೋನದಲ್ಲಿ ಹೇಗೆ ಕಾರ್ಯ ಮಾಡಬೇಕು. ಮತ್ತು ಜೀವಿಸಬೇಕು, ನೀವು ಮಾಡುವಂತಹ ಪ್ರತಿಯೊಂದು ಕಾರ್ಯವು ಭೂಮಿಯ ಮೇಲೆ ಅರಸನ ಆಧಿಪತ್ಯ ವಿಸ್ತರಿಸಲು – ನಿಮ್ಮ ಮೂಲಕ ಮತ್ತು ನಿಮ್ಮೊಳಗೆ ಆತನ ಆಳ್ವಿಕೆಯು ಬಿಡುಗಡೆಗೊಳ್ಳಬೇಕೆಂಬುದನ್ನು ಕಲಿಸುತ್ತದೆ. ನಿಮ್ಮ ಜೀವಿತದ ಮೇಲಿರುವ ದೇವರ ರಾಜ್ಯದ ಅಧಿಕೃತ ಆದೇಶವನ್ನು ಹೇಗೆ ನೆರವೇರಿಸಬೇಕು. – ಆತನ ರಾಜ್ಯವು ಬರುವುದನ್ನು ನೋಡಲೂ ಮತ್ತು ನೀವು ಇರುವ ಕಡೆಯಲ್ಲೇ ನಿಮ್ಮ ಮೂಲಕವಾಗಿ ಆತನ ಚಿತ್ತವು ನೆರವೇರಲ್ಪಡಲಿ ಎಂಬುದನ್ನು ನೀವು ಕಲಿಯುತ್ತೀರಿ.

ಸತ್ಯವೇದ ಅಧ್ಯಯನ ರೂಪ ರೇಖೆಗಳು ವೈಯಕ್ತಿಕ ಅಥವಾ ಗುಂಪು ಅಧ್ಯಯನ ಮತ್ತು ಧ್ಯಾನಕ್ಕಾಗಿ ಉದ್ದೇಶಿಸಲ್ಪಟ್ಟಂತಹ ಒಂದು ಸ್ವರೂಪವಾಗಿದೆ. ಸಂಕ್ಷಿಪ್ತ ಟಿಪ್ಪಣಿಗಳನ್ನು ಪ್ರಸ್ತುತಪಡಿಸಿದಾಗಲೂ ನೀವು ಮತ್ತು ನಿಮ್ಮ ಸತ್ಯವೇದ ಅಧ್ಯಯನ ತಂಡವು ಧ್ಯಾನಮಾಡಲೂ ಮತ್ತು ಪವಿತ್ರಾತ್ಮನಿಂದ ತಿಳುವಳಿಕೆಯನ್ನು ಕೇಳಲೂ,

ದೇವರ ವಾಕ್ಯದ ವೈಯಕ್ತಿಕ ಅನ್ವಯ ಮತ್ತು ಸೂಕ್ಷ್ಮ ದೃಷ್ಟಿಯನ್ನು ಹೊಂದಲೂ ನಾವು ಪ್ರೋತ್ಸಾಹಿಸುತ್ತೇವೆ. ಈ ಒಳನೋಟಗಳು ಮತ್ತು ಜೀವನದ ಅನ್ವಯಗಳನ್ನು ಚರ್ಚಿಸಿರಿ, ಹಂಚಿರಿ ಅಥವಾ ದಾಖಲಿಸಿರಿ.

ದೇವರ ರಾಜ್ಯವು ನಮ್ಮಲ್ಲಿ ಮತ್ತು ನಮ್ಮ ವೈಯಕ್ತಿಕ ಜೀವಿತದ ಮೂಲಕವಾಗಿ, ಮತ್ತು ಕ್ರಿಸ್ತ – ಕೇಂದ್ರಿತದ ಮೂಲಕವಾಗಿ ನಮ್ಮ ದೇಶದಲ್ಲಿನ ದೇವರ ರಾಜ್ಯದ ಪ್ರೀತಿಯ ಸಮುದಾಯಗಳ ಮೂಲಕವಾಗಿ ನೋಡಬೇಕೆಂಬುದು ನಮ್ಮ ಆಸೆಯಾಗಿದೆ. ನಿನ್ನ ರಾಜ್ಯವೂ ಬರಲಿ, ಕರ್ತನಾದ ಯೇಸುವೆ!

ಆಶಿಷ್ ರಾಯ್ ಚೂರ್.

# 1. ದೇವರ ರಾಜ್ಯವು ಯೋಜಿಸಲಾಗಿದೆ.

ದೇವರು ಅರಸನಾಗಿ ಮತ್ತು ದೇವರ ರಾಜ್ಯವೂ ಸತ್ಯವೇದದುದ್ದಕ್ಕೂ ಒಂದು ಪ್ರಮುಖ ಸ್ವರೂಪವಾಗಿದೆ. ದೇವರ ರಾಜ್ಯದ ಕುರಿತು ಮಾತನಾಡುವ ಮೂಲಕ ಯೇಸುವು ಸೇವೆಯನ್ನು ಪ್ರಾರಂಭಿಸಿದನು ಮತ್ತು ಮುಗಿಸಿದನು ಎಂಬುದು ಸತ್ಯ ಸಂಗತಿಯಾಗಿದೆ. ಹೊಸ ಒಡಂಬಡಿಕೆಯಲ್ಲಿ ದೇವರ ರಾಜ್ಯ ಅಥವಾ ಪರಲೋಕ ರಾಜ್ಯದ ಕುರಿತು ಮಾತನಾಡುವಂತಹ 150 ವಚನಗಳಿವೆ.

“ರಾಜ್ಯ” ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಗ್ರೀಕ್ ಪದವಾದ ಬಸಿಲಿಯಾ (basiliah) ದಿಂದ ಬಂದಿದೆ. ಇದರ ಅರ್ಥವು ಆಳ್ವಿಕೆ ದೊರೆತನ, ರಾಜ್ಯಭಾರ, ರಾಜ್ಯದ ಒಂದು ಕ್ಷೇತ್ರ ಎಂಬುವುದಾಗಿದೆ ಆದುದ್ದರಿಂದ ರಾಜ್ಯವು ರಾಜನ ಆಳ್ವಿಕೆ, ರಾಜ್ಯಭಾರ ಅಥವಾ ಅರಸನ ದೊರೆತನದ ಕ್ಷೇತ್ರವನ್ನು ಉಲ್ಲೇಖಿಸುತ್ತದೆ.

ಹೊಸ ಒಡಂಬಡಿಕೆಯಲ್ಲಿ “ದೇವರ ರಾಜ್ಯವು” ಮತ್ತು “ಪರಲೋಕ ರಾಜ್ಯ” ಎಂಬ ನುಡಿಗಟ್ಟನ್ನು ನಾವು ನೋಡುತ್ತೇವೆ. ಇವುಗಳನ್ನು ನಾವು ಸಮಾನಾರ್ಥಕವಾಗಿ ಅರ್ಥಮಾಡಿಕೊಳ್ಳುತ್ತೇವೆ. ಆದ್ದರಿಂದ ಅವುಗಳು ವಿನಿಮಯವಾಗಿ ಉಪಯೋಗಿಸಲ್ಪಡಬಹುದು. ದೇವರ ರಾಜ್ಯವು “ಯಾರಿಗೆ” ಸಂಬಂಧಿಸಲ್ಪಟ್ಟಿದ್ದಾಗಿದೆ ಅದು ದೇವರಿಗೆ ಎಂಬುವುದಾಗಿ ದೇವರ ರಾಜ್ಯವು ಉಲ್ಲೇಖಿಸಲ್ಪಟ್ಟಿದೆ. ಪರಲೋಕ ರಾಜ್ಯವು “ಎಲ್ಲಿ” ರಾಜ್ಯವು ಉತ್ಪತ್ತಿಯಾಗಿದೆ ಅದು ಪರಲೋಕ ಅಥವಾ ಆತ್ಮಿಕ ಕ್ಷೇತ್ರದಲ್ಲಿ ಎಂಬುವುದನ್ನು ಉಲ್ಲೇಖಿಸುತ್ತದೆ.

## ಒಂದು ರಾಜ್ಯವು ಸಿದ್ಧಗೊಂಡಿದೆ

**ಮತ್ತಾಯ 25:34.**
**ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ ಲೋಕದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನುಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ**.

**“........ಲೋಕಾದಿಯಿಂದ”**

“ಯಿಂದ” ಅಥವಾ “ಲೋಕದ ಅಸ್ತಿವಾರದ ಮೊದಲು” ಎಂಬ ನುಡಿಗಟ್ಟು ಹೊಸ ಒಡಂಬಡಿಕೆಯಲ್ಲಿ ಸುಮಾರು 10 ಸಾರಿ ಕಾಣಿಸಿಕೊಳ್ಳುತ್ತದೆ. ಇವುಗಳಲ್ಲಿ ಒಂದು ಮತ್ತಾಯ 25:34 ರಲ್ಲಿ ವ್ಯಾಖ್ಯಾನಿಸಿರುವುದಾಗಿದೆ. ಇದು ಜನರಿಗಾಗಿ ಸಿದ್ಧವಾಗಿರುವ ದೇವರ ರಾಜ್ಯದ ಕುರಿತು ಹೇಳುತ್ತದೆ. ಸೃಷ್ಟಿಯ

ಕಾರ್ಯವು ಆರಂಭವಾಗುವುದಕ್ಕೆ ಮುಂಚೆ, ಎಲ್ಲಾ ನಿತ್ಯತ್ವದಿಂದ, ಸಮಯವು ಪ್ರಾರಂಭವಾಗುವ ಮೊದಲೂ, ಅವರು ಅದಕ್ಕಾಗಿ ಮತ್ತು ವಿಶ್ವಾಸಿಗಳಿಗಾಗಿ ವಿನ್ಯಾಸಗೊಂಡಿರುವುದನ್ನು ಸೂಚಿಸುತ್ತದೆ.

**"ಲೋಕದ ಅಸ್ತಿವಾರ**" ಎಂಬ ನುಡಿಗಟ್ಟಿನ ಅರ್ಥವು ಪ್ರಪಂಚದ ಪ್ರಾರಂಭ, ಇತಿಹಾಸದ ಪ್ರಾರಂಭ ಇನ್ನೂ ಮುಂತಾದವುಗಳು, ಇದು ನಿತ್ಯತ್ವದಲ್ಲಿ ಈಗಾಗಲೇ ದೇವರ ಸಂಕಲ್ಪವಾಗಿತ್ತು. ಆಮೇಲೆ ಸಮಯದಲ್ಲಿ ಸರಿಯಾಗಿ ಆತನಿಂದ ಕಾರ್ಯರೂಪಕ್ಕೆ ಬಂದಿತ್ತು. ದೇವರ ಮನಸ್ಸಿನಲ್ಲಿ ನಿತ್ಯತ್ವದ ಒಂದು ಉದ್ದೇಶವನ್ನು ಇದು ವ್ಯಾಖ್ಯಾನಿಸುತ್ತದೆ. ಉದ್ದೇಶವು ನಿತ್ಯತ್ವದ ಯುಗದಲ್ಲಿ ಬಹಳ ಹಿಂದಿನದ್ದು ಆಗಿದೆ.

**"......ರಾಜ್ಯವು ನಿಮಗಾಗಿ ಸಿದ್ಧಗೊಂಡಿದೆ....."**

ದೇವರು , ಲೋಕಕ್ಕೆ ಬುನಾದಿ ಹಾಕುವ ಮುಂಚೆಯೇ, ಜನರು ರಾಜ್ಯವನ್ನು ಸ್ವಾಸ್ತ್ಯವಾಗಿ ಹೊಂದಿಕೊಳ್ಳಬೇಕೆಂಬುದಾಗಿ ಸಿದ್ಧಗೊಂಡಿದಂತಹ ಅಥವಾ ಆತನ ಸಿದ್ಧಮಾಡಿದ ಒಂದು ರಾಜ್ಯವನ್ನು (ಆತನ ಆಳ್ವಿಕೆಯ ಅಧೀನದಲ್ಲಿನ ಒಂದು ಕ್ಷೇತ್ರ) ಹೊಂದಲು ಸಂಕಲ್ಪಿಸಿದ್ದನು.

**"......ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ......"**

ಸ್ವಾಸ್ತ್ಯವಾಗಿ ಅಂದರೆ "ಬಾಧ್ಯಸ್ಥನಾಗಿರು" ಎಂಬುದಾಗಿ ಅರ್ಥ. ರಾಜ್ಯದ ವಾರಸುದಾರನಾಗಿರುವುದು ರಾಜ್ಯದಲ್ಲಿ ಒಬ್ಬ ಆಳು ಅಥವಾ ಅಧೀನದಲ್ಲಿ ಇರುವುದಕ್ಕಿಂತ ತುಂಬಾ ವಿಭಿನ್ನವಾಗಿದೆ. ಒಂದು ರಾಜ್ಯದ ಜನರು ರಾಜ್ಯದ "ಸಹ-ಬಾಧ್ಯಸ್ಥರಾಗಿರಬೇಕೆಂಬುದು ದೇವರ ಸಂಕಲ್ಪವಾಗಿತ್ತು. ಜನರು "ದೊರೆಯಂತೆ" ಮಾತಾನಾಡಬಹುದು. ರಾಜ್ಯದ ಜೊತೆ-ವಾರಸುದಾರರಂತೆ ಅರಸನ ಅಧಿಕಾರವು ಅವರಲ್ಲಿ ಇದೆ. ರಾಜ್ಯದ ಆಡಳಿತ ಮತ್ತು ಕಾರ್ಯಾಚರಣೆಯಲ್ಲಿ ಅವರು ತೊಡಗಿದವರಾಗಿದ್ದಾರೆ.

## ರಾಜ್ಯವು ಪರಿಚಯಿಸಲ್ಪಟ್ಟಿದೆ.

ಒಂದು ರಾಜ್ಯದ ಬಾಧ್ಯಸ್ಥರನ್ನು, ಅರಸರುಗಳ ಒಂದು ರಾಜ್ಯವನ್ನು ಹೊಂದಬೇಕು ಎಂಬುದಾಗಿ ಆತನು ಸಂಕಲ್ಪಸಿದ್ದು ಮತ್ತು ವಿನ್ಯಾಸಗೊಳಿಸಿದ್ದನ್ನು ಆದಿಕಾಂಡದಲ್ಲಿ ದೇವರು ಕಾರ್ಯಾಚರಣೆಗೆ ತರಲು ಪ್ರಾರಂಭಿಸಿದನು.

**ಆದಿಕಾಂಡ 1:27,28**
**27 ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದನು. ದೇವಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು. ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು**
**28 ಇದಲ್ಲದೆ ದೇವರು ಅವರನ್ನು ಆಶೀರ್ವದಿಸಿ-ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ. ಭೂಮಿಯನ್ನು ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯು ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನ ಮಾಡಿರಿ ಅಂದನು.**

ರಾಜ್ಯದ ಬಾಧ್ಯಸ್ಥರನ್ನು ಹೊಂದಬೇಕು ಎಂಬಂತಹ ಆತನ ಸಂಕಲ್ಪವನ್ನು ದೇವರು ಕಾರ್ಯಗತ ಗೊಳಿಸುವಾಗ, ಭೂಮಿಯ ಮೇಲೆ ದೊರೆತನ ಮಾಡಲೂ (ಒಡೆತನ) ಅವರನ್ನು (ಪುರುಷ ಮತ್ತು ಸ್ತ್ರೀ) ಆತನು ಇರಿಸಿದನು. ದೇವರು ಅವರನ್ನು ಆಶೀರ್ವದಿಸಿದಾಗ ಮತ್ತು “ದೊರೆತನ ಮಾಡಿರಿ” ಎಂಬುದಾಗಿ ಆ ಶಾಸನವನ್ನು ಹೊರಡಿಸಿದಾಗ ಭೂಮಿಯ ಮೇಲೆ ಮನುಷ್ಯನ ಮೂಲಕವಾಗಿ ಆತನ ಅಧಿಕಾರವನ್ನು ಆತನು ಬಿಡುಗಡಿಗೊಳಿಸಿದ್ದನು. ಈಗ ಆತನ ರಾಜ್ಯವು ಮಾನವ ಜನಾಂಗದ ಮೂಲಕವಾಗಿ ಭೂಮಿಯ ಮೇಲೆ ವಿಸ್ತರಿಸಲ್ಪಟ್ಟಿದೆ. ಸ್ವತಃ ದೇವರಿಂದ ಕೊಡಲ್ಪಟ್ಟಂತಹ ಅಧಿಕಾರ ಮತ್ತು ಭೂಮಿಯ ಮೇಲೆ ದೊರೆತನ, ನಿಯೋಜಿತ ಬಲವನ್ನು ಮಾನವ ಕುಲವು ಹೊಂದಿದೆ.

ಹೇಗಾದರೂ ಈ ಪ್ರಕ್ರಿಯೆಯು “ಮನುಷ್ಯನ ಬೀಳುವಿಕೆಯಿಂದ” ತಾತ್ಕಾಲಿಕವಾಗಿ ಅಡ್ಡಿಪಡಿಸಲಾಗಿದೆ. ಈ ಒಂದು ಸನ್ನಿವೇಶದಲ್ಲಿ ಎರಡು ಪ್ರಮುಖ ಸಂಗತಿಗಳು ಜರುಗಿದವು, ಮೊದಲನೆಯದಾಗಿ, ಭೂಮಿಯ ಮೇಲಿನ ಒಡೆತನವು ತಾತ್ಕಾಲಿಕವಾಗಿ ದುರಾತ್ಮ ಕೈಗೆ ವರ್ಗಾಯಿಸಲ್ಪಟ್ಟಿತ್ತು. ಎರಡನೆಯದಾಗಿ “ರಾಜ್ಯದ ಬಾಧ್ಯಸ್ಥರಾಗಿರುವುದು” ಎಂಬಂತಹ ಮನುಷ್ಯನ ಪರಿಕಲ್ಪನೆ (ತಿಳುವಳಿಕೆ ಅಥವಾ ಗ್ರಹಿಕೆ) ದುರಾತ್ಮನ ತೀವ್ರವಾದ ದಬ್ಬಾಳಿಕೆಯ ಅಡಿಯಲ್ಲಿ ಸಂಪೂರ್ಣವಾಗಿ ವಿಕಾರಗೊಂಡಿದೆ.

ಆದ್ದರಿಂದ ದೇವರು ವಿಮೋಚನೆಯ ಸಂಕಲ್ಪವನ್ನು ಮಾಡಿದನು. (ಆತನಿಗೆ ಮೊದಲೇ ಇದು ಸಹ ತಿಳಿದಿತ್ತು). ಅದು ಅಂತಿಮವಾಗಿ ಒಂದು ರಾಜ್ಯದ ಬಾಧ್ಯಸ್ಥರನ್ನು ಸ್ಥಾಪಿಸುವ ಯೋಜನೆಗೆ ದಾರಿ ಮಾಡಿಕೊಟ್ಟಿತು.

ವಿಮೋಚನೆಯಲ್ಲಿ ಇತರೆ ಸಂಗತಿಗಳ ಮಧ್ಯದಲ್ಲಿ, ದೇವರು ಈ ವಿಶ್ವದ ಮನುಷ್ಯನ ಒಡೆತನವನ್ನು ಪುನಃ ಸ್ವಾಧೀನ ಪಡಿಸಿಕೊಟ್ಟನು ಹಾಗೆಯೇ “ರಾಜ್ಯದ ಬಾಧ್ಯಸ್ಥರಾಗಿರುವುದರ” ವಿಮೋಚನೆ - ಮನುಷ್ಯನ ಪರಿಕಲ್ಪನೆಯನ್ನು ಪುನಃ ಕಟ್ಟಿಕೊಟ್ಟನು.

## ರಾಜ್ಯವು ಮತ್ತೆ ಪರಿಚಯಿಸಲಾಯಿತು

ಸ್ನಾನಿಕನಾದ ಯೋಹಾನನು ದೇವರ ರಾಜ್ಯದ ಆಗಮನದ ಬಗ್ಗೆ ಸಾರಲೂ ಪ್ರಾರಂಭಿಸಿದ ಮೊದಲ ವ್ಯಕ್ತಿಯಾಗಿದ್ದಾನೆ. “ಪರಲೋಕ ರಾಜ್ಯವು ಸಮಿಪವಾಯಿತು ದೇವರ ಕಡೆಗೆ ತಿರುಗಿಕೊಳ್ಳಿರಿ” (ಮತ್ತಾಯ 3:2) ಎಂಬುದಾಗಿ ಅವನು ಸಾರಿದನು.

ದೇವರ ರಾಜ್ಯದ ಆಗಮನವನ್ನು ಸಾರುವುದರಿಂದ ಯೇಸುವು  ಆತನ ಸೇವೆಯನ್ನು ಪ್ರಾರಂಭಿಸಿದನು.

**ಮತ್ತಾಯ 4:17**
**ಅಂದಿನಿಂದ  ಯೇಸು ಪರಲೋಕರಾಜ್ಯವು ಸಮಿಪಿಸಿತು ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಸಾರಿ ಹೇಳುವದಕ್ಕೆ ಪ್ರಾರಂಭಿಸಿದನು.**

ದೇವರ ರಾಜ್ಯದ ಶುಭ ಸಂದೇಶವನ್ನು ಯೇಸುವು ಸಾರುತ್ತಾ ಹೊರಟನು.

**ಮತ್ತಾಯ 4:23**
**ಬಳಿಕ ಯೇಸು ಗಲಿಲಾಯದಲ್ಲೆಲ್ಲಾ ತಿರುಗಾಡಿ ಅಲ್ಲಿಯವರ ಸಭಾಮಂದಿರಗಳಲ್ಲಿ ಉಪದೇಶಮಾಡುತ್ತಾ ಪರಲೋಕ ರಾಜ್ಯದ ಸುವಾರ್ತೆಯನ್ನು ಸಾರಿ ಹೇಳುತ್ತಾ ಜನರ ಎಲ್ಲಾ ತರದ ರೋಗಗಳನ್ನೂ ಎಲ್ಲಾ ತರದ ಬೇನೆಗಳನ್ನೂ ವಾಸಿಮಾಡುತ್ತಾ ಬಂದನು.**

ಸ್ನಾನಿಕನಾದ ಯೋಹಾನನ ಸಮಯದಿಂದ,  ದೇವರ ರಾಜ್ಯವು ಭೂಮಿಗೆ ಅದರ ಪ್ರವೇಶ ಹೊಂದಲೂ ಪ್ರಾರಂಭಿಸಿತು. “ಕೈಯಲ್ಲಿದೆ” ಎಂಬುದು ಸಮೀಪವಾಗಿದೆ ಅಥವಾ ವ್ಯಾಪ್ತಿಯಲ್ಲಿದೆ, ಪ್ರತಿಯೊಬ್ಬರಿಗೂ ಪ್ರವೇಶವಿದೆ ಎಂಬುದಾಗಿ ಅರ್ಥ.

ದೇವರ ರಾಜ್ಯದ ಅರಸನು, ಆತನ ಜನರು ದೇವರ ರಾಜ್ಯದ ಬಾಧ್ಯಸ್ಥರಾಗಿರಬೇಕೆಂಬುದಾಗಿ ಆತನು ಸಂಕಲ್ಪಿಸಿದ್ದನ್ನು ಪುನಃ ಸ್ವಾಧೀನಪಡಿಸಿಕೊಡಲೂ ಲೋಕಕ್ಕೆ ಹೆಜ್ಜೆಯನ್ನಿಟ್ಟಿನು. ದೇವರ ರಾಜ್ಯದ ಬಾಧ್ಯಸ್ಥರಿಂದ ಆತನ ರಾಜ್ಯವು ಕಾರ್ಯಗತಗೊಳಿಸಲು ಆತನ ಸಂಕಲ್ಪಿಸಿದ್ದಂತದಕ್ಕಾಗಿ ಭೂಮಿಯ ಮೇಲೆ ದೇವರ ರಾಜ್ಯದಲ್ಲಿ ಆತನು ವೈಯಕ್ತಿಕವಾಗಿ ದಾರಿ ತೋರಿಸುವವನಾಗಿ ಬಂದನು. ಅನೇಕ ಭೂಲೋಕದ ರಾಜರುಗಳು ತಮ್ಮ ರಾಜ್ಯವನ್ನು ನಿರ್ದಿಷ್ಟ ಕ್ಷೇತ್ರದ ಮೇಲೆ ವಿಸ್ತರಿಸಬೇಕೆಂದು ಆಸೆಪಟ್ಟಾಗ ಅವರು ಸುಮ್ಮನೆ ಒಬ್ಬ ನಾಯಕನಿಂದ ನಡೆಸಲ್ಪಟ್ಟ ಸೈನ್ಯವನ್ನು ಸ್ವಾಧೀನಪಡಿಸಿಕೊಳ್ಳಲೂ ಕಳುಹಿಸುತ್ತಾರೆ. ಹೇಗಾದರು ಈ ಅರಸನು ವಿಭಿನ್ನವಾದವನು. ಆತನ ಬರುವಿಕೆಯನ್ನು ಸಾರಲು ಯೋಹಾನನೆಂಬ ಹೆಸರಿನ ಒಬ್ಬ ಪೂರ್ವಿಕನನ್ನು ಆತನು

ಕಳುಹಿಸಿದನು. ಮತ್ತು ಆಮೇಲೆ ಆತನ ವೈಯಕ್ತಿಕವಾಗಿ ಭೂಮಿಯ ಮೇಲೆ ದೇವರ ರಾಜ್ಯವನ್ನು ತರಲು ಬಂದನು.! ಈ ದೇವರ ರಾಜ್ಯದ ಸ್ವಭಾವ, ಭೂಮಿಯ ಮೇಲೆ ಆತನ ರಾಜ್ಯದ ಭಾಗವಾಗಿ ಕಾರ್ಯಗತಗೊಳಿಸುವುದು ಮತ್ತು ಅದರಂತೆಯೇ ಜೀವಿಸುವುದು ಅಂದರೇನು ಎಂಬುದುನ್ನು ಖುದ್ದಾಗಿ ನಮಗೆ ಆತನು ಪ್ರಕಟಿಸಿದನು.

ಭೂಮಿಯ ಮೇಲೆ ಪರಲೋಕ ರಾಜ್ಯದ ಮಾದರಿಯನ್ನು ನಮಗೆ ಆತನು ನೀಡಿದ್ದಾನೆ ಮತ್ತು ಆಸಕ್ತಿಯುಳ್ಳ ಪ್ರತಿಯೊಬ್ಬರು ದೇವರ ರಾಜ್ಯಕ್ಕೆ ಬರಲು ಒಂದು ತೆರೆದ ಆಹ್ವಾನವನ್ನು ನೀಡಿದ್ದಾನೆ.

## ಆತ್ಮಿಕ ಮತ್ತು ನೈಸರ್ಗಿಕ ರಾಜ್ಯ

ದೇವರ ರಾಜ್ಯದ ಒಂದು ಆತ್ಮಿಕ ಅಳತೆಯಿದೆ- ಇದು ಜನರ ಜೀವಿತಗಳು ಮತ್ತು ಹೃದಯದಲ್ಲಿ ಅರಸನ ದೊರೆತನವು ಸ್ಥಾಪಿಸಲ್ಪಡುವುದಾಗಿದೆ. ಇಲ್ಲಿಂದ ದೇವರ ರಾಜ್ಯವು ಸುತ್ತಲಿನ ಪ್ರತಿಯೊಬ್ಬರ ಮೇಲೆ ಪರಿಣಾಮ ಬೀರುತ್ತದೆ ಅಥವಾ ವ್ಯಾಪಿಸಲೂ ಪ್ರಾರಂಭಗೊಳ್ಳುತ್ತದೆ.

ದೇವರ ರಾಜ್ಯದ ಸ್ವಾಭಾವಿಕ ಅಳತೆಯಿದೆ – ಯೇಸು ಕ್ರಿಸ್ತನು ಯೆರೊಸಲೇಮಿನಿಂದ ಸಹಸ್ರುವರ್ಷಗಳು ಮತ್ತು ಆದನಂತರ ಆಳ್ವಿಕೆ ಮಾಡುವಾಗ ಅಷ್ಟು ದೂರವಿಲ್ಲದ ಭವಿಷ್ಯದಲ್ಲಿ ದೇವರ ರಾಜ್ಯದ ಅಕ್ಷರಶಃ ಸರ್ಕಾರ ಸ್ಥಾಪಿಸುವುದಾಗಿದೆ. ಆ ಒಂದು ರಾಜ್ಯದ ಸರ್ಕಾರವು ವಿಶ್ವಾಸಿಗಳಿಂದ ದೇವರ ರಾಜ್ಯದ ವಾರಸುದಾರರಿಂದ ಆಡಳಿತ ನಡೆಸಲ್ಪಡುತ್ತದೆ.

ಸ್ನಾನಿಕನಾದ ಯೋಹಾನನು ಮತ್ತು ಕರ್ತನಾದ ಯೇಸುವು ಪರಲೋಕ ರಾಜ್ಯದ ಆಗಮನದ ಕುರಿತು ಸಾರಲೂ ಆರಂಭಿಸಿದಾಗ, ಅವರು ದೇವರ ಆತ್ಮಿಕ ರಾಜ್ಯವನ್ನು ಪರಿಚಯಿಸಿದರು.

ನಾವು ಪ್ರಸ್ತುತವಾಗಿ ಆತ್ಮಿಕ ಅಳತೆಯ ದೇವರ ರಾಜ್ಯವು ನಮ್ಮಲ್ಲಿ ಮತ್ತು ನಮ್ಮ ಮೂಲಕವಾಗಿ ಕಾರ್ಯನಿರತವಾಗಿರುವಂತಹ ಕಾಲ ಅಥವಾ ಯುಗದಲ್ಲಿ ನಾವಿದ್ದೇವೆ. ಹೀಗೆ ಅರಸನ ದೊರೆತನವನ್ನು ನಮ್ಮ ಭೂಲೋಕದ ಜೀವಿತಗಳ ಪ್ರತಿಯೊಂದು ರೂಪಗಳಲ್ಲಿ ವಿಸ್ತರಿಸಬೇಕು.

# ದೇವರ ರಾಜ್ಯಕ್ಕಾಗಿ ಜನಿಸಿದವರು

**ಯೋಹಾನ 3:3,5**
**3 ಅದಕ್ಕೆ ಯೇಸು ನಾನು ನಿನಗೆ ನಿಜನಿವಾಗಿ ಹೇಳುತ್ತೇನೆ ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು ಅಂದನು**
**5 ಅದಕ್ಕೆ ಯೇಸು ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು**.

ಒಬ್ಬನು ಹೇಗೆ ದೇವರ ರಾಜ್ಯದ ಭಾಗವಾಗಿ ಕಂಡುಬರಬಹುದು? ಕರ್ತನಾದ ಯೇಸುವು ದೇವರ ರಾಜ್ಯವನ್ನು ಕಾಣಲು ಒಬ್ಬನು "ಹೊಸದಾಗಿ ಹುಟ್ಟಬೇಕು" ಅಂದರೆ ದೇವರ ರಾಜ್ಯದ ಭಾಗವಾಗಿರಬೇಕು ಅಥವಾ ಭಾಗವಹಿಸಬೇಕು ಎಂಬುದಾಗಿ ಹೇಳಿದ್ದಾನೆ. ಹೊಸದಾಗಿ ಹುಟ್ಟುವುದು ಮೇಲಿನಿಂದ ಹುಟ್ಟುವುದಾಗಿದೆ. ಆತನ ವಾಕ್ಯ ಮತ್ತು ಆತನ ಆತ್ಮನ ಕೆಲಸದ ಮೂಲಕವಾಗಿ ಮಾನವನ ಹೃದಯಕ್ಕೆ ದೇವರು ಮಾತ್ರವೇ ಪಾಲುಕೊಡುವ ಒಂದು ಆತ್ಮಿಕ ರೂಪಾಂತರ ಪಡೆದುಕೊಳ್ಳುವುದು ಇದಾಗಿದೆ. ಹೊಸದಾಗಿ ಹುಟ್ಟಿರುವುದು ದೇವರ ರಾಜ್ಯಕ್ಕೆ ದಾರಿ ತೋರಿಸುತ್ತದೆ. ಆ ಮೇಲೆ ನಾವು ಭೂಮಿಯ ಮೇಲೆ ನಮ್ಮ ಜೀವಿತದ ಎಲ್ಲಾ ರೂಪಗಳಲ್ಲಿ ನಮ್ಮಲ್ಲಿ ಅನುಭವಿಸಲು ಪ್ರಾರಂಭಿಸುತ್ತೇವೆ. ನಾವು ಆತನ ರಾಜ್ಯದಲ್ಲಿದ್ದೇವೆ ಮತ್ತು ಆತನ ರಾಜ್ಯವು ನಮ್ಮಲ್ಲಿ ಇದೆ.

**ಕೊಲೊಸ್ಸೆಯವರಿಗೆ 1:12,13.**
**12ಬೆಳಕಿನ ರಾಜ್ಯದೊಳಗೆ ದೇವ ಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವುದಕ್ಕೆ ನಿಮ್ಮನ್ನು ಯೋಗ್ಯರನ್ನಾಗಿ ಮಾಡಿದ ತಂದೆಗೆ ಕೃತಜ್ಞತಾ ಸ್ತುತಿ ಮಾಡುವವರಾಗಿರಬೇಕೆಂತಲೂ ದೇವರನ್ನು ಬೇಡಿಕೊಳ್ಳುತ್ತೇನೆ**
**13 ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು.**

ನಾವು ಹೊಸದಾಗಿ ಹುಟ್ಟಿದಿಂದ ಪೌರತ್ವದ ವರ್ಗಾವಣೆಯು ನಡೆಯುತ್ತದೆ. ನಾವು ಅಂಧಕಾರದ ರಾಜ್ಯದಿಂದ ಬಿಡಿಸಿ ಯೇಸು ಕ್ರಿಸ್ತನ ರಾಜ್ಯದೊಳಗೆ ಸೇರಿಸಲ್ಪಟ್ಟದ್ದೇವೆ. ಈ ಎರಡು ರಾಜ್ಯಗಳು ಬೆಳಕು ಮತ್ತು ಅಂಧಕಾರದಂತೆ ತದ್ವಿರುದ್ಧವಾಗಿವೆ. ಆದುದರಿಂದ ಒಂದು ಹೊಸ ದೇವರ ರಾಜ್ಯಕ್ಕೆ ಪರಲೋಕ ರಾಜ್ಯಕ್ಕೆ ಹೊಸದಾಗಿ ಹುಟ್ಟಿದವರಾದಂತಹ ಜನರು ಈಗ ಭಾಗವಾಗಿರುವಂತಹ ಹೊಸ ದೇವರ ರಾಜ್ಯದಲ್ಲಿ ಜೀವಿಸಲು ಅನೇಕ "ಹೊಂದಾಣಿಕೆಗಳು" ಅಥವಾ "ಅಳವಡಿಕೆಗಳನ್ನು" ಮಾಡುವುದು ಅವಶ್ಯಕವಾಗಿದೆ. ನಮ್ಮ ಅಧ್ಯಯನವನ್ನು ನಾವು ಮುಂದುವರೆಸುವಾಗ ಇದನ್ನು ನಾವು ಕಂಡುಹಿಡಿಯುತ್ತೇವೆ.

# ದೇವರ ರಾಜ್ಯದ ಪುತ್ರರು

**ಮತ್ತಾಯ 13:36-40**
**36 ಆಗ ಯೇಸು ಜನರನ್ನು ಬಿಟ್ಟು ಮನೆಗೆ ಹೋದ ಮೇಲೆ ಆತನ ಶಿಷ್ಯರು ಬಂದು ಹೊಲದಲ್ಲಿಯಹಣಜಿಯ ಸಾಮ್ಯದ ಅರ್ಥವನ್ನು ನಮಗೆ ಹೇಳು ಅಂದರು**
**37 ಅದಕ್ಕಾತನು ಒಳ್ಳೆಯ ಬೀಜವನ್ನು ಬಿತ್ತುವವನೆಂದರೆ ಮನುಷ್ಯ ಕುಮಾರನು**
**38 ಹೊಲವೆಂದರೆ ಈ ಲೋಕ ಒಳ್ಳೆಯ ಬೀಜವೆಂದರೆ ಪರಲೋಕ ರಾಜ್ಯದವರು. ಹಣಜಿ ಎಂದರೆ ಸೈತಾನನವರು**
**39 ಅದನ್ನು ಬಿತ್ತುವ ವೈರಿ ಅಂದರೆ ಸೈತಾನನು ಸುಗ್ಗೀಕಾಲ ಅಂದರೆ ಯುಗದ ಸಮಾಪ್ತಿ ಕೊಯ್ಯುವವರು ಅಂದರೆ ದೇವದೂತರು**
**40 ಹೀಗಿರಲಾಗಿ ಹೇಗೆ ಹಣಜಿಯನ್ನು ಆರಿಸಿ ತೆಗೆದು ಸುಟ್ಟು ಬಿಡುತ್ತಾರೋ ಹಾಗೆಯೇ ಯುಗದ ಸಮಾಪ್ತಿಯಲ್ಲಿ ನಡೆಯುವುದು**.

ದೇವರ ರಾಜ್ಯಕ್ಕಾಗಿ ಹುಟ್ಟಿದವರಾಗಿ, ದೇವರ ರಾಜ್ಯದಲ್ಲಿನ ನಮ್ಮ ಸ್ಥಾನದಲ್ಲಿನ ಸಂಬಂಧದಲ್ಲಿ ಪ್ರಪಂಚದಲ್ಲಿನ ನಮ್ಮ ಸ್ಥಾನವನ್ನು ಈಗ ನಾವು ಅರ್ಥಮಾಡಿಕೊಳ್ಳಬೇಕು. ಯೇಸುವು ದೇವರ ರಾಜ್ಯದ ಸಾಮ್ಯಗಳಲ್ಲಿನ ಒಂದರಲ್ಲಿ ನಮ್ಮನ್ನು "ದೇವರ ರಾಜ್ಯದ ಪುತ್ರರು" ಎಂಬುದಾಗಿ ಉಲ್ಲೇಖಿಸಿದ್ದಾನೆ. ಈ ಲೋಕದಲ್ಲಿ ರಾಜ್ಯದ ಪುತ್ರರು ಮತ್ತು ದುಷ್ಟನ ಪುತ್ರರು ಇದ್ದಾರೆ. ದೇವರ ಮನುಷ್ಯನಾದ ಯೇಸುವು ಉದ್ದೇಶ ಪೂರ್ವಕವಾಗಿ ಲೋಕಕ್ಕೆ ದೇವರ ರಾಜ್ಯದ ಪುತ್ರರಾಗಿ ನಮ್ಮನ್ನು "ಬಿತ್ತಿದ್ದಾನೆ". ನಿಶ್ಚಯವಾಗಿ ಈ ಪ್ರಪಂಚಕ್ಕೆ ಒಂದು ಉದ್ದೇಶದೊಡನೆ "ಬಿತ್ತಿದ್ದಾನೆ". ಅದು ದೇವರ ರಾಜ್ಯದ ಪುತ್ರರಾಗಿರುವುದಾಗಿರಬಹುದು". ಭೂಮಿಯ ಮೇಲೆ ದೇವರ ರಾಜ್ಯವು ಬಿಡುಗಡೆಯಾಗುವುದರೊಡನೆ ಮಾಡಬೇಕಾದುದಾಗಿರಬಹುದು. ನಮ್ಮ ಯಾವುದೇ ವೈಯಕ್ತಿಕವಾಗಿ ನಾವು ಸಾಧಿಸಲು ಬಯಸುವಂತಹ ಕನಸ್ಸು ಅಥವಾ ಗುರಿಗಳಿಗೆ ಬದಲಾಗಿ ಅತ್ಯಧಿಕವಾದದ್ದನ್ನು ದೇವರ ರಾಜ್ಯದ ಭಾಗವಾಗಿ ಮಾಡಲೂ ಈ ಲೋಕದಲ್ಲಿ ನಮ್ಮ ಸ್ಥಾನ ಹೊಂದಿದ್ದೇವೆ ಎಂಬುದು ಇದರ ಅರ್ಥವಾಗಿದೆ . ನಾವುಗಳು ಪ್ರಪಂಚಕ್ಕೆ ಪ್ರತಿನಿಧಿಗಳಾಗಿ ಅಥವಾ ದೇವರ ರಾಜ್ಯದ ರಾಯಭಾರಿಗಳಾಗಿ , ಕಾರ್ಯಭಾರಿಗಳಾಗಿ , ಕಳುಹಿಸಲ್ಪಟ್ಟಿದ್ದೇವೆ ದೇವರ ರಾಜ್ಯದ ಪುತ್ರರು (ಪುತ್ರಿಯರು) ಆಗಿರುವಂತೆ ನಮ್ಮ ಪ್ರಪಂಚಕ್ಕೆ ಅರಸನ ದೊರೆತನ , ರಾಜ್ಯಭಾರ , ಪ್ರಭಾವವನ್ನು ತರಲು – ದೇವರ ರಾಜ್ಯವನ್ನು ತರಲೂ ನಾವು ಇಲ್ಲಿದ್ದೇವೆ.

## "ದೇವರ ರಾಜ್ಯದ" ದೃಷ್ಟಿಕೋನದಿಂದ ಕಾರ್ಯನಡೆಸುವುದು

ನಾವು ದೇವರ ರಾಜ್ಯದ ಕುರಿತ ಈ ಅಧ್ಯಯನವನ್ನು ಮುಂದುವರಿಸುವಾಗ ನಾವೆಲ್ಲರೂ "ದೇವರ ರಾಜ್ಯದ" ದೃಷ್ಟಿಕೋನದಿಂದ ಕಾರ್ಯ ನಡೆಸುವವರು ಮತ್ತು ಜೀವಿಸಲೂ ಪ್ರಾರಂಭಿಸುವಂತಹದ್ದನ್ನು ನಮ್ಮ ಜೀವಿತದಲ್ಲಿ ಜರುಗುವುದನ್ನು ನೋಡಲೂ ನಾವು ಅಪೇಕ್ಷಿಸುವ ಒಂದು ಅಂಶವಾಗಿದೆ ಯಾಕೆಂದರೆ ಇದು ದೇವರ ಮೂಲ

ಸಂಕಲ್ಪವಾಗಿದೆ . ಭೂಮಿಯ ಮೇಲೆ ನಮಗಾಗಿ ಸಿದ್ಧಗೊಂಡಿರುವ ದೇವರ ರಾಜ್ಯವನ್ನು ನಾವು ಬಾಧ್ಯವಾಗಿ ಹೊಂದ ಬೇಕೆಂಬುದು ಆತನ ಸಂಕಲ್ಪವಾಗಿದೆ.

**ನೀವು ಮಾಡುವಂತಹ ಎಲ್ಲವನ್ನೂ ಭೂಮಿಯ ಮೇಲೆ ಅರಸನ ದೊರೆತನದ ವಿಸ್ತಾರಕ್ಕಾಗಿ ಮಾಡಲೂ ಗ್ರಹಿಸಿಕೊಳ್ಳಿರಿ ಆತನ ಆಳ್ವಿಕೆಯು ನಿಮ್ಮಲ್ಲಿ ಮತ್ತು ನಿಮ್ಮ ಮೂಲಕವಾಗಿ ಬಿಡುಗಡೆಗೊಳ್ಳುತ್ತದೆ.**

# 2.ಅರಸನು ಮತ್ತು ಆತನ ರಾಜ್ಯ

## ದೇವರು , ಅರಸನು

ಸತ್ಯವೇದವು ದೇವರ ಸ್ವಭಾವ ಮತ್ತು ಗುಣವನ್ನು ಅನೇಕ ವಿಭಿನ್ನ ಮಾರ್ಗಗಳಾದ – ತಂದೆಯಾಗಿ, ರಕ್ಷಕನಾಗಿ, ಸ್ವಸ್ಥತೆಮಾಡುವಾತನು ಮುಂತಾದವುಳಿಂದ ಪ್ರಕಟಿಸುತ್ತದೆ. ಇವೆಲ್ಲವುಗಳ ಮಧ್ಯದಲ್ಲಿ ದೇವರ ನಿತ್ಯನಾದ ಅರಸನು ಮತ್ತು ಸರ್ವಶಕ್ತನು ಎಂಬುದಾಗಿಯು ಸತ್ಯವೇದ ಪ್ರಕಟಿಸುತ್ತದೆ. ಕೊನೆಗೊಳ್ಳದ , ಜಗ್ಗಿಸಲ್ಪಡದ ರಾಜ್ಯದ ಬಲಿಷ್ಟವಾದ ಆಡಳಿತಗಾರನು ಆತನು ಆಗಿದ್ದಾನೆ . ದೇವರ ಜನರಾಗಿ , ನಮ್ಮ ದೇವರ ಈ ಅಳತೆಯನ್ನು ಗುರುತಿಸುವುದನ್ನು ಕಲಿಯಬೇಕು ಮತ್ತು ದೇವರಿಗೆ, ಅರಸನು ಎಂಬುದಾಗಿ ಆತನೊಂದಿಗೆ. ಸಂಬಂಧ ಹೊಂದಬೇಕು. ಆತನ ರಾಜ್ಯದಲ್ಲಿ ಆತನು ಯಾವರೀತಿ ಕಾರ್ಯಗತಗೊಳಿಸುತ್ತಾನೆಂಬುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನಮಗೆ ಚಿರಪರಿಚಿತವಿರುವ ರಾಜ್ಯಗಳು ಮತ್ತು ರಾಜರುಗಳಿಗಿಂತ ಅನೇಕ ಸಂದರ್ಭಗಳಲ್ಲಿ ಇದು ವಿಭಿನ್ನವಾಗಿರುತ್ತದೆ.

**ಕೀರ್ತನೆಗಳು 145 : 1 , 10 – 13**
**1 ,ನಮ್ಮ ದೇವರೇ ಒಡೆಯನೇ ನಿನ್ನನ್ನು ಘನಪಡಿಸುವೆನು. ನಿನ್ನ ನಾಮವನ್ನು ಯುಗಯುಗಾಂತರ ಗಳಲ್ಲಿಯೂ ಕೊಂಡಾಡುವೆನು.**
**10 ಯೆಹೋವನೇ ನಿನ್ನ ಸೃಷ್ಟಿಯೆಲ್ಲವು ನಿನ್ನನ್ನು ಸ್ತುತಿಸುವದು ನಿನ್ನ ಭಕ್ತರು ನಿನ್ನನ್ನು ಕೊಂಡಾಡುವರು.**
**11 ಅವರು ನಿನ್ನ ರಾಜ್ಯ ಮಹತ್ತನ್ನು ಪ್ರಸಿದ್ಧಪದಿಸುವರು. ನಿನ್ನ ಶೂರಕೃತ್ಯಗಳನ್ನೂ**
**12 ಹೀಗೆ ಮಾನವರು ನಿನ್ನ ಶೂರಕೃತ್ಯಗಳನ್ನೂ ನಿನ್ನ ರಾಜ್ಯದ ಮಹಾಪ್ರಭಾವವನ್ನೂ ಗ್ರಹಿಸಿಕೊಳ್ಳುವರು.**
**13 ನಿನ್ನ ರಾಜ್ಯವು ಶಾಶ್ವತವಾಗಿದೆ.ನಿನ್ನ ಅಳ್ವಿಕೆಯು ತಲತಲಾಂತರಕ್ಕೂ ಇರುವುದು**.

ದೇವರನ್ನು ಅರಸನಂತೆ ಸ್ತುತಿ ಮತ್ತು ಆರಾಧನೆ ನಾವು ಕೊಂಡಾಡುತ್ತೇವೆ. ಆತನ ರಾಜ್ಯದ ಮಹಿಮೆ ಮತ್ತು ಆತನ ಬಲವನ್ನು ನಾವು ಮಾತಾಡುತ್ತೇವೆ. ಆತನ ರಾಜ್ಯವೂ ನಿತ್ಯತ್ವದ ರಾಜ್ಯವೆಂಬುದು ನಮಗೆ ಗೊತ್ತಿದೆ .

ಸ್ತೋತ್ರವು, ನಮ್ಮ ಅರಸನ ಶ್ರೇಷ್ಠತೆ, ಎಲ್ಲಾ ಭೂಲೋಕದ ಸರ್ವಶಕ್ತ ಸೌರ್ವಭೌಮ ಆಡಳಿತಗಾರನೆಂಬುದರ ಗುರುತು ಆಗಿದೆ. ನಮ್ಮ ಜೀವಿತಗಳ ಮೇಲೆ ಆತನ ಒಡೆತನದ ಅಭಿವ್ಯಕ್ತತೆ ಇದಾಗಿದೆ. ಇದು ಆತನ ಶ್ರೇಷ್ಟತೆ, ಅನುಕಂಪದ ಒಂದು ಆಚರಣೆಯಾಗಿದೆ. ಮತ್ತು ನಮ್ಮ ಮೇಲೆ ರಾಜ್ಯಭಾರವಾಗಿರುತ್ತದೆ. ಎಲ್ಲಾದರ ಮೇಲೆ ಆತನ ದೊರೆತನದ ಒಂದು ಘೋಷಣೆಯಾಗಿದೆ.

“ದೇವರನ್ನು ಸಂಕೀರ್ತಿಸಿರಿ, ಕೀರ್ತಿಸಿರಿ, ನಮ್ಮ ಅರಸನನ್ನು ಕೀರ್ತಿಸಿರಿ, ಕೀರ್ತಿಸಿರಿ. ದೇವರು ಭೂಲೋಕಕ್ಕೆಲ್ಲಾ ರಾಜನು ಆತನನ್ನು ಜ್ಞಾನಯುಕ್ತರಾಗಿ ಕೀರ್ತಿಸಿರಿ” (ಕೀರ್ತನೆಗಳು 47 : 6,7).

**ಕೀರ್ತನೆಗಳು 44 : 4**
**ದೇವರೇ, ನೀನೇ ನನ್ನು ಅರಸನು. ಯಾಕೋಬವಂಶಕ್ಕೆ ಜಯಪ್ರದನಾಗು.**(ಇಬ್ರಿಯ ಭಾಷೆಯಲ್ಲಿ . ಯೆಶೂವಾ (yeshua) = ರಕ್ಷಣೆ , ಬಿಡುಗಡೆ ಸಮೃದ್ಧಿ , ಸ್ವಸ್ಥತೆ).

ಪ್ರಾರ್ಥನೆಯಲ್ಲಿ ಕೀರ್ತನೆಗಾರನು, ಆತನ ಸರ್ವಶಕ್ತ ಅಧಿಕಾರವನ್ನು ಗುರುತಿಸಲು, ಮತ್ತು ಇಸ್ರಾಯೇಲ್ಯರಿಗಾಗಿ ಜಯಪ್ರದನಾಗಿರಲೂ (ತೀರ್ಪುಗಳನ್ನು ನೀಡಿ) ಆಜ್ಞಾಪಿಸಲೂ ಆತನ ಕೇಳಲೂ ದೇವರ ಮೇಲೆ ಕರೆಯುತ್ತಿದ್ದಾನೆ. ಇದ್ದನ್ನು ನಾವು ಮತ್ತು ನಿವುಗಳು ಮಾಡಲೂ ಕಲಿಯುವಂತದ್ದಾಗಿದೆ- ನಮ್ಮ ಪರವಾಗಿ ತೀರ್ಪುಗಳನ್ನು ಪ್ರಕಟಿಸಲೂ ನಮ್ಮ ರಾಜನನ್ನು ಕರೆಯಲು, ಏನನ್ನಾದರೂ ಮಾಡಬೇಕಂದು ಅವನು ಆದೇಶಿಸಿದಾಗ ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಸಂಪೂರ್ಣವಾಗಿ ತಿಳಿದುಕೊಳ್ಳಿ!

ಇಲ್ಲಿ ಕೆಲವು ಸ್ಪಷ್ಟ ಆದರೆ ಜ್ಞಾನೋದಯ ಸಂಗತಿಗಳು ಅರಸನು ಮತ್ತು ಆತನ ರಾಜ್ಯದ ಕುರಿತು ಇದೆ: (ಇವುಗಳಲ್ಲಿ ಕೆಲವು ಒಳನೋಟಗಳು, ಮೈಲ್ಸ್ ಮುನ್ರೋರವರ “ರಾಜ್ಯವನ್ನು ಮರು ಶೋಧಿಸುವುದು” (ಡೆಸ್ಟಿನಿ ಇಮೇಜ್ ಪಬ್ಲಿಷರ್, 2004 , ಐ ಎಸ್ ಬಿ ಎನ್ 0 – 7684 – 2217 -50) , ಎಂಬ ಪುಸ್ತಕದಿಂದ ಪಡೆದುಕೊಳ್ಳಲಾಗಿದೆ)

1. ಅರಸನಾಗಿ, ದೇವರು ಅಂತಿಮ ಅಧಿಕಾರವಾಗಿದ್ದಾನೆ. ಆತನು ಯಾರೆಂಬುವುದರಲ್ಲಿ ಆತನ ಅಧಿಕಾರವು ಅಂತರ್ಗತವಾಗಿದೆ. ಯಾರು ಸಹ ಆತನನ್ನು ಬಲಕ್ಕೆತರಲಿಲ್ಲ ಮತ್ತು ಬಲದಿಂದ ಆತನನ್ನು ಯಾರೊಬ್ಬರು ತೆಗೆಯಲು ಸಾಧ್ಯವಿಲ್ಲ.

2. ಅರಸನಾಗಿ, ದೇವರ ವಾಕ್ಯವು ಸಹ ಆತನ ಆಜ್ಞೆಯಾಗಿದೆ ಇದು ರಾಜ್ಯದಲ್ಲಿನ ಕಾನೂನು ಆಗಿದೆ.

3. ಅರಸನಾಗಿ, ದೇವರ ಪ್ರಸನ್ನತೆಯು ಸಹ ಎಲ್ಲಾ ರಾಜ್ಯದ ಅಧಿಕಾರ ಮಹಿಮೆಯ ಸ್ಥಳವಾಗಿದೆ. ನೀವು ಅರಸನ ಪ್ರಸನ್ನತೆಗೆ ಪ್ರವೇಶಿಸುವಾಗ, ನೀವು ಆತನ ಸಂಪೂರ್ಣ ಮಹಿಮೆಯ ಪ್ರಸನ್ನತೆ ಮತ್ತು ಅಧಿಕಾರ ಪ್ರವೇಶಿಸುತ್ತೀರಿ.

4. ಅರಸನಾಗಿ, ದೇವರ ಹೆಸರು ಆತನ ಅಧಿಕಾರದ ಪೂರ್ಣ ತೂಕವನ್ನು ಪ್ರತಿನಿಧಿಸುತ್ತದೆ.

5. ಅರಸನಾಗಿ, ದೇವರ ರಾಜ್ಯವು ಆತನು ಯಾರಾಗಿದ್ದಾನೆಂಬುದರ ಅಭಿವ್ಯಕ್ತತೆಯಾಗಿದೆ.

**ಯೆಶಾಯ 9:6,7**
**6 ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ ವರದ ಮಗನು ನಮಗೆ ದೊರೆತನು ಆಡಳಿತವು ಅವನ ಬಾಹುವಿನ ಮೇಲಿರುವುದು. ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು.**
**7 ಅವನ ಮುಖಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವದು. ದಾವೀದನ ರಾಜ್ಯದಲ್ಲಿ ನಿತ್ಯ ಸಮಾಧಾನವಿರುವುದು. ಆ ರಾಜ್ಯವು ಇಂದಿನಿಂದ ಯಾವಾಗಲೂ ನೀತಿ ನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವುದು. ಸೇನಾಧೀಶ್ವರನಾದ ಯೆಹೋವನ ಆಗ್ರಹವು ಇದನ್ನು ನೆರವೇರಿಸುವುದು.**

ಯೆಶಾಯನು ದೇವರ ಮಗನು ಆಡಳಿತ ನಡೆಸುವಂತಹ ಸರ್ಕಾರದ ಕುರಿತು ಒಳ ನೋಟಗಳನ್ನು ತೆರೆಯುವಾಗ, "ಆತನ ಹೆಸರಿಗೆ" ಮತ್ತು ಹಿಂದೆ ಅವನು ಸೂಚಿಸುತ್ತಾನೆ. ಆತನ ಹೆಸರು ಆತನು ಯಾರಾಗಿದ್ದಾನೆ – ಆತನ ಗುಣಸ್ವಭಾವವನ್ನು ಪರಿಣಾಮಕಾರಿಯಾಗಿ ವ್ಯಾಖ್ಯಾನಿಸುತ್ತದೆ. ಆದುದರಿಂದ ದೇವರ ಮಗನು ಆಡಳಿತ ನಡೆಸುವ ಸರ್ಕಾರವು ಆತನು ಯಾರು ೆಂಬುದರ ಅಭಿವ್ಯಕ್ತತೆಯಾಗಿದೆ. ಇದು ಹೀಗೆ ವ್ಯಕ್ತಪಡಿಸಲ್ಪಟ್ಟಿದೆ:

ಅದ್ಭುತ ಸ್ವರೂಪನು = (ಇಬ್ರಿಯ ಭಾಷೆಲಿ = ಅದ್ಭುತಕಾರ್ಯ, ಮಹತ್ಕಾರ್ಯಗಳು) = ಅದ್ಭುತಕರವಾದ ಅಭಿವ್ಯಕ್ತತೆ.

ಸಲಹೆಗಾರನು = (ಇಬ್ರಿಯದಲ್ಲಿ = ಸಲಹೆಗಾರ) ಆಲೋಚನಾಕರ್ತನು = ಜ್ಞಾನದ ಅಭಿವ್ಯಕ್ತತೆ

ಪರಾಕ್ರಮಿಯಾದದೇವರು = ಬಲದ ಅಭಿವ್ಯಕ್ತತೆ

ನಿತ್ಯನಾದ ತಂದೆ – ಅನುಕಂಪ, ಪ್ರೀತಿ, ಕಾಳಜಿಯ ಅಭಿವ್ಯಕ್ತತೆ.

ಸಮಧಾನದ ಪ್ರಭು – ಶಾಲೋಮ್, ಅಭಿವ್ಯಕ್ತತೆ (ಸಂಪೂರ್ಣತೆ, ಸಂಪೂರ್ಣ ಯೋಗಕ್ಷೇಮ).

ಅದ್ಭುತ, ಜ್ಞಾನ, ಬಲ, ದೇವರ ಪಿತೃತ್ವ, ಸಂಪೂರ್ಣತೆ, ನ್ಯಾಯತೀರ್ಪು ಮತ್ತು ನ್ಯಾಯವನ್ನು ತರುವಂತಹ ಆಡಳಿತಗಾರ ಇವೆಲ್ಲವೂ ದೇವರ ಸರ್ಕಾರ ಅಥವಾ ದೇವರ ರಾಜ್ಯದ ರೂಪಗಳು. ದೇವರು ಎಲ್ಲೆಲ್ಲಿ ಆತನ ಪ್ರಭಾವವನ್ನು ಪ್ರಯೋಗಿಸುತ್ತಾನೋ, ಆತನ ದೊರೆತನದ ಕ್ಷೇತ್ರದಾದ್ಯಂತ - ಇದು ಸ್ಪಷ್ಟವಾಗಿರುತ್ತದೆ.

**ಇಬ್ರಿಯರಿಗೆ 1:8**
**ಮಗನ ವಿಷಯದಲ್ಲಿಯಾದರೋ ದೇವರೇ ನಿನ್ನ ಸಿಂಹಾಸನವು ಯುಗಯುಗಾಂತರಗಳಲ್ಲಿಯೂ ಇರುವುದು ನ್ಯಾಯದಂಡವೇ ನಿನ್ನ ರಾಜದಂಡವಾಗಿದೆ.**

ಆತನ ರಾಜದಂಡ ಅಥವಾ ಆಳ್ವಿಕೆಯು ಸಹ ನೀತಿವಂತಿಕೆಯಲ್ಲಿ ಒಂದಾಗಿದೆ.

ಆತನ ರಾಜ್ಯದ ಎಲ್ಲಾ ಒಳನೋಟಗಳನ್ನು ಮತ್ತು ನಮ್ಮ ಜೀವಿತದಲ್ಲಿ ಆಳ್ವಿಕೆಯನ್ನು ಹೊಂದಿಕೊಂಡಿರುವುದನ್ನು ನಾವು ಕಲಿಯಬೇಕು. ತೊಂದರೆಯೇನೆಂದರೆ, ನಮ್ಮಲ್ಲಿ ಕೆಲವರು ದೇವರ ರಾಜ್ಯದ ಒಂದು ನಿರ್ದಿಷ್ಟ ಅಂಶದ ಮೇಲೆ ಒತ್ತು ನೀಡುತ್ತಾರೆ. ಮತ್ತು ದೇವರ ರಾಜ್ಯದಲ್ಲಿ ಎಲ್ಲವೂ ಇದು ಮಾತ್ರವೇ ಅಂದುಕೊಳ್ಳುತ್ತಾರೆ. ಉದಾಹರಣೆಗೆ ಕೆಲವರು ದೇವರ ಪಿತೃತ್ವದಲ್ಲಿ – ಆತನ ಪ್ರೀತಿ, ಕಾಳಜಿ, ಕ್ಷಮಿಸುವಿಕೆ, ಪೋಷಣೆ, ಒದಗಿಸುವಿಕೆಯ ಅಂಶಗಳಲ್ಲಿ ಮಾತ್ರವೇ ಪ್ರಾಧಾನ್ಯತೆ ನೀಡುತ್ತಾರೆ. ಇದು ಒಳ್ಳೆಯದೆ ಆದರೆ ಅದು ಅರಸನ ಒಂದೇ ಅಂಶವು ಮಾತ್ರವೇ ಅದಲ್ಲ ಆತನ ರಾಜ್ಯವು ಜ್ಞಾನ, ನೀತಿವಂತಿಕೆ ಮತ್ತು ನ್ಯಾಯದಲ್ಲಿಯು ಒಂದಾಗಿದೆ.ದೇವರ ಒಂದು ನೈಜವಾದ ರೂಪದ ಮೇಲೆ ಅತಿಯಾದ ಪ್ರಾಧಾನ್ಯತೆ ನೀಡುವುದು ಅಪಾಯಕಾರಿ ಅದು ದೇವರ ಕುರಿತ ತಪ್ಪಾದ ಅರ್ಥ ವಿವರಣೆ ನಡೆಸುತ್ತದೆ ಯಾಕಂದರೆ ಇದು ದೇವರು ಸತ್ಯವಾಗಿ ಏನಾಗಿದ್ದಾನೆಂಬುದನ್ನು ಜನರು ತಿಳಿಯುವುದನ್ನು ತಡೆಯುತ್ತದೆ.

6. ಅರಸನಾಗಿ ದೇವರಿಗೆ ಭಯಪಡಬೇಕು ಮತ್ತು ಗೌರವಿಸಬೇಕು.

**ಯೆರೆಮೀಯ 10:7,10**
**7 ಜನಾಂಗಗಳ ಅರಸನೇ ಯಾರು ನಿನಗೆ ಅಂಜದೆ ಇದ್ದಾರು? ಇದು ನಿನಗೆ ತಕ್ಕದ್ದು ಜನಾಂಗಗಳ ಜ್ಞಾನಿಗಳಲ್ಲಿಯೂ ರಾಜ ಪರಂಪರೆಯಲ್ಲಿಯೂ ನಿನ್ನ ಸಮಾನನು ಯಾವನೂ ಇಲ್ಲವಷ್ಟೆ**
**10 ಯೆಹೋವನಾದರೂ ಸತ್ಯದೇವರು ಆತನು ಚೈತನ್ಯಸ್ವರೂಪನಾದ ದೇವನೂ ಶಾಶ್ವತ ರಾಜನೂ ಆಗಿದ್ದಾನೆ. ಆತನ ಕೋಪಕ್ಕೆ ಭೂಲೋಕವು ನಡುಗುತ್ತದೆ. ಜನಾಂಗಗಳು ಆತನ ರೋಷವನ್ನು ತಾಳಲಾರವು.**

ಬ್ಯಾಬಿಲೋನಿಯಾದ ಅರಸನಾದ ನೆಬೂಕದ್ನೆಚ್ಚರನಿಂದ ದೇವರಿಗೆ ಒಂದು ಅತ್ಯುತ್ತಮ ಗೌರವ ಪ್ರಶಂಸೆಗಳು ಬಂದವು.

**ದಾನಿಯೇಲನು 4:34-37**
**34 ಆ ಕಾಲವು ಕಳೆದ ಮೇಲೆ ನೆಬೂಕದ್ನೆಚ್ಚರನಾದ ನಾನು ಆಕಾಶದ ಕಡೆಗೆ ಕಣ್ಣೆತ್ತಲು ನನ್ನ ಬುದ್ದಿಯು ಪುನಃ ನನ್ನ ಸ್ವಾಧೀನವಾಯಿತು. ಆಗ ನಾನು ಪರಾತ್ಪರನನ್ನು ಕೊಂಡಾಡಿ ಸದಾ ಜೀವಿಸುವಾತನಿಗೆ ಸ್ತುತಿ ಸ್ತೋತ್ರಗಳನ್ನು ಸಲ್ಲಿಸಿದೆನು. ಆತನ ಆಳಿಕೆಯು ಶಾಶ್ವತ ಆತನ ರಾಜ್ಯವು ತಲತಲಾಂತರಕ್ಕೂ ನಿಲ್ಲುವುದು.**
**35ಭೂನಿವಾಸಿಗಳೆಲ್ಲರೂ (ಆತನ ದೃಷ್ಟಿಯಲ್ಲಿ) ಏನೂ ಅಲ್ಲದಂತಿದ್ದಾರೆ. ಪರಲೋಕ ಸೈನ್ಯದವರಲ್ಲಿಯೂ ಭೂಲೋಕದವರಲ್ಲಿಯೂ ತನ್ನ ಇಚ್ಛಾನುಸಾರ ನಡೆಯುತ್ತಾನೆ. ಯಾರೂ ಆತನ ಕೈಯನ್ನು ಹಿಂದಕ್ಕೆ ತಳ್ಳಲಾರರು. ನೀನು ಏನು ಮಾಡುತ್ತೀ ಎಂದು ಯಾರೂ ಕೇಳಲಾರರು.**
**36 ಅದೇ ಸಮಯದಲ್ಲಿ ನನ್ನ ಬುದ್ದಿಯು ಪುನಃ ನನ್ನ ಸ್ವಾಧೀನವಾಯಿತು. ನನ್ನ ಪ್ರಭಾವ ವೈಭವಗಳು ನನಗೆ ಮತ್ತೆ ಲಭಿಸಿ ನನ್ನ ರಾಜ್ಯದ ಕೀರ್ತಿಯು ಪ್ರಕಾಶಿಸಿತು. ನನ್ನ ಮಂತ್ರಿಗಳೂ ಅಧಿಪತಿಗಳೂ ನನ್ನನ್ನು ಓಲೈಸಿದರು. ನನ್ನ ರಾಜ್ಯದಲ್ಲಿ ರಾಜನಾಗಿ ನೆಲೆಗೊಂಡನು. ನನ್ನ ಮಹಿಮೆಯು ಅತ್ಯಧಿಕವಾಯಿತು.**

**37 ಈಗ ನೆಬೂಕದ್ನೆಚ್ಚರನಾದ ನಾನು ಪರಲೋಕ ರಾಜನನ್ನು ಹೊಗಳಿ ಕೊಂಡಾಡಿ ಕೀರ್ತಿಸುತ್ತೇನೆ. ಆತನ ಕಾರ್ಯಗಳೆಲ್ಲಾ ಸತ್ಯ ಆತನ ಮಾರ್ಗಗಳೆಲ್ಲಾ ನ್ಯಾಯ ಸೊಕ್ಕಿನಿಂದ ನಡೆಯುವವರನ್ನು ತಗ್ಗಿಸಬಲ್ಲನು.**

ನಮ್ಮ ಅರಸನನ್ನು ಆರಾಧಿಸುವುದು ಮತ್ತು ಸ್ತುತಿ ಸ್ತೋತ್ರಗಳನ್ನು ಅರ್ಪಿಸುವುದು ಆತನನ್ನು ಗೌರವಿಸುವ ಅತ್ಯುತ್ತಮ ಮಾರ್ಗಗಳಾಗಿವೆ.

**1 ತಿಮೋಥೆಯನಿಗೆ 1:17**
**ಸರ್ವಯುಗಗಳ ಅರಸನೂ ನಿರ್ಲಯನೂ ಅದೃಶ್ಯನೂ ಆಗಿರುವ ಏಕ ದೇವರಿಗೆ ಯುಗಯುಗಾಂತರಗಳಲ್ಲಿಯೂ ಮಾನ ಪ್ರಭಾವಗಳಿರಲಿ. ಆಮೆನ್**.

**1 ತಿಮೋಥೆಯನಿಗೆ 6:15**
**ಭಾಗ್ಯವಂತನಾದ ಏಕಾಧಿಪತಿಯು ತನ್ನ ಕ್ಲುಪ್ತ ಸಮಯದಲ್ಲೇ ಆತನನ್ನು ಪ್ರತ್ಯಕ್ಷ ಪಡಿಸುವನು. ಆ ಏಕಾಧಿಪತಿಯು ರಾಜಾಧಿರಾಜನೂ ಕರ್ತರ ಕರ್ತನೂ.**
ಹಾಗೆಯೇ ಪ್ರಕಟನೆ 17:14, 19:16 ನೋಡಿರಿ.

## ರಾಜನು ಹೇಗೆ ಆತನ ರಾಜ್ಯವನ್ನು ಪರಿಚಯಿಸಿದನು.

ಸ್ನಾನಿಕನಾದ ಯೋಹಾನನು ಅರಸನ ಪೂರ್ವಿಕನಾಗಿದ್ದು ಮತ್ತು ಪರಲೋಕ ರಾಜ್ಯವೂ ಬಂದಿದೆ. ಎಂಬುದನ್ನು ಘೋಷಿಸುವಂತದ್ದು ಶ್ರೇಷ್ಟವಾದ ಗೌರವವುಳ್ಳದ್ದಾಗಿದೆ (ಮತ್ತಾಯ 3:2). ದೇವರ ರಾಜ್ಯವನ್ನು ಘೋಷಿಸುವಂತಹ ಗೌರವವನ್ನು ಯೋಹಾನನು ಹೊಂದಿದಾಗಲೂ ಅವನು ದೇವರ ರಾಜ್ಯದ ಭಾಗವಾಗಿರಲಿಲ್ಲ. ಒಬ್ಬನು ದೇವರ ರಾಜ್ಯಕ್ಕೆ ಪ್ರವೇಶಿಸಬೇಕಾದರೆ ಹೊಸದಾಗಿ ಹುಟ್ಟಬೇಕು ಮತ್ತು ಇದು ಪುನರುತ್ಥಾನದ ತನಕ ನಡೆಯಲು ಸಾಧ್ಯವಾಗಲಿಲ್ಲ. ಆದ್ದರಿಂದ "ದೇವರ ರಾಜ್ಯದಲ್ಲಿ" ಕನಿಷ್ಟವಾದವನು ಯೋಹಾನನಿಗಿಂತ ದೊಡ್ಡವನೂ, ಹಳೇ ಒಡಂಬಡಿಕೆ ಪ್ರವಾದಿಗಳಿಗಿಂತ ದೊಡ್ಡವನೂ ಎಂಬುದಾಗಿ ಯೇಸುವು ಘೋಷಿಸಿದನು. "ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಯೋಹಾನನಿಗಿಂತ ದೊಡ್ಡವನು ಒಬ್ಬನೂ ಇಲ್ಲ. ಆದರೂ ದೇವರ ರಾಜ್ಯದಲ್ಲಿ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು ನಿಮಗೆ ಹೇಳುತ್ತೇನೆ" (ಲೂಕ 7:28). ದೇವರ ರಾಜ್ಯಕ್ಕೆ ಹೊಸದಾಗಿ ಹುಟ್ಟಿರುವುದು, ಹೊಸದಾಗಿ ಹುಟ್ಟದಂತಹ ಅನುಭವವುಳ್ಳ ಯಾರೊಬ್ಬರೂ ಆನಂದಿಸದಂತಹ ಅಧಿಕಾರ ಸ್ಥಾನ ಒಂದು ಆತ್ಮಿಕ ಕ್ಷೇತ್ರದ ಅನುಭವಕ್ಕೆ ನಮ್ಮನ್ನು ತರುತ್ತದೆ.

ಕರ್ತನಾದ ಯೇಸುವು ದೇವರ ರಾಜ್ಯವನ್ನು ಪರಿಚಯಿಸಲು ಮೂರು-ಪಟ್ಟು ವಿಧಾನಗಳನ್ನು ತೆಗೆದುಕೊಂಡನು.

- ದೇವರ ರಾಜ್ಯದ ಶುಭ ಸಂದೇಶವನ್ನು ಸಾರಿ ಹೇಳಿದನು.
- ದೇವರ ರಾಜ್ಯದ ತತ್ವಗಳನ್ನು ಬೋಧಿಸಿದನು.
- ದೇವರ ರಾಜ್ಯದ ಬಲವನ್ನು ತೋರ್ಪಡಿಸಿದನು.

**ಮತ್ತಾಯ 4:17,23**
**17 ಅಂದಿನಿಂದ ಯೇಸು ಪರಲೋಕ ರಾಜ್ಯವು ಸಮೀಪಿಸಿತು. ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಸಾರಿ ಹೇಳುವುದಕ್ಕೆ ಪ್ರಾರಂಭಿಸಿದನು.**
**23 ಬಳಿಕ ಯೇಸು ಗಲಿಲಾಯದಲ್ಲೆಲ್ಲಾ ತಿರುಗಾಡಿ ಅಲ್ಲಿಯವರ ಸಭಾಮಂದಿರಗಳಲ್ಲಿ ಉಪದೇಶ ಮಾಡುತ್ತಾ ಪರಲೋಕ ರಾಜ್ಯದ ಸುವಾರ್ತೆಯನ್ನು ಸಾರಿ ಹೇಳುತ್ತಾ ಜನರ ಎಲ್ಲಾ ತರದ ರೋಗಗಳನ್ನು ಎಲ್ಲಾತರದ ಬೇನೆಗಳನ್ನು ವಾಸಿ ಮಾಡುತ್ತಾ ಬಂದನು.**

**ಮತ್ತಾಯ 9:35**
**ಯೇಸು ಎಲ್ಲಾ ಊರುಗಳನ್ನು ಹಳ್ಳಿ ಪಳ್ಳಿಗಳನ್ನೂ ಸುತ್ತಿಕೊಂಡು ಅವರ ಸಭಾಮಂದಿರಗಳಲ್ಲಿ ಉಪದೇಶ ಮಾಡುತ್ತಾ ಪರಲೋಕ ರಾಜ್ಯದ ಸುವಾರ್ತೆಯನ್ನು ಸಾರಿ ಹೇಳುತ್ತಾ ಎಲ್ಲಾತರದ ರೋಗ ಗಳನ್ನೂ ಎಲ್ಲಾ ತರದ ಬೇನೆಗಳನ್ನೂ ವಾಸಿ ಮಾಡುತ್ತಾ ಬಂದನು.**

**ಲೂಕ 4 :43**
**ಆದರೆ ಆತನು ಅವರಿಗೆ ನಾನು ದೇವರ ರಾಜ್ಯದ ಸುವಾರ್ತೆಯನ್ನು ಬೇರೆ ಊರುಗಳಿಗೂ ಸಾರಿ ಹೇಳಬೇಕಾಗಿದೆ. ಇದಕ್ಕಾಗಿಯೇ ಕಳುಹಿಸಲ್ಪಟ್ಟಿದ್ದೇನೆ ಎಂದು ಹೇಳಿದನು.**

## ದೇವರ ರಾಜ್ಯದ ಕುರಿತು ಸುವಾರ್ತೆಯನ್ನು ಸಾರುವುದು.

ಯೇಸುವು ಸಾರಿ ಹೇಳಿದಂತಹ ದೇವರ ರಾಜ್ಯದ ಕುರಿತ ಸುವಾರ್ತೆಯು ಏನಾಗಿರಬಹುದು? ಸೈತಾನನು ದೇವರ ರಾಜ್ಯದ ವೈರಿಯು ಸೋಲಿಸಲ್ಪಟ್ಟಂತದ್ದನ್ನು (ಯೋಹಾನ 12:31) ಜನರು ವೈರಿಯ ದಬ್ಬಾಳಿಕೆ ಮತ್ತು ಭಯದಲ್ಲಿ ಇನ್ನೂ ಮುಂದೆ ಇರದೆ

ಮತ್ತು ಪ್ರತಿಯೊಬ್ಬರು ಅಂಧಕಾರದ ರಾಜ್ಯದಿಂದ ಹೊರ ಬರಲೂ ಒಂದು ಮಾರ್ಗವು ಮಾಡಲ್ಪಟ್ಟಿತ್ತು ಮತ್ತು ದೇವರ ಮಗನ ವಿಜಯದ ರಾಜ್ಯಕ್ಕೆ ಪ್ರವೇಶವನ್ನು ಹೊಂದುವಂತಹದ್ದನ್ನು ಸಾರಿ ಹೇಳಿದಂತಹ ಒಂದು ಸಂದೇಶ ಎಂಬುದಾಗಿ ನಾನು ನಂಬುತ್ತೇನೆ.

# ದೇವರ ರಾಜ್ಯದ ತತ್ವಗಳನ್ನು ಉಪದೇಶಿಸುವುದು.

ದೇವರ ರಾಜ್ಯದ ಕುರಿತು ಅನೇಕ ವಿಷಯಗಳನ್ನು ಕರ್ತನಾದ ಯೇಸುವು ಉಪದೇಶಿಸಿದನು. ದೇವರ ರಾಜ್ಯಕ್ಕೆ ಸಂಬಂಧಪಟ್ಟಂತಹ ಜನರಾಗಿ ಯಾವ ರೀತಿಯ ಜೀವಿತ ಜೀವಿಸಬೇಕೆಂದು ಆತನು ನಿಖರವಾಗಿ ತಿಳಿಸಿದನು. ದೇವರ ರಾಜ್ಯದ ಕುರಿತು ಆತನು ಉಪದೇಶಿಸಿದ ಕೆಲವು ವಿಷಯಗಳ ಚಿಕ್ಕದಾದ ಸಂಕ್ಷಿಪ್ತತೆ ಇಲ್ಲಿದೆ:

## ಆತ್ಮದಲ್ಲಿ ಬಡವರಾಗಿರುವವರು

**ಮತ್ತಾಯ-5:3**
**ಆತ್ಮದಲ್ಲಿ ಬಡವರಾಗಿರುವವರು ಧನ್ಯರು ಪರಲೋಕ ರಾಜ್ಯವು ಅವರದು.**

ಬಡವರಾಗಿರುವುದು, ಅಗತ್ಯತೆ, ಆಶಿಸುವ, ಬೇಡುವ, ಅಧಿಕವಾಗಿ ಕೇಳುವಂತಹ ಒಂದು ಸ್ಥಿತಿಯಲ್ಲಿರುವುದು ಆತ್ಮದಲ್ಲಿ ಬಡವರಾಗಿರುವುದು ಆತ್ಮದಲ್ಲಿ "ಅಗತ್ಯವುಳ್ಳನಾಗಿರುವುದು" ಆಗಿದೆ. ನಿಮ್ಮ ಆತ್ಮವು ಅಧಿಕವಾಗಿ ಹಸಿದಿದೆ. ಅಸಹನೀಯ ಹಸಿವು, ಅರಿಯಲಾಗದ ಬಾಯಾರಿಕೆ, ನಿರಂತರ ಬಯಸುವ ಸ್ಥಿತಿ ಭಿಕ್ಷೆ ಬೇಡುವುದು, ನೀವು ಹೊಂದಿರದದಂತದಕ್ಕಾಗಿ ನಿಮ್ಮ ಆತ್ಮನಲ್ಲಿ ಕಣ್ಣೀರು ಹಾಕುವುದು ಇರುತ್ತದೆ. ಅಂತಹವರಿಗೆ ಪರಲೋಕ ರಾಜ್ಯವನ್ನು ಅವರು ಅನುಭವಿಸುವರು ಎಂಬುದಾಗಿ ಯೇಸುವು ವಾಗ್ದಾನ ಮಾಡಿದ್ದಾನೆ. ಆತ್ಮದಲ್ಲಿ ಬಡವರಾಗಿರುವವರಿಗೆ – ಅವರು ಹೊಂದಿಲ್ಲದಿದ್ದಕ್ಕಾಗಿ ಹತಾಶೆಯಿಂದ ಅವರ ಆತ್ಮದಲ್ಲಿ ಅಳುತ್ತಿರುವವರಿಗೆ ದೇವರ ರಾಜ್ಯದ ಅನುಭವವು ಅನುಗ್ರಹಿಸಲ್ಪಟ್ಟಿದೆ.

## ನೀತಿಯ ನಿಮಿತ್ತವಾಗಿ ಹಿಂಸೆಯನ್ನು ತಾಳಿಕೊಳ್ಳುವವರು

**ಮತ್ತಾಯ 5:10**
**ನೀತಿಯ ನಿಮಿತ್ತವಾಗಿ ಹಿಂಸೆಯನ್ನು ತಾಳಿಕೊಳ್ಳುವವರು ಧನ್ಯರು: ಪರಲೋಕ ರಾಜ್ಯವು ಅವರದು.**

ನೀವು ಹಿಂಸಿಸಲ್ಪಟ್ಟಾಗ, ತಪ್ಪಾಗಿ ನ್ಯಾಯತೀರ್ಪು ಹೊಂದಿದಾಗ ಮತ್ತು ಸರಿಯಾದನ್ನು ಮಾಡಿದ್ದಕ್ಕಾಗಿ ತಪ್ಪಾಗಿ ಸತ್ಕರಿಸಲ್ಪಟ್ಟಾಗ ಪರಲೋಕ ರಾಜ್ಯವು ನಿಮ್ಮದು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ಈ ಜೀವಿತದಲ್ಲಿ ಮತ್ತು ಮುಂದೆ ಬರುವ ಜೀವಿತಗಳೆರಡರಲ್ಲೂ

ನಿಮ್ಮಲ್ಲಿ ಮತ್ತು ನಿಮ್ಮ ಮೂಲಕವಾಗಿ ಮಹಿಮೆಯು ಪ್ರಕಟಗೊಳ್ಳುತ್ತದೆ. ದೇವರ ರಾಜ್ಯದ ನಿಮಿತ್ತದಿಂದ ಕ್ಷಣ ಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾದ ಪ್ರತಿಫಲ ಉಂಟು ಮಾಡುತ್ತದೆ. (2 ಕೊರಿಂಥದವರಿಗೆ 4:17).

## ದೇವರ ವಾಕ್ಯವನ್ನು ಉಪದೇಶಿಸುವುದು ಮತ್ತು ಕೈಗೊಂಡು ನಡೆಯುವುದು.

**ಮತ್ತಾಯ 5:19**
**ಆದದರಿಂದ ಈ ಸಣ್ಣ ಸಣ್ಣ ಆಜ್ಞೆಗಳಲ್ಲಿಯಾದರೂ ಒಂದನ್ನು ಮೀರಿ ಜನರಿಗೂ ಹಾಗೆ ಮೀರುವುದಕ್ಕೆ ಬೋಧಿಸುವವನು ಪರಲೋಕ ರಾಜ್ಯದಲ್ಲಿ ಬಹಳ ಚಿಕ್ಕವನೆನಿಸಿಕೊಳ್ಳುವನು. ಆದರೆ ತಾನೇ ಆ ಆಜ್ಞೆಗಳಂತೆ ನಡೆದುಕೊಂಡು ಜನರಿಗೆ ಹಾಗೆ ನಡೆಯಬೇಕೆಂದು ಬೋಧಿಸುವವನು ಪರಲೋಕ ರಾಜ್ಯದಲ್ಲಿ ದೊಡ್ಡವನೆನಸಿಕೊಳ್ಳುವನು.**

ದೇವರ ರಾಜ್ಯದಲ್ಲಿ ದೊಡ್ಡವನೆನಸಿಕೊಳ್ಳುವುದು ದೇವರ ರಾಜ್ಯದಲ್ಲಿ ಗೌರವ ಮತ್ತು ಘನತೆಯ ಸ್ಥಳಕ್ಕೆ ಬರುವುದಾಗಿದೆ. ದೇವರ ರಾಜ್ಯದಲ್ಲಿ ಶ್ರೇಷ್ಟತೆಗೆ ಯಾವುದು ನಡೆಸುತ್ತದೆ ಎಂಬುದನ್ನು ಕೆಲವು ಸಂಧರ್ಭಗಳಲ್ಲಿ

ಯೇಸುವು ಉಲ್ಲೇಖಿಸಿದ್ದಾನೆ. ನಾವು ಚಿಕ್ಕಮಕ್ಕಳಂತೆ ಆದರೆ ಮತ್ತು ತಂದೆಯೊಂದಿಗೆ ನಮ್ಮ ಸಂಬಂಧದಲ್ಲಿ ಚಿಕ್ಕ ಮಕ್ಕಳಂತೆ ನಮ್ಮನ್ನು ತಗ್ಗಿಸಿಕೊಂಡರೆ ಇದು ನಮ್ಮನ್ನು ದೇವರ ರಾಜ್ಯದಲ್ಲಿ ಹೆಚ್ಚಿನವನಾಗಿ ಮಾಡುತ್ತದೆ. (ಮತ್ತಾಯ 14:4) ಎಂಬುದಾಗಿ ಯೇಸುವು ನಮಗೆ ಬೋಧಿಸಿದ್ದಾನೆ. ನಮ್ಮನ್ನು ತಗ್ಗಿಸಿಕೊಂಡು ಇತರರಿಗೆ ಸೇವಕರಂತೆ ಕಂಡು ಬಂದರೆ, ನಮ್ಮನ್ನು ದೇವರ ರಾಜ್ಯದಲ್ಲಿ ಶ್ರೇಷ್ಟತೆಯ ಸ್ಥಳಕ್ಕೆ ತರುತ್ತೇನೆಂಬುದಾಗಿ ಆತನು ಹೇಳಿದ್ದಾನೆ (ಮತ್ತಾಯ 20:26). ಮತ್ತಾಯ 5:19 ರಲ್ಲಿ ಯೇಸುವು ಉಪದೇಶಿಸಿದಂತೆ ನಮ್ಮ ವೈಯಕ್ತಿಕ ಜೀವಿತದಲ್ಲಿ ಆತನ ವಾಕ್ಯವನ್ನು ಕೈ ಗೊಂಡು ನಡೆದರೆ, ಅದರಿಂದ ಜೀವಿಸಿದರೆ ಮತ್ತು ಅದನ್ನು ಹಿಂಬಾಲಿಸಿದರೆ ಮತ್ತು ವಾಕ್ಯದಿಂದ ಇತರರು ಜೀವಿಸಲು ಕಲಿಸಿದರೆ ಆ ಮೇಲೆ ಇದು ದೇವರ ರಾಜ್ಯದಲ್ಲಿ ಗೌರವ ಮತ್ತು ಉನ್ನತಿಗೆ ನಡೆಸುತ್ತದೆ. ಕೈಗೊಂಡು ನಡೆಯುವುದು ಉಪದೇಶಿಸುವುದನ್ನು ಪೂರ್ವಭಾವಿಯಾಗಿಸುತ್ತದೆಂಬುದನ್ನು ಗಮನಿಸಿರಿ, ಮೊದಲು ನಮ್ಮ ಸ್ವಂತ ಜೀವಿತದಲ್ಲಿ ಅದರಿಂದ ಜೀವಿಸುತ್ತೇವೆ. ಆ ಮೇಲೆ ಹೇಗೆ ಎಂಬುದನ್ನು ಇತರರಿಗೆ ಹಂಚುತ್ತೇವೆ ಮತ್ತು ಅವರ ಜೀವಿತದಲ್ಲಿಯು ಸಹ ವಾಕ್ಯದಿಂದ ಜೀವಿಸಲೂ ಅವರಿಗೆ ಸಹಾಯ ಮಾಡುತ್ತೇವೆ.

## ನಿನ್ನ ರಾಜ್ಯವು ಬರಲಿ.

**ಮತ್ತಾಯ 6:10,13**
**ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ. ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು. ಯಾಕಂದರೆ ರಾಜ್ಯವು, ಬಲವೂ ಮಹಿಮೆಯು ನಿನ್ನಬ್ಬನಿಗೆ ಸಲ್ಲಲಿ. ಆಮೇನ್.**

ನಾವು ಪ್ರಾರ್ಥಿಸುವಾಗ, ನಾವು ಆತನ ಆಳ್ವಿಕೆ ಮತ್ತು ದೊರೆತನವನ್ನು ಭೂಮಿಯ ಮೇಲೆ ಆಹ್ವಾನಿಸುತ್ತೇವೆ. ಅಂತಹ ಪ್ರಾರ್ಥನೆಯ ಸ್ಪಷ್ಟವಾದ ಫಲಿತಾಂಶವು ಅರಸನ ದೊರೆತನವು ನಮ್ಮಲ್ಲಿ ಮತ್ತು ನಮ್ಮ ಮೂಲಕವಾಗಿ ವ್ಯಕ್ತಪಡಿಸಲ್ಪಡುತ್ತದೆ. ಪ್ರಾರ್ಥನೆಯಲ್ಲಿ ಆತನ ಅರಸುತನ, ಆತನ ಆಳ್ವಿಕೆ ಮತ್ತು ಎಲ್ಲದರ ಮೇಲೆ ಆತನ ರಾಜ್ಯಭಾರವನ್ನು ಅಂಗೀಕರಿಸುತ್ತೇವೆ.

## ಮೊದಲು ದೇವರ ರಾಜ್ಯವನ್ನು ಹುಡುಕಿರಿ.

**ಮತ್ತಾಯ 6:33**
**ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು**.

ನಮ್ಮ ಆದ್ಯತೆಗಳಲ್ಲಿ, ದೇವರ ಮುಂದೆ ಸರಿಯಾದದ್ದನ್ನು ಮಾಡುವುದು ಮತ್ತು ದೇವರ ರಾಜ್ಯವನ್ನು ಮೊದಲು ಮತ್ತು ಅಗ್ರಗಣ್ಯವಾಗಿ ಹಿಂಬಾಲಿಸಬೇಕು. ಇದರ ಅರ್ಥವು ನಮ್ಮ ಜೀವಿತದಲ್ಲಿ ಅರಸನ ಆಳ್ವಿಕೆ ಮತ್ತು ರಾಜ್ಯಭಾರ ಸ್ಥಾಪಿಸಲು ಮತ್ತು ನಮ್ಮ ಜೀವಿತದ ಮೂಲಕವಾಗಿ ನಾವು ಮಾಡುವಂತಹ ಎಲ್ಲವನ್ನೂ – ನಮ್ಮ ಆಯ್ಕೆಗಳು, ಯೋಜನೆಗಳು ಕಾರ್ಯ ಚಟುವಟಿಕೆಗಳು ಮುಂತಾದವುಗಳನ್ನು ಭೂಮಿಯು ವಿಸ್ತರಿಸುವಂತಹ ದೃಷ್ಟಿಯನ್ನು ನಾವು ಹೊಂದಿರಬೇಕು.

## ತಂದೆಯ ಚಿತ್ತವನ್ನು ಮಾಡುವುದು

**ಮತ್ತಾಯ - 7:21**
**ನನ್ನನ್ನು ಸ್ವಾಮಿ ಸ್ವಾಮಿ ಅನ್ನುವವರೆಲ್ಲರು ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ. ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕ ರಾಜ್ಯಕ್ಕೆ ಸೇರುವನು**

ಕೇವಲ ತುಟಿಯಿಂದ ಸೇವೆ ಮಾಡುವ ಬದಲಿಗೆ ತಂದೆಯ ಚಿತ್ತವನ್ನು ಮಾಡುವುದನ್ನು ಯೇಸುವು ಒತ್ತಾಯಿಸಿದನು. ಆತನ ಹೆಸರಿನಲ್ಲಿ ಕಲ್ಪಸಿ ಸೇವೆ ಮಾಡುವುದು ಅಥವಾ ಯಂತ್ರ ಶಾಸ್ತ್ರದಂತೆ ಆತನ ಹೆಸರನ್ನು ಉಪಯೋಗಿಸುವುದರಲ್ಲಿ ಪರಿಚಿತರಾಗಿರುವುದಕ್ಕಿಂತ ಆತನನ್ನು ವೈಯಕ್ತಿಕವಾಗಿ ತಿಳಿಯುವುದು ನಿರ್ಣಾಯಕ ಮತ್ತು ತುಂಬಾ ಪ್ರಾಮುಖ್ಯವಾದುದು (ಮತ್ತಾಯ 7:22,23).

ದಿನ ನಿತ್ಯದ ಜೀವನದಿಂದ ದೇವರ ರಾಜ್ಯದ ಸಾಮ್ಯಗಳನ್ನು ದೃಷ್ಟಾಂತಗಳ ಅನೇಕ ರಹಸ್ಯಾರ್ಥಗಳನ್ನು ಆತನು ಕಲಿಸಿದನು. ದೇವರ ರಾಜ್ಯದ ಸಾಮ್ಯಗಳ ಕುರಿತು ಆನಂತರ ಅಧ್ಯಯನ ಮಾಡೋಣ.

# ದೇವರ ರಾಜ್ಯದ ಬಲವನ್ನು ತೋರ್ಪಡಿಸುವುದು

ಕರ್ತನಾದ ಯೇಸು ಪ್ರಸಂಗಿಸುವುದು ಮಾತ್ರವಲ್ಲದೇ, ದೇವರ ರಾಜ್ಯದ ಕುರಿತು ಬೋಧಿಸುದನು. ಆದರೆ ದುರಾತ್ಮನನ್ನು ಓಡಿಸುವುದು. ಮತ್ತು ರೋಗಗಳನ್ನು ವಾಸಿಮಾಡುವುದರಿಂದ ದೇವರ ರಾಜ್ಯದ ನೈಜ್ಯತೆ ಮತ್ತು ಪ್ರಸನ್ನತೆಗೆ ಸ್ಪಷ್ಟತೆ ನೀಡಿದನು ಮತ್ತು ಆತನು ಸಹ ತೋರ್ಪಡಿಸಿದನು. ಆತನು ದುರಾತ್ಮನ ಕಾರ್ಯಗಳನ್ನು ನಾಶಪಡಿಸಲು ಬಂದನು. (1 ಯೋಹಾನನು 3:8) ಮತ್ತು ನಮ್ಮ ಮಧ್ಯದಲ್ಲಿನ ದೇವರ ರಾಜ್ಯದ ಸೂಚಕ ಮತ್ತು ಒಂದು ನಿಖರ ಅಭಿವ್ಯಕ್ತತೆಯಾಗಿ ಅಂತ ಕಾರ್ಯಗಳನ್ನು ಯೇಸುವು ಮಾಡಿದನು. "ನಾನು ದೇವರ ಆತ್ಮನ ಬಲದಿಂದಲೇ ದೆವ್ವಗಳನ್ನು ಬಿಡಿಸುವುದಾದರೆ ದೇವರ ರಾಜ್ಯವು ನಿಮ್ಮ ಹತ್ತರಕ್ಕೆ ಬಂತಲ್ಲಾ" (ಮತ್ತಾಯ 12:28) ಎಂಬುದಾಗಿ ಆತನು ಹೇಳಿದ್ದಾನೆ.

ದೇವರ ರಾಜ್ಯವನ್ನು ತೋರ್ಪಡಿಸುವುದು ಮತ್ತು ಅದರ ಕುರಿತ ಸಾರುವುದನ್ನು ಆತನು ಜಾರಿಗೊಳಿಸಿದಂತಹ ಅದೇ ರೀತಿಯಲ್ಲಿ ವಿಧಾನವನ್ನು ಉಪಯೋಗಿಸಿ ದೇವರ ರಾಜ್ಯವನ್ನು ಪರಿಚಯಿಸಬೇಕೆಂದು ಆತನ ಶಿಷ್ಯರಿಗೆ ಯೇಸು ಉಪದೇಶಿಸಿದನು. "ಪರಲೋಕ ರಾಜ್ಯವು ಸಮೀಪವಾಯಿತೆಂದು ಸಾರಿ ಹೇಳತ್ತಾ ಹೋಗಿರಿ ರೋಗಿಗಳನ್ನು ಸ್ವಸ್ಥಮಾಡಿರಿ, ಸತ್ತವರನ್ನು ಬದುಕಿಸಿರಿ, ಕುಷ್ಟ ಹತ್ತಿದವರನ್ನು ಶುದ್ಧಮಾಡಿರಿ, ದೆವ್ವಗಳನ್ನು ಬಿಡಿಸಿರಿ ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ (ಮತ್ತಾಯ - 10:7,8).

2000 ವರ್ಷಗಳ ನಂತರ – ನಾವು ವಾಸಿಸುವಂತಹ ಪ್ರಪಂಚ ನಮ್ಮ ತಲೆಮಾರಿಗೆ ದೇವರ ರಾಜ್ಯವನ್ನು ಪರಿಚಯಿಸುವ ಜವಬ್ದಾರಿಯನ್ನು ನಾವು ಹೊಂದಿದ್ದೇವೆ. ಆತನ ರಾಜ್ಯವನ್ನು ಪರಿಚಯಿಸಲೂ ಆತನು ತೆಗೆದುಕೊಂಡಂತಹ ವಿಧಾನಗಳಲ್ಲಿ ಅರಸನನ್ನು ನಾವು ಹಿಂಬಾಲಿಸಬೇಕಾ ಅಥವಾ ಇತರೆ ವಿಧಾನ ಶಾಸ್ತ್ರಗಳು ಅಥವಾ ಸಂಗತಿಗಳು ಮಾಡುವಂತಹ ಿತರೆ ಮಾರ್ಗಗಳಲ್ಲಿ ನಾವು ಬರಬೇಕಾ? ಉತ್ತರವು ಸರಳವಾದುದೆಂಬುದಾಗಿ ನಾನು ನಂಬುತ್ತೇನೆ. ಅರಸನನ್ನು ಹಿಂಬಾಲಿಸಿರಿ! ಆತನ ಪ್ರಸಂಗದ, ಬೋಧನೆಯ ಮತ್ತು ದೇವರ ರಾಜ್ಯವನ್ನು ತೋರ್ಡಿಸಿದಂತಹ ರೀತಿಯಲ್ಲಿ ನಮ್ಮ ಸಂತತಿಗೆ ದೇವರ ರಾಜ್ಯವನ್ನು ಪರಿಚಯಿಸುವ ವಿಧಾನವನ್ನು ಹಿಂಬಾಲಿಸಿರಿ. ನಾವು ಸಾರಬೇಕು ( ಸಂಪರ್ಕಿಸಬೇಕು) ಹಾಗೆಯೇ ಸ್ವಸ್ಥತೆಗಳು, ಬಿಡುಗಡೆ ಮತ್ತು ಅದ್ಭುತ ಕಾರ್ಯಗಳ ಮೂಲಕವಾಗಿ ದೇವರ ರಾಜ್ಯದ ಬಲವನ್ನು ಮತ್ತು ಪ್ರಸನ್ನತೆಯನ್ನು ತೋರ್ಡಿಸಬೇಕು.

# 3.ಸಭೆ ಮತ್ತು ದೇವರ ರಾಜ್ಯ

## ದೇವರ ರಾಜ್ಯದ ದೂತರು

"ಪರಲೋಕ ರಾಜ್ಯ" ಎಂಬುದಾಗಿ ಕರೆಯಲ್ಪಡುವ ಒಂದು ಆತ್ಮೀಕ ರಾಜ್ಯದ ಕ್ರಿಯಾಶಾಸ್ತ್ರವನ್ನು ಅರ್ಥಮಾಡಿಕೊಳ್ಳಲೂ ಆತನ ಶಿಷ್ಯರು ಇನ್ನೂ ಪ್ರಯತ್ನಿಸುತ್ತಿರುವಾಗಲೇ, ಕರ್ತನಾದ ಯೇಸುವು ಒಂದು "ಸಭೆಯನ್ನು" ಕಟ್ಟುತ್ತೇನೆ. ಅದು ಪರಲೋಕ ರಾಜ್ಯದ ಕೀಲಿಕೈಗಳನ್ನು ಹೊಂದಿರುತ್ತದೆ ಎಂಬುದಾಗಿ ಘೋಷಿಸಿದನು.

**ಮತ್ತಾಯ 16:18,19**
**18 ಮತ್ತು ನಾನೂ ನಿನಗೆ ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ ನೀನು ಪೇತ್ರನು. ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು. ಪಾತಾಳ ಲೋಕದ ಬಲವು ಅದನ್ನು ಸೋಲಿಸಬಾರದು.**
**19 ಪರಲೋಕ ರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು. ಭೂಲೋಕದಲ್ಲಿ ನೀನು ಯಾವುದನ್ನು ಕಟ್ಟುತ್ತೀಯೋ ಅದು ಪರಲೋಕದಲ್ಲಿಯೂ ಕಟ್ಟಿರುವುದು. ಮತ್ತು ಭೂ ಲೋಕದಲ್ಲಿ ನೀನು ಯಾವುದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿ ಬಿಚ್ಚಿರುವುದು ಅಂದನು.**

ಆತನ ಸಭೆಯನ್ನು ಕಟ್ಟುತ್ತೇನೆ ಎಂಬುದಾಗಿ ಯೇಸುವು ಹೇಳಿದನು ಮತ್ತು ಪಾತಾಳ ಲೋಕದ ಬಲವು ಅದನ್ನು ಸೋಲಿಸಬಾರದು. ಹಳೇ ಒಡಂಬಡಿಕೆಯ ಸಮಯದಲ್ಲಿ ನಗರದ ಬಾಗಿಲುಗಳು ಆಡಳಿತಗಾರರು ಕುಳಿತು ನ್ಯಾಯತೀರ್ಪುಗಳನ್ನು ಮಾಡುವ ಸ್ಥಳವಾಗಿತ್ತು. ಅದು ಸುರಕ್ಷತೆ ಮತ್ತು ಹತೋಟಿಯ ಸ್ಥಳವಾಗಿತ್ತು. ಯಾರಾದರೂ ನಗರದ ಬಾಗಿಲುಗಳನ್ನು ಹತೋಟಿಯಲ್ಲಿಟ್ಟು ಕೊಂಡರೆ ನಗರವನ್ನು ಹತೋಟಿಯಲ್ಲಿಡಬಹುದಿತ್ತು. ಇದು ಬಲದ ಆಸನವನ್ನು ಪ್ರತಿನಿಧಿಸುತ್ತದೆ. "ನಗರದ ಬಾಗಿಲುಗಳು" ಆದ್ದರಿಂದ "ನರಕದ ಬಲಗಳನ್ನು" ಪ್ರತಿನಿಧಿಸುತ್ತವೆ. ನರಕದ ಬಲಗಳನ್ನು ಸಭೆಯನ್ನು ನಿಲ್ಲಿಸಲಾರವು. ಬಾಗಿಲುಗಳು ಸ್ಥಾಯಿಯಾದವುಗಳು. ಬಾಗಿಲುಗಳು ಚಲಿಸುವುದಿಲ್ಲ. ಆದ್ದರಿಂದ ಸಭೆಯು ನರಕದ ಬಾಗಿಲುಗಳ ಕಡೆಗೆ ಮುನ್ನಡೆಯಬೇಕು. ಸಭೆಯು ಅದರ ಬಳಿಗೆ ಬಾಗಿಲುಗಳು ಬರುವುದಕ್ಕಾಗಿ ಕಾದು ಕುಳಿತಿರಬಾರದು! ಆದ್ದರಿಂದ ಮೂಲಭೂತವಾಗಿ, ಯೇಸು ಕಟ್ಟುತ್ತಿರುವ ಸಭೆಯು ನರಕದ ಬಲಗಳನ್ನು ಎದುರಿಸುತ್ತಾರ ಮತ್ತು ಉರುಳಿಸುತ್ತಾನೆ.

ಈ ಸಭೆಗೆ " ಪರಲೋಕ ರಾಜ್ಯದ ಬೀಗದ ಕೈಗಳನ್ನು ಕೊಡುವೆನು". ಎಂಬುದಾಗಿ ಯೇಸು ಹೇಳಿದ್ದಾನೆ. ಬೀಗದ ಕೈ ಅಧಿಕಾರವನ್ನು ಸೂಚಿಸುತ್ತದೆ. ಆತನು ಮರಣ ಮತ್ತು ನರಕದ ಕೀಲಿ ಕೈಗಳನ್ನು ಹೊಂದಿದ್ದಾನೆ ಎಂಬುದಾಗಿ ಯೇಸು ಹೇಳಿದ್ದಾನೆ (ಪ್ರಕಟಣೆ 1:18). ಆತನು ವಶಪಡಿಸಿಕೊಂಡಿದ್ದಾನೆ. ಆದುದರಿಂದ ಮರಣ ಮತ್ತು ನರಕದ ಮೇಲೆ ಅಧಿಕಾರ

ಹೊಂದಿದ್ದಾನೆ ಎಂಬುದು ಇದರ ಅರ್ಥವಾಗಿದೆ. ಸಭೆಯು ಪರಲೋಕ ರಾಜ್ಯದ ಅಧಿಕಾರವನ್ನು ಹೊಂದಿದೆ. ಏನನ್ನು ಮಾಡಲು? ಉಳಿದ ವಚನಗಳ ಸರಿಯಾದ ಭಾಷಾಂತರವೇನೆಂದರೆ "ಪರಲೋಕದಲ್ಲಿ ಕಟ್ಟಿರುವುದು ಭೂಲೋಕದಲ್ಲಿ ಕಟ್ಟಿರುವುದು, ಭೂ ಲೋಕದಲ್ಲಿ ಯಾವುದನ್ನೂ ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವುದು" ಯೇಸುವು ಕಟ್ಟಿರುವಂತಹ ಸಭೆಯು ಪರಲೋಕದಲ್ಲಿ ದೇವರು ಕಟ್ಟಿರುವುದನ್ನು ಭೂಲೋಕದಲ್ಲಿ ಕಟ್ಟಲು ಮತ್ತು ಪರಲೋಕದಲ್ಲಿ ದೇವರು ಕಟ್ಟಿರುವುದನ್ನು ಭೂ ಲೋಕದಲ್ಲಿ ಕಟ್ಟಲು ಮತ್ತು ಪರಲೋಕದಲ್ಲಿ ದೇವರು ಬಿಚ್ಚಿರುವುದನ್ನು ಭೂಲೋಕದಲ್ಲಿ ಬಿಚ್ಚಲೂ ಅಧಿಕಾರವನ್ನು ಹೊಂದಿದೆ. ಸಭೆಯು ಭೂಮಿಯ ಮೇಲೆ ಪರಲೋಕ ತರುತ್ತದೆ.

ಸಭೆಯು ದೇವರ ರಾಜ್ಯದ ಭಾಗವಾಗಿದೆ. ಇಂದು ಭೂಮಿಯ ಮೇಲೆ ಸಭೆಯು – ಯಜ್ಞದ ಕುರಿಯಾದಾತನ ರಕ್ತದಿಂದ ವಿಮೋಚಿಸಲ್ಪಟ್ಟಂತಹವರು – ದುರಾತ್ಮನು ಮಾಡುತ್ತಿರುವಂತವನ್ನು ಸೋಲಿಸಲು ದೇವರ ರಾಜ್ಯದ ಅಧಿಕಾರವನ್ನು ಹೊಂದಿದ್ದಾರೆ ಮತ್ತು ಪರಲೋಕದಲ್ಲಿ ಇರುವುದನ್ನು ಭೂಲೋಕಕ್ಕೆ ಕರೆತರುತ್ತಾರೆ.

ಆದಿಕಾಂಡದಲ್ಲಿ ಜರುಗಿದ್ದನ್ನು ಮರು ಸಂಗ್ರಹಿಸೋಣ:

**ಆದಿಕಾಂಡ -1:26-28**
**26 ಆ ಮೇಲೆ ದೇವರು ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯನನ್ನು ಉಂಟು ಮಾಡೋಣ. ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ, ಪಶುಗಳ ಮೇಲೆಯೂ, ನೆಲದ ಮೇಲೆ ಹರಿದಾಡುವ ಎಲ್ಲಾಕ್ರಿಮಿಕೀಟಗಳ ಮೇಲೆಯೂ, ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ ಅಂದನು.**
**27 ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದನು. ದೇವ ಸ್ವರೂಪದಲ್ಲಿ ಅವರನ್ನು ಉಂಟು ಮಾಡಿದನು. ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು.**
**28 ಇದಲ್ಲದೆ ದೇವರು ಅವರನ್ನು ಆಶೀರ್ವದಿಸಿ – ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ. ಭೂಮಿಯನ್ನು ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನ ಮಾಡಿರಿ ಅಂದನು.**

"ಅವರು ದೊರೆತನ ಮಾಡಲಿ" ಎಂಬುದಾಗಿ ದೇವರು ಹೇಳಿದಾಗ ಅವರನ್ನು ಭೂಮಿಯ ಮೇಲೆ ಹರಡಿಕೊಳ್ಳಲೂ ಮತ್ತು ಆಳ್ವಿಕೆ ಮಾಡುವ ಸಾಮರ್ಥ್ಯದೊಡನೆ ಅವರನ್ನು ವ್ಯವಸ್ಥಿತಗೊಳಿಸಿ, ಮಾನವ ಜನಾಂಗಕ್ಕೆ ಆತನ ಅಧಿಕಾರವನ್ನು ಆತನು ನಿಯೋಜಿಸಿ ಕೊಟ್ಟನು. ಭೂಮಿಯ ಮೇಲೆ ಮಾನವ ಜನಾಂಗವು ದೊರೆತನ ಮಾಡಲಿ ಎಂಬುದು ದೇವರ ಮೂಲ ಸಂಕಲ್ಪವಾಗಿತ್ತು. ದೇವರಿಂದ ಮಾನವನ ಮೂಲಕವಾಗಿ ಭೂಮಿಯ ಮೇಲೆ ದೇವರ ರಾಜ್ಯದ ಮೊದಲ ಪರಿಚಯ ಇದಾಗಿತ್ತು. ದೇವರ ಆಳ್ವಿಕೆ ಅಥವಾ ಸರ್ಕಾರವು ಮಾನವನ ಮೂಲಕವಾಗಿ ಭೂಮಿಯ ಮೇಲೆ ತುಂಬಬೇಕು.

ಭೂಮಿಯ ಮೇಲೆ ಮಾನವನ ಅಧಿಕಾರವು ದೇವರಿಂದ ಬಂದಿದೆ. ಮನುಷ್ಯನು ತನ್ನನ್ನು ಸೃಷ್ಟಿಸಿದಂತಹ ದೇವರಿಂದ ಆತನ ಅಧಿಕಾರವನ್ನು ಪಡೆದಿದ್ದಾನೆ. ದೇವರು ಕಾಣದಿರುವ ಕ್ಷೇತ್ರದಲ್ಲಿ ಆತ್ಮ ಸ್ವರೂಪನು ಆದ್ದರಿಂದ ಮಾನವನು ಆತ್ಮಿಕ ಕ್ಷೇತ್ರದಿಂದ ಅವನ ಅಧಿಕಾರ ಪಡೆಯುತ್ತಾನೆ ಮತ್ತು ಸ್ವಾಭಾವಿಕವಾಗಿ ಗೋಚರ ಕ್ಷೇತ್ರಗಳಿಗೆ ಅದನ್ನು ವಿಸ್ತರಿಸುತ್ತಾನೆ. ಅಗೋಚರ ಕ್ಷೇತ್ರದಿಂದ ಗೋಚರ ಕ್ಷೇತ್ರಕ್ಕೆ ಮಾನವನು ಆಳ್ವಿಕೆ ಮಾಡುತ್ತಾನೆ. ಅವಿಧೇಯತೆಯು ಈ ಅಧಿಕಾರದ ಅರಿವನ್ನು ಮುರಿದು ಹಾಕಿತು ಮತ್ತು ಅಂಧಕಾರದ ಬಲಗಳ ದಾಸತ್ವದ ಅಧೀನಕ್ಕೆ ಮನುಷ್ಯನನ್ನು ತಂದಿತ್ತು.

ವಿಮೋಚನೆಯಲ್ಲಿ ಸಭೆಯು ಈಗ ದೇವರ ರಾಜ್ಯದ ಅಧಿಕಾರವನ್ನು ಭೂಮಿಯ ಮೇಲೆ ಪಟ್ಟ ಭದ್ರಗೊಳಿಸಿಕೊಂಡಿದೆ. ಆದಿಕಾಂಡದಲ್ಲಿ ಬಿಡುಗಡೆಗೊಂಡ ದೇವರ ಮೂಲ ಸಂಕಲ್ಪವನ್ನು ಪುನಃ ಪಡೆದುಕೊಂಡಿದೆ. ಸಭೆಯು ಅಧಿಕಾರವನ್ನು ಪ್ರಯೋಗಿಸುವಾಗೆಲ್ಲಾ ಮಾನವನ ಮೂಲಕವಾಗಿ ಭೂಮಿಯ ಮೇಲೆ ಆತನ ಆಳ್ವಿಕೆಯನ್ನು ವಿಸ್ತರಿಸಲು – ದೇವರ ಮೂಲ ಸಂಕಲ್ಪವನ್ನು ನಾವು ಕಾರ್ಯಗತಗೊಳಿಸುತ್ತೇವೆ. ಈ ಯುಗದಲ್ಲಿನ ಸಭೆಯು, ಆತ್ಮೀಕ ದೇವರ ರಾಜ್ಯದೊಡನೆ ಪಟ್ಟ ಭದ್ರಗೊಂಡಿದೆ. ಕರ್ತನಿಂದ ವಿಮೋಚನೆ ಹೊಂದಿದಂತಹ ನಮ್ಮ ಮೂಲಕವಾಗಿ ಆತನ ಆಳ್ವಿಕೆ ಮತ್ತು ರಾಜ್ಯಭಾರ ಭೂ ಲೋಕದ ಮೇಲೆ ವ್ಯಾಪಿಸಿದೆ. ದೇವರ ರಾಜ್ಯದ ಸಮುದಾಯದವರಾಗಿ ನಮ್ಮ ಅರಸನನ್ನು ಆರಾಧಿಸುವುದನ್ನು ನಾವು ಕಲಿಯಬೇಕು. ನಾವು ದೇವರ ರಾಜ್ಯವನ್ನು ತೋರಿಸುವಾಗ, ಬೋಧಿಸುವಾಗ, ಸಾರುವಾಗ ಜನರ ಜೀವಿತದಲ್ಲಿ ಮತ್ತು ಹೃದಯದಲ್ಲಿ ಆತನ ಆಳ್ವಿಕೆ ಮತ್ತು ರಾಜ್ಯಭಾರ – ಆತನ ರಾಜ್ಯವೂ ಮಾತ್ರ ವಿಸ್ತರಿಸಬೇಕು. ಪರಲೋಕ ರಾಜ್ಯವನ್ನು

ಭೂಮಿಯ ಮೇಲೆ ಕರೆತರಲೂ ದೇವರ ರಾಜ್ಯದ ಅಧಿಕಾರದೊಡನೆ ನಾವು ದೇವರ ರಾಜ್ಯದ ದೂತರುಗಳು – ದೇವರ ರಾಜ್ಯದ ಈ ಸಂದರ್ಭದಲ್ಲಿ ಬೇರೊಬ್ಬರ ಹಿತಾಶಕ್ತಿಗಳನ್ನು ಪ್ರತಿನಿಧಿಸುವ ಉದ್ದೇಶದಿಂದ ಒಂದು ಸೇವೆಯಲ್ಲಿ ಕಳುಹಿಸಲ್ಪಟ್ಟಂತಹ ಜನರಾಗಿದ್ದೇವೆ!

ಇಂದಿನ ಸಭೆಯಲ್ಲಿ ದೇವರ ರಾಜ್ಯದ ಮೇಲೆ ಇನ್ನೂ ಅಧಿಕವಾದಂತಹ ಪ್ರಾಧಾನ್ಯತೆ ಬೇಕು ಎಂಬುದಾಗಿ ನಾನು ನಂಬುತ್ತೇನೆ.

# ದೇವರ ರಾಜ್ಯ ಮತ್ತು ಆಧಿಸಭೆ

## ಅಂತಿಮ ಸಂದೇಶ

ಕರ್ತನಾದ ಯೇಸುವು ದೇವರ ರಾಜ್ಯವನ್ನು ಸಾರುವ ಮೂಲಕ ಆತನ ಸೇವೆಯನ್ನು ಆರಂಭಿಸಿದನು. ಆತನ ಅಧಿಕವಾದ ಸೇವಾ ಸಮಯವನ್ನು  ದೇವರ ರಾಜ್ಯವನ್ನು ತೋರ್ಪಡಿಸಲೂ ಮತ್ತು ಉಪದೇಶಿಸುವುದರಲ್ಲಿಯೂ ಕಳೆದನು. ಆಮೇಲೆ ಆತನ ಕೊನೆಯ 40 ದಿವಸಗಳಲ್ಲಿ ನಿಶ್ಚಯವಾಗಿ ಪ್ರಾಮುಖ್ಯವಾಗಿದ್ದಂತಹ ವಿಷಯಗಳನ್ನು ಮಾತನಾಡಲೂ ಆತನು ಕಾಯ್ದಿರಿಸಿದ್ದನು ಎಂಬುದನ್ನು ಸುರಕ್ಷಿತವಾಗಿ ಊಹಿಸಬಹುದು. ದೇವರ ರಾಜ್ಯದ ಕುರಿತು ಕರ್ತನು ಮಾತನಾಡುವುದನ್ನು ನಾವು ನೋಡುತ್ತೇವೆ.

**ಅಪೊಸ್ತಲರ ಕೃತ್ಯಗಳು 1:3**
**ಆತನು ಬಾಧೆಪಟ್ಟು ಸತ್ತ ಮೇಲೆ ತನ್ನನ್ನು ಜೀವಂತನೆಂದು  ಅನೇಕ ಪ್ರಮಾಣಗಳಿಂದ ಅಪೊಸ್ತಲರಿಗೆ ತೋರಿಸಿಕೊಂಡನು. ನಲ್ವತ್ತು ದಿವಸಗಳ ತನಕ ಅವರಿಗೆ ಕಾಣಿಸಿಕೊಳ್ಳುತ್ತಾ ದೇವರ ರಾಜ್ಯದ ವಿಷಯವಾದ ಸಂಗತಿಗಳನ್ನು ಹೇಳುತ್ತಾ ಇದ್ದನು**.

## ಫಿಲಿಪ್ಪನು

ಅಪೊಸ್ತಲರು ಮತ್ತು ಆಧಿಸಭೆಯು ದೇವರ ರಾಜ್ಯದ ತೋರ್ಪಡಿಸುವ ಮತ್ತು ಬೋಧಿಸುವುದರ ಮೇಲೆ ದೃಷ್ಟಿಯನ್ನಿರಿಸಿದ್ದು ಸಾಕಷ್ಟು ಸ್ಪಷ್ಟವಾಗಿದೆ. ಫಿಲಿಪ್ಪನು, ಸಭೆಯಲ್ಲಿ ಸೇವೆ ಸಲ್ಲಿಸಿದನು, ಅವನು ಹೊರಗೆ ಹೋದಾಗ " ದೇವರ ರಾಜ್ಯದ ಕುರಿತಾದ ವಿಷಯಗಳ" ಕುರಿತು ಅವನು ಕಲಿತಿದ್ದನ್ನು ಸಾರಲೂ ಪ್ರಾರಂಭಿಸಿದನು.

**ಅಪೊಸ್ತಲರ ಕೃತ್ಯಗಳು 8:12**
**ಅವನಿಗೆ ಲಕ್ಷ್ಯಕೊಡುತ್ತಿದ್ದರು. ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸು ಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲೂ ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು**.

## ಪೌಲನು ಮತ್ತು ಬಾರ್ನಬನು

**ಅಪೊಸ್ತಲರ ಕೃತ್ಯಗಳು 14:21,22**
**21 ಆ ಊರಿನಲ್ಲಿ ಅವರು ಸುವಾರ್ತೆಯನ್ನು ಸಾರಿ ಅನೇಕರನ್ನು ಶಿಷ್ಯರಾಗಿ ಮಾಡಿದ ಮೇಲೆ ಹಿಂತಿರುಗಿ ಲುಸ್ತ್ರಕ್ಕೂ ಇಕೋನ್ಯಕ್ಕೂ ಅಂತಿಯೋಕ್ಯಕ್ಕೂ ಬಂದು ಶಿಷ್ಯರ ಮನಸ್ಸುಗಳನ್ನು ದೃಢಪಡಿಸಿದರು.**

**22 ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂಬುದಾಗಿ ಎಚ್ಚರಿಕೆಯ ಮಾತನ್ನು ಹೇಳಿ ಕ್ರಿಸ್ತ ನಂಬಿಕೆಯಲ್ಲಿ ಸ್ಥಿರವಾಗಿರಿ ಎಂದು ಅವರನ್ನು ಧೈರ್ಯಗೊಳಿಸಿದರು.**

## ಪೌಲನು ಎಫೆಸದಲ್ಲಿ

**ಅಪೊಸ್ತಲರ ಕೃತ್ಯಗಳು 19:8**
**ಪಟ್ಟಣದಲ್ಲಿ ಪೌಲನು ಸಭಾ ಮಂದಿರದೊಳಗೆ ಹೋಗಿ ಮೂರು ತಿಂಗಳು ಅಲ್ಲೇ ದೇವರ ರಾಜ್ಯದ ವಿಷಯಗಳನ್ನು ಕುರಿತು ವಾದಿಸುತ್ತಾ ಜನರನ್ನು ಒಡಂಬಡಿಸುತ್ತಾ ಧೈರ್ಯದಿಂದ ಮಾತಾಡಿದನು.**

**ಅಪೊಸ್ತಲರ ಕೃತ್ಯಗಳು 20:25**
**ಇಗೋ ಇಷ್ಟು ದಿವಸ ನಿಮ್ಮಲ್ಲಿ ಸಂಚಾರ ಮಾಡಿ ದೇವರ ರಾಜ್ಯವನ್ನು ಸಾರಿದವನಾದ ನನ್ನ ಮುಖವನ್ನು ಇನ್ನು ಮೇಲೆ ನಿಮ್ಮಲ್ಲಿ ಒಬ್ಬರೂ ಕಾಣುವುದಿಲ್ಲ.**

ಎಫೆಸದಿಂದ ಹಿರಿಯರಿಗೆ ಪೌಲನ ಸಾಕ್ಷಿಯು ಅವನ ಸೇವೆಯಲ್ಲಿ ದೇವರ ರಾಜ್ಯದ ಕುರಿತು ಸಾರುವುದನ್ನು ಅವನು ಪ್ರಾಧಾನ್ಯತೆ ನೀಡಿದ್ದನು ಎಂಬುದನ್ನು ತೋರಿಸುತ್ತದೆ.

## ಪೌಲನ ಅಂತಿಮ ನಿಯೋಜನೆ

ಪೌಲನು ಅವನ ಅಂತಿಮ ನಿಯೋಜನೆಯಾಗಿ ಕಾಣುತ್ತಿದ್ದಂತಹ ರೀತಿಯಲ್ಲಿ ಗೃಹ ಬಂಧನದಲ್ಲಿ, ಅವನು ಮಾಡುತ್ತಿದ್ದಂತಹ ಕಾರ್ಯವನ್ನು ದೇವರ ರಾಜ್ಯದ ಸಂದೇಶವನ್ನು ಸಾರುವುದನ್ನು ಮಾಡುತ್ತಿದ್ದನು.

**ಅಪೊಸ್ತಲರ ಕೃತ್ಯಗಳು 28:23,31**
**23 ಅವರು ಅವನಿಗೆ ಒಂದು ದಿವಸವನ್ನು ಗೊತ್ತು ಮಾಡಲು ಬಹುಮಂದಿ ಅವನ ಬಿಡಾರದಲ್ಲಿ ಅವನ ಬಳಿಗೆ ಬಂದರು. ಅವನು ಬೆಳಗಿನಿಂದ ಸಾಯಂಕಾಲದವರೆಗೂ ದೇವರ ರಾಜ್ಯವನ್ನು ಕುರಿತು ಪ್ರಮಾಣವಾಗಿ ಸಾಕ್ಷಿ ಹೇಳುತ್ತಾ ಮೋಶೆಯ ಧರ್ಮಶಾಸ್ತ್ರವನ್ನೂ ಪ್ರವಾದಿಗಳ ಗ್ರಂಥಗಳನ್ನೂ ಆಧಾರಮಾಡಿಕೊಂಡು ಯೇಸುವಿನ ವಿಷಯದಲ್ಲಿ ಅವರನ್ನು ಒಡಂಬಡಿಸುತ್ತಾ ಇದ್ದನು.**
**31 ಯಾವ ಅಡ್ಡಿಯೂ ಇಲ್ಲದೆ ತುಂಬಾ ಧೈರ್ಯದಿಂದ ದೇವರ ರಾಜ್ಯವನ್ನು ಪ್ರಸಿದ್ಧಿ ಪಡಿಸುತ್ತಾ ಕರ್ತನಾದ ಯೇಸು ಕ್ರಿಸ್ತನ ವಿಷಯವಾಗಿ ಉಪದೇಶ ಮಾಡುತ್ತಾ ಇದ್ದನು.**

## ಕೆಲಸಗಾರರು ಮತ್ತು ದೇವರ ರಾಜ್ಯಕ್ಕಾಗಿ ಜೊತೆಗಾರರು.

ಪೌಲನು ತನ್ನನ್ನು ಮತ್ತು ಅವನ ಸೇವಾ ತಂಡವನ್ನು ದೇವರ ರಾಜ್ಯಕ್ಕಾಗಿ ಕೆಲಸಗಾರರಂತೆ ಕಂಡನು. ಅವರು ಸೇವೆಯಲ್ಲಿ ಮಾಡಿದಂತದೆಲ್ಲವೂ ದೇವರ ರಾಜ್ಯಕ್ಕಾಗಿಯೇ ಆಗಿತ್ತು. ಅದೇ ರೀತಿಯಾಗಿ ಪ್ರಿಯನಾದ ಯೋಹಾನನು ತನ್ನನ್ನು ಮತ್ತು ತನ್ನೊಂದಿಗಿದ್ದ ಇತರರನ್ನು ಅದೇ ದೇವರ ರಾಜ್ಯದ ಸಲುವಾಗಿ ಹಿಂಸೆಯನ್ನು ಅನುಭವಿಸಿದ ಜೊತೆಗಾರರಂತೆ ಕಂಡನು.

**ಕೊಲೊಸ್ಸೆಯವರಿಗೆ 4:11**
**ಯೊಸ್ತನೆನಿಸಿಕೊಳ್ಳುವ ಯೇಸು ಸಹ ನಿಮಗೆ ವಂದನೆ ಹೇಳುತ್ತಾನೆ. ಸುನ್ನತಿಯವರೊಳಗೆ ಇವರು ಮಾತ್ರವೇ ದೇವರ ರಾಜ್ಯಾಭಿವೃದ್ಧಿಗಾಗಿ ನನ್ನ ಜೊತೆಗೆಲಸದವರಾಗಿದ್ದಾರೆ. ಇವರಿಂದ ನನಗೆ ಉಪಶಮನ ಉಂಟಾಯಿತು.**

**ಪ್ರಕಟಣೆ 1:9**
**ನಿಮ್ಮ ಸಹೋದರನೂ ಯೇಸುವಿನ ನಿಮಿತ್ತ ಹಿಂಸೆಯಲ್ಲಿಯೂ ರಾಜ್ಯದಲ್ಲಿಯೂ ತಾಳ್ಮೆಯಲ್ಲಿಯೂ ನಿಮ್ಮೊಂದಿಗೆ ಪಾಲುಗಾರನೂ ಆಗಿರುವ ಯೋಹಾನನೆಂಬ ನಾನು ದೇವರ ವಾಕ್ಯಕ್ಕೋಸ್ಕರವೂ ಯೇಸುವಿನ ವಿಷಯವಾದ ಸಾಕ್ಷಿಗೋಸ್ಕರವೂ ಪತ್ಮೋಸ್ ದ್ವೀಪದಲ್ಲಿದ್ದೆನು.**

ಆಧಿ ಸಭೆಯು ದೇವರ ರಾಜ್ಯದ ಕುರಿತ ಬೋಧಿಸಿತ್ತು. ನಾವುಗಳು ಇದರ ಮಹತ್ವವನ್ನು ತಿಳುವಳಿಕೆಯನ್ನು ಮತ್ತು ಇಂದಿನ ಸಭೆಯಲ್ಲಿ ದೇವರ ರಾಜ್ಯದ ದೃಷ್ಟಿಯನ್ನು ಪುನಃ ಪಡೆದುಕೊಳ್ಳಬೇಕು. ವಾಸ್ತವವಾಗಿ ನಮ್ಮ ಪ್ರಸ್ತುತ ಸಮಯದಲ್ಲಿ ಸಭೆಗಳು ಯೇಸುವು ಸಾರಿದಂತಹ ಅದೇ ಶುಭ ಸಂದೇಶವನ್ನು – ದೇವರ ರಾಜ್ಯದ ಸುವಾರ್ತೆಯನ್ನು ಸಾರುತ್ತಿವೆ. "ಇದಲ್ಲದೆ ಪರಲೋಕ ರಾಜ್ಯದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವುದು. ಆಗ ಅಂತ್ಯವು ಬರುವುದು". (ಮತ್ತಾಯ 24:14)

## ಸಭೆ: ದೇವರ ರಾಜ್ಯದ ಫಲಗಳನ್ನು ಕೊಡುವ ಒಂದು ರಾಷ್ಟ್ರ.

**ಮತ್ತಾಯ 21:33-46**
**33 ಮತ್ತೊಂದು ಸಾಮ್ಯವನ್ನು ಕೇಳಿರಿ – ಒಬ್ಬ ಮನೆಯ ಯಜಮಾನನಿದ್ದನು. ಅವನು ಒಂದು ದ್ರಾಕ್ಷೇತೋಟವನ್ನು ಮಾಡಿ ಅದರ ಸುತ್ತಲೂ ಬೇಲಿ ಹಾಕಿಸಿ ಅದರಲ್ಲಿ ದ್ರಾಕ್ಷೆಯ ಆಲೆಯನ್ನು ಮಾಡಿಸಿ ಹೊಡೆಯನ್ನು ಕಟ್ಟಿಸಿ ಒಕ್ಕಲಿಗರಿಗೆ ವಾರಕ್ಕೆ ಕೊಟ್ಟು ಬೇರೊಂದು ದೇಶಕ್ಕೆ ಹೋದನು.**
**34 ಫಲಕಾಲ ಹತ್ತರವಾದಾಗ ತನಗೆ ಬರಬೇಕಾದ ಹಣ್ಣುಗಳನ್ನು ತೆಗೆದುಕೊಂಡು ಬರುವದಕ್ಕಾಗಿ ಆ ಒಕ್ಕಲಿಗರ ಬಳಿಗೆ ತನ್ನ ಆಳುಗಳನ್ನು ಕಳುಹಿಸಲು**
**35 ಒಕ್ಕಲಿಗರು ಅವನ ಆಳುಗಳನ್ನು ಹಿಡುಕೊಂಡು ಒಬ್ಬನನ್ನು ಹೊಡೆದರು ಒಬ್ಬನನ್ನು ಕಡಿದು ಹಾಕಿದರು. ಒಬ್ಬನನ್ನು ಕಲ್ಲೆಸೆದು ಕೊಂದರು.**
**36 ಪುನಃ ಮೊದಲಿನವರಿಗಿಂತ ಹೆಚ್ಚು ಮಂದಿ ಆಳುಗಳನ್ನು ಕಳುಹಿಸಿದನು ಅವರಿಗೂ ಹಾಗೆಯೇ ಮಾಡಿದರು.**
**37 ಕಡೆಯಲ್ಲಿ ನನ್ನ ಮಗನಿಗಾದರೂ ಮರ್ಯಾದೆ ತೋರಿಸಾರು ಅಂದುಕೊಂಡು ತನ್ನ ಮಗನನ್ನು ಅವರ ಬಳಿಗೆ ಕಳುಹಿಸಿದನು.**
**38 ಆದರೆ ಆ ಒಕ್ಕಲಿಗರು ಅವನ ಮಗನನ್ನು ಕಂಡು ಇವನೇ ಬಾಧ್ಯಸ್ಥನು ಬನ್ನಿ ಇವನನ್ನು ಕೊಂದುಹಾಕೋಣ. ಇವನ ಸ್ವಾಸ್ತ್ಯವನ್ನು ನಾವೇ ತೆಗೆದು ಕೊಳ್ಳೋಣ ಎಂದು ತಮ್ಮ ತಮ್ಮೊಳಗೆ ಮಾತಾಡಿಕೊಂಡು**
**39 ಅವನನ್ನು ಹಿಡಿದು ದ್ರಾಕ್ಷೇ ತೋಟದಿಂದ ಹೊರಕ್ಕೆ ದೊಬ್ಬಿ ಕೊಂದುಹಾಕಿದರು**
**40 ಹಾಗಾದರೆ ದ್ರಾಕ್ಷೀತೋಟದ ಧಣಿಯು ಬಂದಾಗ ಆ ಒಕ್ಕಲಿಗರಿಗೆ ಏನು ಮಾಡುವನು ಅಂದನು.**
**41 ಅವರು ಆತನಿಗೆ ಆ ಕೆಡುಕರನ್ನು ಕ್ರೂರವಾಗಿ ಸಂಹರಿಸಿ ಕಾಲಕಾಲಕ್ಕೆ ಹಣ್ಣುಗಳನ್ನು ತನಗೆ ಸಲ್ಲಿಸುವಂಥ ಬೇರೆ ಒಕ್ಕಲಿಗರಿಗೆ ತನ್ನ ತೋಟವನ್ನು ವಾರಕ್ಕೆ ಕೊಡುವನು ಎಂದು ಹೇಳಿದರು.**

**42 ಯೇಸು ಅವರಿಗೆ-ಮನೆ ಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು. ಇದು ಕರ್ತನಿಂದಲೇ ಆಯಿತು ನಮಗೆ ಆಶ್ಚರ್ಯವಾಗಿ ತೋರುತ್ತದೆ. ಎಂಬುವ ಮಾತನ್ನು ನೀವು ಶಾಸ್ತ್ರದಲ್ಲಿ ಎಂದಾದರೂ ಓದಲಿಲ್ಲವೋ?**
**43 ಆದದರಿಂದ ದೇವರು ರಾಜ್ಯವು ನಿಮ್ಮಿಂದ ತೆಗೆಯಲ್ಪಟ್ಟು ಅದರ ಫಲಗಳನ್ನು ಕೊಡುವ ಜನಕ್ಕೆ ಕೊಡಲಾಗುವದು.**
**44 ಈ ಕಲ್ಲಿನ ಮೇಲೆ ಬೀಳುವವನು ತುಂಡು ತುಂಡಾಗುವನು. ಇದು ಯಾರ ಮೇಲೆ ಬೀಳುತ್ತದೋ ಅವನನ್ನು ಪುಡಿ ಪುಡಿ ಮಾಡುವುದು ಎಂದು ಹೇಳಿದನು.**
**45 ಮಹಾಯಾಜಕರೂ ಆತನ ಸಾಮ್ಯಗಳನ್ನು ಕೇಳಿ ತಮ್ಮನ್ನೇ ಕುರಿತು ಮಾತನಾಡುತ್ತಾನೆಂದು ತಿಳುಕೊಂಡು ಆತನನ್ನು ಹಿಡಿಯುವುದಕ್ಕೆ ಸಂದರ್ಭ ನೋಡುತ್ತಿದ್ದರು.**
**46 ಆದರೆ ಜನರು ಆತನನ್ನು ಪ್ರವಾದಿಯೆಂದು ಎಣಿಸಿದ್ದರಿಂದ ಅವರಿಗೆ ಭಯ ಪಟ್ಟರು.**

ಇಸ್ರಾಯೇಲ್ ದೇಶದ ಮೂಲಕವಾಗಿ ಭೂಮಿಯ ಮೇಲೆ ಆತನ ರಾಜ್ಯವನ್ನು ಸ್ಥಾಪಿಸಲು ದೇವರು ಒಪ್ಪಿಸಿದನು. ಅವರು ತಾತ್ಕಾಲಿಕವಾಗಿ ಅದನ್ನು ತಿರಸ್ಕರಿಸಿದರು. ಆದ್ದರಿಂದ ಈಗ ದೇವರ ರಾಜ್ಯವು ಇನ್ನೊಂದು ದೇಶಕ್ಕೆ ಪ್ರಪಂಚದಾದ್ಯಂತ ಇರುವ ವಿಶ್ವಾಸಿಗಳನ್ನು ಒಳಗೊಂಡಿರುವ ಸಭೆಗೆ ಕೊಡಲ್ಪಟ್ಟಿದೆ. ಸಭೆಯು ದೇವರ ರಾಜ್ಯದ ಫಲಗಳನ್ನು ಕೊಡುವ ಒಂದು ದೇಶವಾಗಿದೆ. ವಿಶ್ವಾಸಿಗಳಾಗಿ, ನಮ್ಮ ಜೀವಿತಗಳ ಮೂಲಕವಾಗಿ ದೇವರ ರಾಜ್ಯದ ಕೆಲಸಗಳನ್ನು ಮಾಡುವ – ಫಲಗಳನ್ನು ಕೊಡಲೂ ನಾವು ಇಲ್ಲಿದ್ದೇವೆ. ಭೂಮಿಯ ಮೇಲೆ ನಮ್ಮ ಮೂಲಕವಾಗಿ ಆತನ ಆಳ್ವಿಕೆ ಮತ್ತು ರಾಜ್ಯಭಾರ ವ್ಯಕ್ತ ಪಡಿಸಲ್ಪಡಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೆ.

**ನಿಮ್ಮ ಮೂಲಕವಾಗಿ ನಿಮ್ಮ ಸುತ್ತಲಿರುವ ಜನರು ದೇವರ ರಾಜ್ಯದ ಫಲಗಳನ್ನು ನೋಡುತ್ತಿದ್ದಾರಾ?**

# 4.ದೇವರ ರಾಜ್ಯದ ಆಲೋಚನೆ

ದೇವರ ರಾಜ್ಯದ ಮೇಲಿನ ಯೇಸುವಿನ ಬೋಧನೆಗಳು ನಮ್ಮ ಆಲೋಚನೆ, ನಮ್ಮ ದೃಷ್ಟಿಕೋನಗಳು, ನಮ್ಮ ಮೌಲ್ಯ ವ್ಯವಸ್ಥೆಗಳು, ನಮ್ಮ ಆದ್ಯತೆಗಳ ಮೇಲೆ ಆಮೂಲಾಗ್ರವಾಗಿ ಪರಿಣಾಮ ಬೀರುತ್ತದೆ. ನಮ್ಮ ಸಂಪೂರ್ಣ ಉಲ್ಲೇಖದ ಚೌಕಟ್ಟು ಮತ್ತು ನಮ್ಮ ಮನಸ್ಸಿನ ಚೌಕಟ್ಟು ಬದಲಾಗುತ್ತದೆ. ಈ ಒಂದು ಅಧ್ಯಾಯದಲ್ಲಿ ದೇವರ ರಾಜ್ಯದ ಮೇಲೆ ಯೇಸುವಿನ ಬೋಧನೆಗಳ ಕೆಲವು ಅಂಶಗಳನ್ನು ದೃಷ್ಟಿಸೋಣ. ಮುಂದಿನ ಅಧ್ಯಾಯದಲ್ಲಿ ದೇವರ ರಾಜ್ಯದ ಸಾಮ್ಯಗಳ ಕುರಿತು ಚರ್ಚಿಸುವಾಗ ಇನ್ನೂ ಕೆಲವು ಹೆಚ್ಚಾದ ಒಳನೋಟಗಳನ್ನು ನೋಡೋಣ.

## ಒಂದು ಹೊಸ ದೇವರ ರಾಜ್ಯದಲ್ಲಿ – ಒಂದು ಹೊಸ ಕ್ರಿಯಾ ಮಾಲೆ

**ಕೊಲೊಸ್ಸೆಯವರಿಗೆ 1:12,13**
**12 ಬೆಳಕಿನ ರಾಜ್ಯದೊಳಗೆ ದೇವ ಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವುದಕ್ಕೆ ನಿಮ್ಮನ್ನು ಯೋಗ್ಯರನ್ನಾಗಿ ಮಾಡಿದ ತಂದೆಗೆ ಕೃತಜ್ಞತಾ ಸ್ತುತಿ ಮಾಡುವವರಾಗಿರಬೇಕೆಂತಲೂ ದೇವರನ್ನು ಬೇಡಿಕೊಳ್ಳುತ್ತೇವೆ.**
**13 ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು.**

ಎರಡು ವ್ಯತಿರಿಕ್ತವಾದ ರಾಜ್ಯಗಳಿವೆ – ಅಂಧಕಾರದ ರಾಜ್ಯ ಮತ್ತು ಬೆಳಕಿನ ರಾಜ್ಯ. ಒಂದು ದುರಾತ್ಮನ ರಾಜ್ಯ ಮತ್ತು ಇನ್ನೊಂದು ಯೇಸುವಿನ ರಾಜ್ಯ. ನಾವು ಕರ್ತನಾದ ಯೇಸು ಕ್ರಿಸ್ತನ ರಾಜ್ಯಕ್ಕೆ ವರ್ಗಾವಣೆ ಹೊಂದಿದ್ದೇವೆ. ಬೆಳಕು ಕತ್ತಲೆಗಿಂತ ಭಿನ್ನವಾಗಿದೆ. ಬೆಳಕಿನ ರಾಜ್ಯವು ಸಂಪೂರ್ಣವಾಗಿ ಕತ್ತಲೆಯ ರಾಜ್ಯಕ್ಕಿಂತ ವಿಭಿನ್ನವಾಗಿದೆ. "ನನ್ನ ರಾಜ್ಯವು ಈ ಲೋಕದ್ದಲ್ಲ" ಎಂಬುದಾಗಿ ಯೇಸು ಹೇಳಿದ್ದಾನೆ. ನಾವು ಸಂಬಂಧಿಸಿದ ರಾಜ್ಯವು "ಈ ಲೋಕದ ರಾಜ್ಯವಲ್ಲ". ಆದ್ದರಿಂದ ದೃಷ್ಟಿಕೋನಗಳು, ಜೀವನ ಶೈಲಿಗಳು, ಮೌಲ್ಯಗಳು, ಉದ್ದೇಶಗಳು – ಎಲ್ಲವೂ ಈ ಪ್ರಪಂಚದಲ್ಲಿರುವುದಕ್ಕಿಂತ ತುಂಬಾ ವಿಭಿನ್ನವಾಗಿರುವ ಒಂದು ರಾಜ್ಯದಲ್ಲಿ ನಾವಿದ್ದೇವೆ. ಅಪೊಸ್ತಲನಾದ ಯೋಹಾನನು ಹೀಗೆ ಬರೆದಿದ್ದಾನೆ: "ಅವರು ಲೋಕದಿಂದ ಹುಟ್ಟಿದವರಾಗಿದ್ದಾರೆ. ಈ ಕಾರಣದಿಂದ ಅವರು ಲೋಕ ಪ್ರೇರಿತರಾಗಿ ಮಾತಾಡುತ್ತಾರೆ. ಮತ್ತು ಲೋಕದವರು ಅವರ ಮಾತನ್ನು ಕೇಳುತ್ತಾರೆ. ನಾವಂತೂ ದೇವರಿಂದ ಹುಟ್ಟಿದವರಾಗಿದ್ದೇವೆ. ದೇವರನ್ನು ಬಲ್ಲವನು ನಮ್ಮ ಮಾತನ್ನು ಕೇಳುತ್ತಾನೆ" (1 ಯೋಹಾನನು 4:5,6). ಲೋಕದ ಜನರು ಲೋಕದವರಂತೆ ಮಾತನಾಡುತ್ತಾರೆ.

ನಾವು ದೇವ ಜನರು ದೇವರ ಜನರಂತೆ ಮಾತನಾಡುತ್ತೇವೆ. ನಮ್ಮ ಮಾತಿನಲ್ಲಿಯೂ ವಿಭಿನ್ನತೆಯಿದೆ. ಆದುದರಿಂದ ನಾವು ಹೊಸ ಮಾದರಿಯ ಮಾತನ್ನು ಹೊಂದಿಕೊಳ್ಳಬೇಕು. ಅಥವಾ ಮಾರ್ಪಡಿಸಿಕೊಳ್ಳಬೇಕು. ಅದೇ ರೀತಿಯಾಗಿ ಹೊಸ ರೀತಿಯ ಆಲೋಚನೆ, ಒಂದು ಹೊಸ ಕ್ರಿಯಾ ಮಾಲೆ ಮತ್ತು ಮನಸ್ಸಿನ ಒಂದು ಹೊಸ ಚೌಕಟ್ಟನ್ನು ನಾವು ಅಳವಡಿಸಿಕೊಳ್ಳಬೇಕು. ನಾವು ಇದನ್ನು "ದೇವರ ರಾಜ್ಯದ ಆಲೋಚನೆ" ಎಂದು ಕರೆಯುತ್ತೇವೆ.

ಯೇಸುವು ಆತನ ಉಪದೇಶದಲ್ಲಿ ದೇವರ ರಾಜ್ಯದ ಆಲೋಚನೆ ಮಾಡುವುದರ ಹೊಸ ಕ್ರಿಯಾ ಮಾಲೆಯನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾನೆ. ಬೆಳಕಿನ ರಾಜ್ಯದ ಜನರಾಗಿ ಅಧಿಕವಾಗಿ ನಾವು ಯೋಚಿಸುವಾಗ, ನಾವು ಅಧಿಕವಾಗಿ ದೇವರ ರಾಜ್ಯದ ಜನರಂತೆ ವರ್ತಿಸುತ್ತೇವೆ ಮತ್ತು ಭೂಮಿಯ ಮೇಲೆ ದೇವರ ರಾಜ್ಯವನ್ನು ಅಧಿಕವಾಗಿ ನಾವು ತೋರ್ಪಡಿಸುತ್ತೇವೆ (ಪ್ರದರ್ಶಿಸುತ್ತೇವೆ).

## ದೇವರ ರಾಜ್ಯದ ಚಿಂತನೆಯ ಚೌಕಟ್ಟು ಕಾರ್ಯ

ಚಿಂತನೆಗೆ "ಚೌಕಟ್ಟು" ಸೃಷ್ಟಿಸುವುದು ಒಳ್ಳೆಯದಾಗಿದೆ. ಕೆಲವೊಮ್ಮೆ ಉಲ್ಲೇಖನಗಳ ಒಂದು ಚೌಕಟ್ಟು ಎಂಬುದಾಗಿಯು ಸಹ ಕರೆಯಲ್ಪಡುತ್ತದೆ. ನಮ್ಮ ಪ್ರಸ್ತಾಪಗಳ ಚೌಕಟ್ಟು ದೇವರ ರಾಜ್ಯದ್ದಾಗಿರುವಾಗ ಮತ್ತು ನಮ್ಮ ಚಿಂತನೆಯ ಮಾದರಿಗಳು ಅಥವಾ ಚೌಕಟ್ಟು ದೇವರ ರಾಜ್ಯದ ಗುಣ ಸ್ವಭಾವದೊಡನೆ ಸಮನಾಂತರವಾಗಿರುವಾಗ ನಾವು ವಿಷಯಗಳನ್ನು ವಿಭಿನ್ನವಾಗಿ ಗ್ರಹಿಸುವುದು ಮಾತ್ರವಲ್ಲದೆ ನಮ್ಮ ದಿನನಿತ್ಯದ ಜೀವಿತದಲ್ಲಿ ದೇವರ ರಾಜ್ಯವನ್ನು ಸತ್ಯವಾಗಿ "ಮೊದಲು ಹುಡುಕುವವರಾಗಿ" ಇರಲೂ ಶಕ್ತರಾಗುತ್ತೇವೆ. ಈ ಕೆಳಗಿನ ಪ್ರತಿಯೊಂದು ಒಳನೋಟಗಳು ದೇವರ ರಾಜ್ಯದ ಚಿಂತನೆಗಾಗಿ ನಮ್ಮ ಚೌಕಟ್ಟುಗಳ ಭಾಗವಾಗಿ ಕಂಡು ಬರಲಿ.

## ದೈನಂದಿನ ಜೀವನಕ್ಕಾಗಿ ಉನ್ನತ ಗುಣಮಟ್ಟಗಳು

**ಮತ್ತಾಯ 5:21-30**
**21 ನರಹತ್ಯ ಮಾಡಬಾರದು, ನರಹತ್ಯ ಮಾಡುವವನು ನ್ಯಾಯವಿಚಾರಣೆಗೆ ಗುರಿಯಾಗುವನೆಂದು ಹಿರಿಯರಿಗೆ ಹೇಳಿಯದೆ ಎಂದು ಕೇಳಿದ್ದೀರಷ್ಟೆ**
**22 ಆದರೆ ನಾನು ನಿಮಗೆ ಹೇಳುವದೇನಂದರೆ – ತನ್ನ ಸಹೋದರನ ಮೇಲೆ ಸಿಟ್ಟುಗೊಳ್ಳುವ ಪ್ರತಿ ಮನುಷ್ಯನು ನ್ಯಾಯವಿಚಾರಣೆಗೆ ಗುರಿಯಾಗುವನು. ತನ್ನ ಸಹೋದರನನ್ನು ನೋಡಿ – ಛೀ ನೀಚಾ**

**ಅನ್ನುವವನು ನ್ಯಾಯಸಭೆಯ ವಿಚಾರಣೆಗೆ ಒಳಗಾಗುವನು. ಮೂರ್ಖ ಅನ್ನುವವನು ಅಗ್ನಿನರಕಕ್ಕೆ ಗುರಿಯಾಗುವನು.**
**23 ಆದಕಾರಣ ನೀನು ನಿನ್ನ ಕಾಣಿಕೆಯನ್ನು ಯಜ್ಞವೇದಿಯ ಹತ್ತಿರಕ್ಕೆ ತಂದಾಗ ನಿನ್ನ ಸಹೋದರನ ಮನಸ್ಸಿನಲ್ಲಿ ನಿನ್ನ ಮೇಲೆ ಏನೋ ವಿರೋಧವದೆ ಎಂಬದು ನಿನ್ನ ನೆನಪಿಗೆ ಬಂದರೆ**
**24 ನಿನ್ನ ಕಾಣಿಕೆಯನ್ನು ಆ ಯಜ್ಞವೇದಿಯ ಮುಂದೆಯೇ ಬಿಟ್ಟು ಹೋಗಿ ಮೊದಲು ನಿನ್ನ ಸಹೋದರನ ಸಂಗಡ ಒಂದಾಗು ಆ ಮೇಲೆ ಬಂದು ನಿನ್ನ ಕಾಣಿಕೆಯನ್ನು ಕೊಡು.**
**25 ನಿನ್ನ ವಾದಿಯ ಸಂಗಡ ಇನ್ನೂ ದಾರಿಯಲ್ಲಿರುವಾಗಲೇ ಅವನ ಕೂಡ ಬೇಗ ಸಮಾಧಾನ ಮಾಡಿಕೋ ಇಲ್ಲದಿದ್ದರೆ ಆ ವಾದಿಯು ನಿನ್ನನ್ನು ನ್ಯಾಯಾಧಿಪತಿಗೆ ಒಪ್ಪಿಸಾನು ನ್ಯಾಯಧಿಪತಿಯು ನಿನ್ನನ್ನು ಓಲೇಕಾರನ ಕೈಗೆ ಒಪ್ಪಿಸಿಕೊಟ್ಟಾನು ಆಗ ನೀನು ಸೆರೆಯಲ್ಲಿ ಬಿದ್ದೀಯೆ.**
**26 ನೀನು ಒಂದು ಕಾಸನ್ನಾದರೂ ನಿಲ್ಲಿಸಿಕೊಳ್ಳದೆ ಎಲ್ಲಾ ಸಲ್ಲಿಸುವ ತನಕ ಅಲ್ಲಿಂದ ಬರುವದೇ ಇಲ್ಲ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ.**
**27 ವ್ಯಭಿಚಾರ ಮಾಡಬಾರದೆಂದು ಹೇಳಿಯದೆ ಎಂಬದಾಗಿ ನೀವು ಕೇಳಿದ್ದೀರಷ್ಟೆ.**
**28 ಆದರೆ ನಾನು ನಿಮಗೆ ಹೇಳುವದೇನಂದರೆ ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು .**
**29 ನಿನ್ನ ಬಲಗಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಿತ್ತು ಬಿಸಾಡು ಬಿಡು ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವುದಕ್ಕಿಂತ ಆವಯವಗಳಲ್ಲಿ ಒಂದು ಹೋಗುವುದು ನಿನಗೆ ಹಿತವಲ್ಲವೇ.**
**30 ನಿನ್ನ ಬಲಗೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಡಿದು ಬಿಸಾಡಿಬಿಡು ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವುದಕ್ಕಿಂತ ಆವಯವಗಳಲ್ಲಿ ಒಂದು ಹೋಗುವುದು ನಿನಿಗೆ ಹಿತವಲ್ಲವೇ.**
(ಮಾರ್ಕ 9:43-50 ಸಹ ನೋಡಿರಿ).

ಹಳೇ ಒಡಂಬಡಿಕೆಯ ಕಾನೂನು ಬಹಳ ಭಾರವಾಗಿ ಕಾಣುತ್ತಿದ್ದರೆ, ಕರ್ತನಾದ ಯೇಸುವು ದೇವರ ರಾಜ್ಯಕ್ಕಾಗಿ ಜೀವಿಸುವುದರ ಗುಣಮಟ್ಟಗಳನ್ನು ವ್ಯಾಖ್ಯಾನಿಸಿ ಪ್ರತಿಬಂಧವನ್ನು ಹಲವಾರು ಹಂತಗಳಲ್ಲಿ ಹೆಚ್ಚಿಸಿದಂತಹ ದೇವರ ರಾಜ್ಯವನ್ನು ಪರಿಚಯಿಸಿದನು. ಇದು ತಪ್ಪು ಕಾರ್ಯವೇ ಮಾತ್ರವಲ್ಲದೇ (ಕೊಲೆ, ವ್ಯಭಿಚಾರ ಮುಂತಾದವು) ಪಾಪವಾಗಿದೆ. ಮತ್ತು ತಪ್ಪಾದ ಬಯಕೆಗಳ ಕಡೆಗೆ ನಿಷ್ಕ್ರಿಯ ಸಹನೆಯು ನಿರೀಕ್ಷಿತ ಪ್ರತಿಕ್ರಿಯೆಯಲ್ಲ. ಆದರೆ ಗಂಭೀರ ಮತ್ತು ಅದಕ್ಕೆ ಹತ್ತಿರವಾಗಿರುವ ಮತ್ತು ಅದರಲ್ಲಿರುವ ವೈಯಕ್ತಿಕವಾಗಿರುವುದನ್ನು ಸಂಕಟಕರವಾಗಿ ಪ್ರತ್ಯೇಕಿಸುತ್ತದೆ. ದೇವರ ರಾಜ್ಯವನ್ನು ಅನುಭವಿಸುವ ಕ್ರಮದಲ್ಲಿ ಇದನ್ನು ನಾವು ಮಾಡುತ್ತೇವೆ (ಮಾರ್ಕ 9:47).

ಇದು ನಮ್ಮ ಆಲೋಚನೆಗೆ ಸವಾಲು ಹಾಕುತ್ತದೆ. ಬಾಹ್ಯ ನಡವಳಿಕೆಯಿಂದ ನಾವೇ ಮತ್ತು ಇತರರಿಗೆ ನ್ಯಾಯ ತೀರಿಸಲು ನಾವು ಒಲವು ತೋರುತ್ತೇವೆ. ಆದರೆ ಕರ್ತನಾದ ಯೇಸುವು ಅದಕ್ಕೆ ಮೇಲೆ ಮೀರಿ ಹೋಗುತ್ತಾನೆ. ಮತ್ತು ಅಂತಹ ನಡವಳಿಕೆ – ಮನೋವೃತ್ತಿಗಳು, ಭಾವೋದ್ರೇಕಗಳು ಮತ್ತು ಹೃದಯದ ಬಯಕೆಗಳಿಗೆ ಕಾರಣವಾದ ಆಳವಾದ ಸಮಸ್ಯೆಗಳನ್ನು ಪತ್ತೆಮಾಡಲೂ ನಮಗೆ ಸವಾಲುಗಳನ್ನು ಹಾಕಿದ್ದಾನೆ. ನಾವುಗಳು ಕ್ರಿಯೆಗಳಿಂದ ನ್ಯಾಯ ತೀರ್ಪು ಹೊಂದುವುದು ಮಾತ್ರವಲ್ಲದೆ ನಮ್ಮ ಹೃದಯದ ಆಂತರಿಕ ನಿಶ್ಯಬ್ದವಾದ ವರ್ತನೆಗಳು, ಪ್ರಚೋದನೆಗಳಿಂದಲೂ ಸಹ ನ್ಯಾಯ ತೀರ್ಪು ಹೊಂದುತ್ತೇವೆ.

ದೇವರ ರಾಜ್ಯದ ಚಿಂತನೆಯು ಬಾಹ್ಯ ನಡವಳಿಕೆಗೆ ಮೀರಿ ಹೋಗುತ್ತದೆ ಮತ್ತು ಹೃದಯವನ್ನು ಪರಿಶೋಧಿಸುತ್ತದೆ. ತಪ್ಪು ಪ್ರೇರಣೆಗಳನ್ನು ಬಹಿರಂಗ ಪಡಿಸುತ್ತದೆ. ವರ್ತನೆಗಳು ಮತ್ತು ದುರಾಶೆಗಳನ್ನು ಯಾವುದೇ ವೆಚ್ಚವಿಲ್ಲದೆ ಅವುಗಳನ್ನು ತೆಗೆದು ಹಾಕುತ್ತದೆ.

## ಪ್ರೀತಿಯ ಬಲ

**ಮತ್ತಾಯ 5:43-44**
**43 ನಿನ್ನ ನೆರೆಯವನನ್ನು ಪ್ರೀತಿಸಿ ನಿನ್ನ ವೈರಿಯನ್ನು ಹಗೆ ಮಾಡಬೇಕೆಂದು ಹೇಳಿಯದೆ ಎಂಬದಾಗಿ ಕೇಳಿದ್ದೀರಷ್ಟೆ**
**44 ಆದರೆ ನಾನು ನಿಮಗೆ ಹೇಳುವದೇನಂದರೆ ನಿಮ್ಮ ವೈರಿಗಳನ್ನು ಪ್ರೀತಿಸಿರಿ . ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ.**

ದೇವರ ರಾಜ್ಯದಲ್ಲಿ , ನಾವು ಪ್ರೀತಿಯನ್ನು ಯೋಚಿಸುತ್ತೇವೆ ಮತ್ತು ನಮಗೆ ನೋವುಂಟು ಮಾಡಿದ ಮತ್ತು ತಪ್ಪು ಮಾಡಿದವರ ಕಡೆಗೆ ಪ್ರೀತಿಯಲ್ಲಿ ನಡೆಯುತ್ತೇವೆ. ಲೋಕದ ಜನರು ತಮಗೆ ಅನ್ಯಾಯವಾದ ಪರಿಸ್ಥಿತಿಯಲ್ಲಿ ಪ್ರತೀಕಾರ ತೀರಿಸುತ್ತಾರೆ. ಆದರೆ ದೇವರ ರಾಜ್ಯದ ಭಾಗವಾಗಿ ನಾವು ಪ್ರೀತಿಯೊಡನೆ ಪ್ರತಿಕ್ರಿಯೆ ತೋರುತ್ತೇವೆ. ಎಲ್ಲಿ ಪರಿಸ್ಥಿತಿಗಳನ್ನು ನಿಮ್ಮ ಹೃದಯದಲ್ಲಿ ಪ್ರೀತಿಯೊಡನೆ ನೋಡಿರಿ.

ದೇವರ ರಾಜ್ಯದ ಚಿಂತನೆಯು ದೇವರ ಪ್ರೀತಿಯು ನಡೆಸುವುದನ್ನು ಹಿಂಬಾಲಿಸುತ್ತದೆ.

## ನಂಬಿಕೆ

**ಮತ್ತಾಯ.6:31-33**
**31 "ಹೀಗಿರುವುದರಿಂದ- ಏನು ಊಟ ಮಾಡಬೇಕು, ಏನು ಕುಡಿಯಬೇಕು, ಏನು ಹೊದ್ದುಕೊಳ್ಳಬೇಕು ಎಂದು ಚಿಂತೆಮಾಡಬೇಡಿರಿ.**
**32ಇವೆಲ್ಲವುಗಳಿಗಾಗಿ ಅಜ್ಞಾನಿಗಳು ತವಕಪಡುತ್ತಾರೆ. ಇದೆಲ್ಲಾ ನಿಮಗೆ ಬೇಕಾಗಿದೆ ಎಂದು ಪರಲೋಕದಲ್ಲಿರುವ ನಿಮ್ಮ ತಂದೆಗೆ ತಿಳಿದದೆಯಷ್ಟೆ.**
**33ಹೀಗಿರುವುದರಿಂದ ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕ ಪಡಿರಿ ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು".**

**ಲೂಕ. 12:31-32**
**31 "ಆದರೆ ನೀವಾದರೋ ದೇವರ ರಾಜ್ಯಕ್ಕಾಗಿ ತವಕಪಡಿರಿ; ಇದರ ಕೂಡ ಅವೂ ನಿಮಗೆ ದೊರಕುವವು.**
**32ಚಿಕ್ಕ ಹಿಂಡೇ, ಹೆದರಬೇಡ; ಆ ರಾಜ್ಯವನ್ನು ನಿಮಗೆ ದಯಪಾಲಿಸುವುದಕ್ಕೆ ನಿಮ್ಮ ತಂದೆಯು ಸಂತೋಷವುಳ್ಳವನಾಗಿದ್ದಾನೆ.**

ಕರ್ತನಾದ ಯೇಸುವು ನಂಬಿಕೆಯ ವಿಷವಾಗಿ ಅನೇಕ ವಿಷಯಗಳನ್ನು ಬೋಧಿಸಿದ್ದಾನೆ. ದೈನಂದಿನ ಅಗತ್ಯಗಳ ಕ್ಷೇತ್ರ ಸೇರಿದಂತೆ ನಮ್ಮ ಜೀವನದ ಪ್ರತಿಯೊಂದು ಕ್ಷೇತ್ರಗಳು ದೇವರ ಮೇಲಿನ ನಂಬಿಕೆ ಪರಿಣಾಮ ಬೀರಬೇಕು.. "ಅವೆಲ್ಲವೂ" ಎನ್ನುವ ವಿಷಯ ಬರುವಾಗ, ದೇವರಲ್ಲಿ ನಂಬಿಕೆ ಇಡಬೇಕೆಂದು ಆತನು ಬೋಧಿಸುತ್ತಾನೆ. ದೇವರ ರಾಜ್ಯದ ಜನಗಳಂತೆ, ದೇವರಲ್ಲಿ ನಂಬಿಕೆಯಿಟ್ಟು ಜೀವಿಸಬೇಕು. ಸಂದೇಹಕ್ಕೂ ಮೀರಿದ ವಿಷಯಕ್ಕೆ ನಾವು ಬರಬೇಕು ಅದು ನಮಗೆ ದೇವರ ರಾಜ್ಯವು ಅನುಗ್ರಹವಾಗಲು ತಂದೆಯ ಒಳ್ಳೆಯ ಇಚ್ಛೆಯಾಗಿದೆ. ಇತರೆ ನುಡಿಗಳಲ್ಲಿ ಹೇಳಬೇಕಾದರೆ, ದೇವರು ನಮ್ಮ ಜೀವನದ ಅವಶ್ಯಕತೆಗಳನ್ನೂ ಮಾತ್ರವಲ್ಲ ಆತನ ಅವಶ್ಯಕತೆಗಳನ್ನೂ ಅನುಗ್ರಹಿಸುವವನಾಗಿದ್ದಾನೆ.ದೇವರ ರಾಜ್ಯವನ್ನೇ ಕರ್ತನು ಕೊಡುವಲ್ಲಿ, "ಅವೆಲ್ಲವೂ" ಎಂಬ ವಾಕ್ಯದಲ್ಲಿರುವಂತೆ, ಎಲ್ಲವನ್ನು ನಮಗೆ ಕೊಡುವುದಿಲ್ಲವೋ? ಹಾಗಾದರೆ ಭಯವು ನಿಮ್ಮ ಹೃದಯವನ್ನು ಆವರಿಸದಿರಲಿ. ನಂಬಿಕೆಯು ಏಳಲಿ! ದೇವರ ರಾಜ್ಯವನ್ನು ಹೊಂದಿಕೊಳ್ಳಿರಿ, ಪರಲೋಕರಾಜ್ಯವನ್ನೇ ಕೊಡಲಿಚ್ಛಿಸುವ ದೇವರು "ಎಲ್ಲವನ್ನೂ" ಈ ಜೀವಿತಕಾಲಾವಧಿಯಲ್ಲಿ ಅನುಗ್ರಹಿಸುವನು.

ದೇವರಲ್ಲಿನ ನಂಬಿಕೆಯು ದೇವರರಾಜ್ಯದ ವಿಷಯವಾಗಿ ಆಲೋಚಿಸಲು ಸ್ಫೂರ್ತಿದಾಯಕವಾಗುತ್ತದೆ.

## ರಾಜನ ನಿಮಿತ್ತ

**ಮಾರ್ಕ. 8:34,35**
**34 ಆಮೇಲೆ ಆತನು ತನ್ನ ಶಿಷ್ಯರ ಜೊತೆಗೆ ಜನರ ಗುಂಪನ್ನೂ ಹತ್ತಿರ ಕರೆದು ಅವರಿಗೆ ಹೇಳಿದ್ದೇನೆಂದರೆ – ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ.**
**34ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅಂದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿಯೂ ಸುವಾರ್ತೆಯ ನಿಮಿತ್ತವಾಗಿಯೂ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು.**
(ಮತ್ತಾಯ. 10:39, 16:25;ಲೂಕ. 9:24, 17:33;ಯೋಹಾನ. 12:25 ಅನ್ನೂ ನೋಡಿರಿ)

ದೇವರ ರಾಜ್ಯದ ಜನರು "ಕಳೆದುಕೊಳ್ಳು" ಈ ಪದವನ್ನು ಗೌರವವೆಂದು ಲೆಕ್ಕಿಸುವರು, ಅದು ಆ ರಾಜನ ಮತ್ತು ಆತನ ರಾಜ್ಯದ ನಿಮಿತ್ತವಾಗಿ.ವಾಸ್ತವವಾಗಿ, ನಾವು ಅದನ್ನು ಒಂದು sಸವಲತ್ತು ಮತ್ತು ಇದಕ್ಕಾಗಿ ನಮಗೆ ಈ ಜೀವಿತದಲ್ಲಿ ಮಾತ್ರ ಅವಕಾಶವಿರುತ್ತದೆ. ಪರಲೋದಲ್ಲಿ ನಮಗೆ ಯಾವುದೇ ರೀತಿಯ ತ್ಯಾಗಮಾಡುವ ಸಂಗತಿಗಳಿರುವುದಿಲ್ಲ! ಒಬ್ಬರ ಜೀವಿತದಲ್ಲಿ "ಕಳೆದುಕೊಳ್ಳು" ಎಂದರೆ, ಒಬ್ಬರ ಸ್ವಂತ ಹಿತಾಸಕ್ತಿಗಳನ್ನು ಪೂರೈಸುವ ಕೆಲುವು ಅವಕಾಶವನ್ನು ಬಿಟ್ಟುಕೊಡುವುದು, ಆದರೆ ದೇವರ ರಾಜ್ಯವನ್ನು ಮುನ್ನಡೆಸಲು ಒಬ್ಬರನ್ನು ಇರಸಿಕೊಳ್ಳಬೇಕಾಗಿರುವುದಿಲ್ಲ. ಒಬ್ಬನು ಈ ಜೀವಿತದಲ್ಲಿ ಆ ರಾಜನ ನಿಮಿತ್ತ ಹಾಗೂ ಸುವಾರ್ತೆಯ ನಿಮಿತ್ತ "ಕಳೆದುಕೊಳ್ಳು" ಎಂದರೆ, ಇತರರು ಇಷ್ಟಪಡದೇ ಇರುವ ಕೆಲವು ಕಾರ್ಯಗಳನ್ನು ಜವಾಬ್ದಾರಿಯುತವಾಗಿ

ಕೈಗೆತ್ತಿಕೊಳ್ಳುವುದು, ಸಾಧಾರಣವಾಗಿ ಹೇಳಬೇಕೆಂದರೆ ಈ ಭೂಮಿಯ ಮೇಲೆ ಕರ್ತನು ತನ್ನ ರಾಜ್ಯವನ್ನು ಮುನ್ನಡೆಸಬೇಕೆಂದು ಬಯಸುತ್ತಾನೆ. ಈ ರೀತಿಯ ನಿರ್ಣಯಗಳು ಲೋಕದ ದೃಷ್ಟಿಯಲ್ಲಿ ಹುಚ್ಚುತನವಾಗಿ ತೋರಿದರೂ ದೇವರ ರಾಜ್ಯದಲ್ಲಿರುವವರಿಗೆ ಶ್ರೇಷ್ಠವಾದ ಗೌರವವಾಗಿ ಆಲೋಚಿಸಲ್ಪಡುತ್ತದೆ. ಅದುವೇ ಆ ರಾಜನ ನಿಮಿತ್ತ!

ದೇವರ ರಾಜ್ಯದ ಆಲೋಚನೆಯು, "ನಷ್ಟ" ಎಂಬ ಗ್ರಹಿಕೆ ಬಾರದೇ ಆ ರಾಜನ ನಿಮಿತ್ತ ಶ್ರೇಷ್ಠವೆಂದೇ ಪರಿಗಣಿಸಲ್ಪಡುತ್ತದೆ.

## ಮಕ್ಕಳೆಂಬ ಮನೋಭಾವನೆ

**ಮತ್ತಾಯ. 18:1–4**
**1ಆ ವೇಳೆಯಲ್ಲಿ ಶಿಷ್ಯರು ಯೇಸುವಿನ ಬಳಿಗೆ ಬಂದು- ಪರಲೋಕದಲ್ಲಿ ಯಾವನು ಹೆಚ್ಚಿನವನು ಎಂದು ಕೇಳಲು**
**2ಆತನು ಚಿಕ್ಕಮಗುವನ್ನು ಹತ್ತರಕ್ಕೆ ಕರೆದು ಅವರ ನಡುವೆ ನಿಲ್ಲಿಸಿ**
**3ಅವರಿಗೆ- ನೀವು ತಿರುಗಿಕೊಂಡು ಚಿಕ್ಕಮಕ್ಕಳಂತೆ ಆಗದೆ ಹೋದರೆ ನೀವು ಪರಲೋಕರಾಜ್ಯದಲ್ಲಿ ಸೇರುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. 4ಹೀಗಿರುವುದರಿಂದ ಯಾವನು ಈಚಿಕ್ಕಮಗುವಿನಂತೆ ತನ್ನನ್ನು ತಗ್ಗಿಸಿಕೊಳ್ಳುತ್ತಾನೋ, ಅವನೇ ಪರಲೋಕರಾಜ್ಯದಲ್ಲಿ ಹೆಚ್ಚಿನವನು**.
(ಮಾರ್ಕ. 10:13–15ದಲ್ಲಿಯೂ ನೋಡಿರಿ.)

**ಮತ್ತಾಯ. 19:14**
**ಆದರೆ ಯೇಸು – ಮಕ್ಕಳನ್ನು ಬಿಡಿರಿ; ನನ್ನ ಕತ್ತರ ಬರುವುದಕ್ಕೆ ಅವುಗಳಿಗೆ ಅಡ್ಡಿಮಾಡಬೇಡಿರಿ; ಪರಲೋಕರಾಜ್ಯವು ಇಂಥವರದ್ದೇ ಎಂದು ಹೇಳಿದನು.**

**ಮಾರ್ಕ. 10:15**
**ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನು ಶಿಶುಭಾವದಿಂದ ದೇವರ ರಾಜ್ಯವನ್ನು ಅಂಗೀಕರಿಸುವುದಿಲ್ಲವೋ ಅವನು ಅದರಲ್ಲಿ ಸೇರುವುದೇ ಇಲ್ಲ ಎಂದು ಹೇಳಿದನು.**

ಶ್ರೇಷ್ಠತೆಯೆಡೆಗೆ (ನಿಲುವು, ಗೌರವ ಅಥವಾ ಮಹತ್ವ) ಪ್ರವೇಶಿಸಲು ಇದರರ್ಥ ಒಬ್ಬನು ಚಿಕ್ಕಮಗುವಿನಂತಾಗಬೇಕು. ದೇವರು ಚಿಕ್ಕಪ್ರಾಯದವರ್ತನೆ ಅಲ್ಲ ಆದರೆ ಚಿಕ್ಕಮಕ್ಕಳಹಾಗೆ ಆತನೊಂದಿಗೆ ನಮ್ಮ ಸಂಬಂಧ ಇರಬೇಕಾಗಿ ಬಯಸುವವನಾಗಿದ್ದಾನೆ. ಒಂದು ಮಗುವು ತನ್ನ ಪೋಷಕರು ಪೋಷಿಸುವ, ಬಟ್ಟೆಬರೆಗಳನ್ನು ಇತ್ಯಾದಿಗಳನ್ನು ಅನುಗ್ರಹಿಸಲು ಆಗುವುದಿಲ್ಲೋ ಎಂದು ಪ್ರಶ್ನಿಸುವ ಸಾಮರ್ಥ್ಯ ಹೊಂದಿರುವುದಿಲ್ಲ. ಆದರೆ ಚಿತ್ತಾಪೋರ್ವಕವಾಗಿ ತನ್ನನ್ನು ತಾನು ತಂದೆ-ತಾಯಿಗಳಿಗೆ ಅಧಿಕವಾಗಿ ಸಮರ್ಪಿಸಿಕೊಡುತ್ತದೆ. ಚಿಕ್ಕ ಮಗುವು ತನ್ನ ಪೋಷಕರನ್ನು ಸಂದೇಹಪಡುವುದಿಲ್ಲ. ತಂದೆಗೆ ಸಂಬಂಧಪಟ್ಟಂತೆ ಹಿರಿಯ ವ್ಯಕ್ತಿಗಳು ಚಿಕ್ಕಮಕ್ಕಳಂತೆ ತಗ್ಗಿಸುವ ಮನೋಭಾವನೆಗಳನ್ನು ಹೊಂದಿರಬೇಕು. ಇದನ್ನೇ ದೇವರು ನಮ್ಮಿಂದ ಬಯಸುವವನಾಗಿದ್ದಾನೆ. ನಾವು ಯಾವಾಗಲಾದರೂ "ಚಿಕ್ಕ ಮಕ್ಕಳಂತೆ" ತಂದೆಯನ್ನು ಆತುಕೊಂಡಿರುವುದಾದರೆ, ಆತನ ರಾಜ್ಯವನ್ನು ಅನುಭವಿಸುತ್ತೇವೆ. ಪರಲೋಕದ

ತಂದೆಯ ವಾಕ್ಯವನ್ನು ಭರವಸೆಇಡುವಂತೆ ಚಿಕ್ಕಮಕ್ಕಳ ಮನೋಭಾವನೆ ಹೊಂದಿರುವವರುವಂಥವರಿಂದಲೇ ದೇವರ ರಾಜ್ಯವು ಮಾಡಲ್ಪಟ್ಟಿರುತ್ತದೆ.

ದೇವರ ರಾಜ್ಯದ ಆಲೋಚನೆಯೇ ಮಕ್ಕಳಂತಿರುವವರಾಗಿರುತ್ತಾರೆ, ತಂದೆಯನ್ನು ಬಿಡುವಂಥ ಮಾತೇ ಇರುವುದಿಲ್ಲ.

## ಸೇವಕನ ತಗ್ಗಿಸುವಿಕೆಯ ಮನೋಭಾವನೆ.

**ಮತ್ತಾಯ. 20:20–28**
**20 ಆಗ ಜೆಬೆದಾಯನ ಮಕ್ಕಳ ತಾಯಿ ಆತನಿಂದ ಏನೋ ಒಂದು ಬೇಡಿಕೊಳ್ಳಬೇಕೆಂದು ತನ್ನ ಮಕ್ಕಳನ್ನು ಕರಕೊಂಡು ಬಂದು ಆತನಿಗೆ ಅಡ್ಡಬಿದ್ದಳು.**
**21 ಆತನು ಆಕೆಯನ್ನು- ನಿನಗೇನು ಬೇಕಮ್ಮಾ ಎಂದು ಕೇಳಲು ಆಕೆ- ನಿನ್ನ ರಾಜ್ಯದಲ್ಲಿ ನನ್ನ ಈ ಇಬ್ಬರು ಮಕ್ಕಳಲ್ಲಿ ಒಬ್ಬನು ನಿನ್ನ ಬಲಗಡೆಯಲ್ಲೂ ಮತ್ತೊಬ್ಬನು ಎಡಗಡೆಯಲ್ಲೂ ಕೂತುಕೊಳ್ಳುವುದಕ್ಕೆ ಅಪ್ಪಣೆಯಾಗಬೇಕು ಅಂದಳು.**
**22 ಅದಕ್ಕೆ ಯೇಸು- ನೀವು ಬೇಡಿಕೊಂಡದ್ದು ಏನು ಎಂದು ನಿಮಗೆ ತಿಳಿಯದು ನಾನು ಕುಡಿಯಬೇಕಾಗಿರುವ ಪಾತ್ರೆಯಲ್ಲಿ ನೀವು ಕುಡಿಯುವುದು ನಿಮ್ಮಿಂದಾದೀತೇ ಎಂದು ಕೇಳಲು ಅವರು – ಆಗುವುದು ಅಂದರು.**
**23ಆಗ ಆತನು ಅವರಿಗೆ - ನನ್ನ ಪಾತ್ರೆಯಲ್ಲಿ ನೀವು ಕುಡಿಯುವಿರಿ ಸರಿ; ಆದರೆ ನನ್ನ ಎಡ-ಬಲಗಡೆಗಳಲ್ಲಿ ಕೂತುಕೊಳ್ಳುವಂತೆ ಅನುಗ್ರಹ ಮಾಡುವುದು ನನ್ನದಲ್ಲ; ನನ್ನ ತಂದೆಯಿಂದ ಅದು ಯಾರಿಗೆಂದು ಸಿದ್ಧಪಡಿಸಿದೆಯೋ ಅವರಿಗೇ ಸಿಕ್ಕುವುದು ಎಂದು ಹೇಳಿದನು.**
**24 ಉಳಿದ ಹತ್ತು ಮಂದಿ ಶಿಶ್ಯರು ಇದನ್ನು ಕೇಳಿ ಆ ಇಬ್ಬರು ಅಣ್ಣ-ತಮ್ಮಂದಿರ ಮೇಲೆ ಸಿಟ್ಟುಗೊಂಡರು.**
**25 ಆದರೆ ಯೇಸು ಅವರನ್ನು ಹತ್ತಿರಕ್ಕೆ ಕರೆದು ಅವರಿಗೆ- ಜನಗಳನ್ನಾಳುವವರು ಅವರ ಮೇಲೆ ಅಹಂಕಾರದಿಂದ ದೊರೆತನಮಾಡುತ್ತಾರೆ, ಮತ್ತು ದೊಡ್ಡವರು ಬಲಾತ್ಕಾರದಿಂದ ಅಧಿಕಾರ ನಡಿಸುತ್ತಾರೆ ಎಂದು ನೀವು ಬಲ್ಲಿರಷ್ಟೆ.**
**26 ನಿಮ್ಮಲ್ಲಿ ಹಾಗಿರಬಾರದು; ಆದರೆ ನಿಮ್ಮಲ್ಲಿ ದೊಡ್ಡವನಾಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು;**
**27 ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿರುವವನು ನಿಮ್ಮ ಆಳಾಗಿರಬೇಕು.**
**28 ಹಾಗೆಯೇ ಮನುಷ್ಯಕುಮಾರನು ಸೇವೆಮಾಡಿಸಿಕೊಳ್ಳುವುದಕ್ಕೆ ಬರಲಿಲ್ಲ, ಸೇವೆಮಾಡುವುದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವುದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವುದಕ್ಕೂ ಬಂದನು ಎಂದು ಹೇಳಿದನು.**

ದೇವರರಾಜ್ಯದಲ್ಲಿನ ಶ್ರೇಷ್ಠತೆಯು ಯಾಕೋಬ ಮತ್ತು ಯೋಹಾನರ ತಾಯಿಯು ಅಂದುಕೊಂಡಂತೆ ಒಂದು ಸ್ಥಾನವನ್ನು ಹಿಡಿದಿಟ್ಟುಕೊಳ್ಳುವ ಮೂಲಕ ಬರುವುದಿಲ್ಲ ಬದಲಿಗೆ ನಾವು ನಮ್ಮ ಸ್ಥಾನಗಳನ್ನು ಬಿಟ್ಟುಕೊಡುಚುದರಿಂದ ರಾಜ್ಯದಲ್ಲಿ ಶ್ರೇಷ್ಠತೆ ಬರುತ್ತದೆ, ಸೇವೆ ಮಾಡಬಹುದು ಮತ್ತು ಇತರರಿಗೆ ಸೇವೆ ಸಲ್ಲಿಸಲು ನಮ್ಮನ್ನು ವಿನಮ್ರಗೊಳಿಸಬಹುದು. ಇದು ಮಾಡಬೇಕು ನಮ್ಮ ಆಲೋಚನೆಯ ಭಾಗವಾಗಿದೆ. ಸೇವೆಕತ್ವವನ್ನು ಯೋಚಿಸಬೇಕು. ನಿಮ್ಮ ಜೀವನವನ್ನು ಇತರರಿಗಾಗಿ ನೀಡಲು ಯೋಚಿಸಿ. ಇತರರನ್ನು ಸೇವೆಮಾಡಲು. ಆಮೇಲೆ ಸೇವೆಸಲ್ಲಿಸಿರಿ. ಯೇಸುವು ಹೇಳಿರುವುದನ್ನು ಜ್ಞಾಪಕಮಾಡಿಕೊಳ್ಳಿರಿ, “ಶಾಂತರು ಧನ್ಯರು, ಅವರು ಭೂಮಿಗೆ ಬಾಧ್ಯರಾಗುವರು” (ಮತ್ತಾಯ. 5:5).

ಇತರರು ಸೇವೆ ಮಾಡಲು ನಾವು ನಮ್ಮನ್ನು ವಿನಮ್ರಗೊಳಿಸಿದಾಗ, ದೇವರರಾಜ್ಯ ಚಿಂತನೆಗೆ ತಿಳಿದಿದೆ ನಾವು ರಾಜನಂತೆ ಇದ್ದೇವೆ, ಆತನನ್ನೇ ಪ್ರತಿನಿಧಿಸುವೆವು.

## ರಾಜನ ದೃಷ್ಟಿಕೋನದಂತೆ ಆಚರಿಸುವುದು.

**ಮತ್ತಾಯ. 20:1–16**

**1 ಪರಲೋಕರಾಜ್ಯವು ಒಬ್ಬ ಮನೆಯ ಯಜಮಾನನಿಗೆ ಹೋಲಿಕೆಯಾಗಿದೆ. ಅವನು ತನ್ನ ದ್ರಾಕ್ಷೇತೋಟಕ್ಕೆ ಕೂಲೀ ಆಳುಗಳನ್ನು ಕರೆಯುವುದಕ್ಕೆ ಬೆಳಿಗ್ಗೆ ಹೊರಟನು.**
**2 ಆಳಿಗೆ ದಿನಕ್ಕೆ ಒಂದು ಪಾವಲಿಯಂತೆ ಕೂಲಿ ಗೊತ್ತು ಮಾಡಿ ಅವರನ್ನು ದ್ರಾಕ್ಷೇತೋಟಕ್ಕೆ ಕಳುಹಿಸಿದನು.**
**3 ತರುವಾಯ ಹೆಚ್ಚುಕಡಿಮೆ ಒಂಭತ್ತು ಗಂಟೆಗೆ ಹೋಗಿ ಪೇಟೆಯಲ್ಲಿ ಸುಮ್ಮನೆ ನಿಂತಿದ್ದ ಇನ್ನು ಕೆಲವರನ್ನು ಕಂಡು-**
**4 ನೀವು ಸಹ ನನ್ನ ದ್ರಾಕ್ಷೇತೋಟಕ್ಕೆ ಹೋದರು.**
**5 ಅವನು ತಿರುಗಿ ಹೆಚ್ಚುಕಡಿಮೆ ಹನ್ನೆರಡು ಗಂಟೆಗೆ ಮತ್ತು ಮೂರು ಗಂಟೆಗೆ ಹೋಗಿ ಅದೇ ಪ್ರಕಾರ ಮಾಡಿದನು.**
**6 ತಿರುಗಿ ಹೆಚ್ಚುಕಡಿಮೆ ಸಾಯಂಕಾಲ ಐದು ಗಂಟೆಗೆ ಹೋಗಿ ಬೇರೆ ಕೆಲವರು ನಿಂತಿರುವುದನ್ನು ಕಂಡು ಅವರನ್ನು - ದಿನವೆಲ್ಲಾ ಇಲ್ಲಿ ಯಾಕೆ ಸುಮ್ಮನೆ ನಿಂತಿದ್ದೀರಿ ಎಂದು ಕೇಳಲು**
**7 ಅವರು – ಯಾರೂ ನಮ್ಮನ್ನು ಕೂಲಿಗೆ ಕರೆಯಲಿಲ್ಲ ಅಂದಾಗ ಅವನು - ನೀವೂ ಸಹ ನನ್ನ ದ್ರಾಕ್ಷೇತೋಟಕ್ಕೆ ಹೋಗಿರಿ ಅಂದನು.**
**8 ಸಂಜೆಹೊತ್ತಿಗೆ ದ್ರಾಕ್ಷೇತೋಟದ ಯಜಮಾನನು ತನ್ನ ಪಾರುಪತ್ಯಗಾರನಿಗೆ- ಆ ಆಳುಗಳನ್ನು ಕರೆದು ಕಡೆಗೆ ಬಂದವರನ್ನು ಮೊದಲುಮಾಡಿಕೊಂಡು ಮೊದಲು ಬಂದವರ ತನಕ ಅವರಿಗೆ ಕೂಲಿಕೊಡು ಎಂದು ಹೇಳಿದನು.**
**9 ಆಗ ಸಾಯಂಕಾಲ ಐದು ಗಂಟೆಗೆ ಬಂದವರಿಗೆ ಒಂದೊಂದು ಪಾವಲಿ ಸಿಕ್ಕಿತು.**
**10 ತರುವಾಯ ಮೊದಲಿನವರು ಬಂದು ತಮಗೆ ಹೆಚ್ಚುದೊರೆಯುವುದೆಂದು ನೆನಸಿದರು; ಆದರೆ ಇವರಿಗೆ ಸಹ ಒಂದೊಂದು ಪಾವಲಿಯೇ ಸಿಕ್ಕಿತು.**
**11 ಅದನ್ನು ತೆಗೆದುಕೊಂಡು ಮನೆಯ ಯಜಮಾನನ ಮೇಲೆ ಗುಣಗುಟ್ಟಿ –**
**12 ಕಡೆಗೆ ಬಂದು ಇವರು ಒಂದು ತಾಸು ಹೊತ್ತು ಮಾತ್ರ ಕೆಲಸ ಮಾಡಿದ್ದಾರೆ, ನಾವು ದಿನವೆಲ್ಲಾ ಬಿಸಿಲಿನಲ್ಲಿ ಕೆಲಸ ಮಾಡಿ ಕಷ್ಟಪಟ್ಟಿದ್ದೇವೆ; ಇವರನ್ನು ನಮಗೆ ಸಮ ಮಾಡಿದ್ದೀಯೆ ಅಂದರು.**
**13 ಅದಕ್ಕೆ ಅವನು ಅವರಲ್ಲಿ ಒಬ್ಬನಿಗೆ-ಏನಪ್ಪಾ, ನಾನು ನಿನಗೆ ಅನ್ಯಾಯ ಮಾಡಲಿಲ್ಲ; ನೀನು ನನ್ನ ಸಂಗಡ ಒಂದು ಪಾವಲಿಗೆ ಒಡಂಬಟ್ಟಿಯಲ್ಲಾ;**
**14 ನಿನ್ನ ಕೂಲಿ ತಕ್ಕೊಂಡು ಹೋಗು; ನಿನಗೆ ಕೊಟ್ಟಂತೆ ಕಡೆಗೆ ಬಂದ ಇವನಿಗೂ ಕೊಡುವುದಕ್ಕೆ ನನಗೆ ಮನಸ್ಸುಂಟು.**
**15 ನನ್ನ ಬದುಕನ್ನು ನಾನು ಬೇಕಾದ ಹಾಗೆ ಮಾಡಬಹುದಲ್ಲವೋ? ನಾನು ಒಳ್ಳೆಯವನಾಗಿರುವುದು ನಿನ್ನ ಕಣ್ಣನ್ನು ಒತ್ತುತ್ತದೆಯೋ ಎಂದು ಹೇಳಿದನು.**
**16 ಈ ಪ್ರಕಾರ ಕಡೆಯವರು ಮೊದಲಿನವರಾಗುವರು, ಮೊದಲಿನವರು ಕಡೆಯವರಾಗುವರು ಎಂದು ಹೇಳಿದನು.**

ಕರ್ತನಾದ ಯೇಸುವು ಈ ಕಥೆಯ ರೀತಿಯಲ್ಲೇ ದೇವರು ತನಗಿರುವುದನ್ನು ತಾನು ಬೇಕಾದಹಾಗೆ ತನಗೆ ಬೇಕಾದವರಿಗೆ ಕೊಡುವುದಾಗಿ ಪ್ರಚುರಪಡಿಸಿರುತ್ತಾನೆ. ದೇವರು ತನ್ನ ಜನರ ಮೂಲಕ ಬಳಸಲು, ಪ್ರತಿಫಲ ನೀಡಲು ಮತ್ತು ಕೆಲಸ ಮಾಡಲು ಆತನೇ ನಿರ್ಧರಿಸುತ್ತಾನೆ. ನಾವು ದೇವರನ್ನು ಆತನ ಕೆಲಸಗಳ ಮೂಲಕ ಮತ್ತು ಈ ಲೋಕದ ನಿಯಮಗಳ ಪ್ರಕಾರ ನಿರ್ದೇಶಿಸುತ್ತಾನೆ. ಅನೇಕಭಾರಿ, ನಮ್ಮ ಸ್ವಂತ ಗ್ರಹಿಕೆಗಳು ಮತ್ತು

ನಮ್ಮದೇ ಅಳತೆ ಮಾನದಂಡಗಳ ಮೂಲಕ ದೇವರು ಇತರರಿಗಾಗಿ ಏನು ಮಾಡುತ್ತಿದ್ದಾನೆ ಎಂದು ನಿರ್ಣಯಿಸುವ ತಪ್ಪನ್ನು ನಾವು ಮಾಡುತ್ತೇವೆ. ಮತ್ತು ಅಪೋಸ್ತಲನಾದ ಪೌಲನು ಬರೆಯುವ ಹಾಗೆ, "ಮತ್ತೊಬ್ಬನ ಸೇವಕನ ವಿಷಯವಾಗಿ ತೀರ್ಪುಮಾಡುವುದಕ್ಕೆ ನೀನು ಯಾರು? ಅವನು ನಿರ್ದೋಷಿಯಾಗಿ ನಿಂತರೂ ದೋಷಿಯಾಗಿ ಬಿದ್ದರೂ ಅದು ಅವನ ಯಜಮಾನನಿಗೇ ಸೇರಿದ್ದು. ಅವನು ನಿರ್ದೋಷಿಯಾಗಿ ನಿಲ್ಲಿಸಲ್ಪಡುವನು; ಅವನನು ನಿಲ್ಲಿಸುವುದಕ್ಕೆ ಕರ್ತನು ಶಕ್ತನಾಗಿದ್ದಾನೆ"(ರೋಮಾ. 14:4).

ದೇವರು ತನ್ನ ಜನರ ಮೂಲಕವಾಗಿ ಮಾಡುವ ಕಾರ್ಯಗಳಿಗಾಗಿ ಹರ್ಷಿಸುವಂಥದ್ದು. ದೇವರು ಕಾರ್ಯಪ್ರವೃತ್ತನಾಗಿರುವವರೆಗೂ ನಾವು ಹರ್ಷಿಸೋಣ.

## ದೇವರ ರಾಜ್ಯದ ಬಗೆಹರಿಸುವಿಕೆ

**ಲೂಕ 9:57-62**
**57 ಅವರು ದಾರಿಯಲ್ಲಿ ಹೋಗುತ್ತಿರುವಾಗ ಯಾವನೋ ಒಬ್ಬನು ಯೇಸುವಿಗೆ ನೀನು ಎಲ್ಲಿಗೆ ಹೋದರೂ ನಾನು ನಿನ್ನ ಹಿಂದ ಬರುತ್ತೇನೆ ಎಂದು ಹೇಳಲು**
**58 ಆತನು ಅವನಿಗೆ ನರಿಗಳಿಗೆ ಗುದ್ದುಗಳಿವೆ, ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ ಗೂಡುಗಳವೆ ಆದರೆ ಮನುಷ್ಯಕುಮಾರನಿಗೆ ತಲೆಯಿಡುವಷ್ಟು ಸ್ಥಳವೂ ಇಲ್ಲ ಎಂದು ಹೇಳಿದನು.**
**59 ಆತನು ಮತ್ತೊಬ್ಬನಿಗೆ – ನನ್ನನ್ನು ಹಿಂಬಾಲಿಸು ಎಂದು ಹೇಳಲು ಅವನು - ಸ್ವಾಮಿ ನಾನು ಮೊದಲು ಹೋಗಿ ನನ್ನ ತಂದೆಯ ಉತ್ತರಕ್ರಿಯೆಗಳನ್ನು ಮಾಡಿಬರುವಂತೆ ನನಗೆ ಅಪ್ಪಣೆಯಾಗಬೇಕು ಅಂದನು**
**60 ಆದರೆ ಆತನು ಅವನಿಗೆ – ಸತ್ತವರೇ ತಮ್ಮವರಲ್ಲಿ ಸತ್ತು ಹೋದವರ ಉತ್ತರ ಕ್ರಿಯೆಗಳನ್ನು ಮಾಡಲಿ ನೀನಂತೂ ಹೋಗಿ ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸು ಎಂದು ಹೇಳಿದನು.**
**61 ಇನ್ನೊಬ್ಬನು ಸಹ ಸ್ವಾಮಿ ನಿನ್ನನ್ನು ಹಿಂಬಾಲಿಸುತ್ತೇನೆ ಆದರೆ ಮೊದಲು ನನ್ನ ಮನೆಯವರಿಗೆ ಹೇಳಿ ಬರುವದಕ್ಕೆ ಅಪ್ಪಣೆ ಯಾಗಬೇಕು ಅಂದನು.**
**62 ಯೇಸು ಅವನಿಗೆ ಯಾವನಾದರೂ ನೇಗಿಲಿನ ಮೇಲೆ ತನ್ನ ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲವೆಂದು ಹೇಳಿದನು.**

ಯೇಸುವು ಈ ಪುರುಷರಿಗೆ ಪ್ರಸ್ತುತಪಡಿಸುತ್ತಿರುವ ಸವಾಲು ನಿಶ್ಚಯವಾಗಿ ತಂದೆಯ ಉತ್ತರಕ್ರಿಯೆಗಳನ್ನು ಮಾಡುವ ಅಥವಾ ಮನೆಯವರಿಗೆ ಹೇಳಿ ಬರುವಂತಹ ಬೆಳಕಿನಲ್ಲಿ ವಿಶಿಷ್ಟವಾಗಿ ಒರಟಾದಂತೆ ಕಾಣಿಸುತ್ತದೆ. ಅರಸನನ್ನು "ಹಿಂಬಾಲಿಸಬೇಕಾ"? ಇಹಲೋಕದ ಕಟ್ಟುಪಾಡುಗಳನ್ನು ಮತ್ತು ಇಹಲೋಕದ ವಾತ್ಸಲ್ಯಗಳನ್ನು ಕಡೆಗಣಿಸಿ ದೇವರ ರಾಜ್ಯಕ್ಕಾಗಿ ನಿಮ್ಮ ನಿಯೋಜನೆಯನ್ನು ಆತನು ನಿರೀಕ್ಷಿಸುತ್ತಾನೆ.

ನಿಮ್ಮ ಮನೆಗೆ ಹೋಗಿ ಉತ್ತರ ಕ್ರಿಯೆಯನ್ನು ಮಾಡುತ್ತಿದ್ದರೆ ನಿಮ್ಮ ಜೀವಿತದಲ್ಲಿ ದೇವರ ರಾಜ್ಯವನ್ನು ಹಿಂಬಾಲಿಸುವುದನ್ನು ತಡೆಯುತ್ತದೆ ನಂತರ ಉತ್ತರಕ್ರಿಯೆಯನ್ನು ಬಿಟ್ಟು ದೇವರ ರಾಜ್ಯವನ್ನು ಹಿಂಬಾಲಿಸಿರಿ. ನಿಮ್ಮ ಕುಟುಂಬದ ವಾತ್ಸಲ್ಯಗಳು ನೀವು ಹಿಂತಿರುಗಿ ನೋಡಲೂ ಕಾರಣವಾಗಿದ್ದರೆ ಮತ್ತು ಅರಸನನ್ನು ಹಿಂಬಾಲಿಸುವುದರಿಂದ ನಿಮ್ಮಗಮನವನ್ನು ತಿರುಗಿಸುತ್ತಿದ್ದರೆ ಆ ಮೇಲೆ ನೀವು ಆ ವಾತ್ಸಲ್ಯಗಳಿಂದ ನಿಮ್ಮನ್ನು

ನಿಯಂತ್ರಿಸಲಾಗುವುದಿಲ್ಲ. ಮನೆಗೆ ಹೋಗದೆ ಉಳುಮೆ ಮಾಡುತ್ತೀರಿ! ಇದನ್ನು ಕುಟುಂಬದ ಕಡೆಗೆ ನಮ್ಮ ಜವಬ್ದಾರಿಯನ್ನು ನಾವು ತಿರಸ್ಕರಿಸಬೇಕೆಂದು ಹೇಳುತ್ತಿಲ್ಲ. ಬೇರೆಡೆ ಆತನ ವಾಕ್ಯದಲ್ಲಿ ನಮ್ಮ ಕುಟುಂಬಗಳನ್ನು ಕಾಳಜಿವಹಿಸುವುದು ನಮಗೆ ಅಗತ್ಯಕರವಾಗಿದೆಂದು ಹೇಳುತ್ತದೆ(1 ತಿಮೊಥೆಯನಿಗೆ 5:8). ಆದಾಗ್ಯೂ ನಮ್ಮ ದೃಷ್ಟಿಯನ್ನು ಪಾಲಿಸಬೇಕು ಮತ್ತು ಅರಸನಿಗೆ ಸೇವೆ ಮಾಡಲೂ ಪರಿಹರಿಸಬೇಕು ಮತ್ತು ಆತನು ನಮ್ಮನ್ನು ಮುನ್ನಡೆಸುವಾಗ ಹಿಂಬಾಲಿಸಬೇಕು. ಆತನನ್ನು ಹಿಂಬಾಲಿಸದಂತೆ ನಾವು ಅಶಕ್ತರಾದಂತ ಸ್ಥಿತಿಯ ಈ ಲೋಕದ ವ್ಯವ್ಯಹಾರಗಳಲ್ಲಿ ನಾವು ಸಿಕ್ಕಿಹಾಕಿಕೊಳ್ಳಬಾರದು (2 ತಿಮೊಥೆಯನಿಗೆ 2:4).

ದೇವರ ರಾಜ್ಯದ ಚಿಂತನೆಯು ಬಗೆಹರಿಸುವ ಒಂದು ಹಂತವನ್ನು ಒಳಗೊಂಡಿದೆ ಮತ್ತು ಅರಸನಿಗೆ ಬದ್ಧತೆಯಿಂದಿರುವುದು ಮತ್ತು ಆತನ ರಾಜ್ಯದ ಕಾರಣಕ್ಕಾಗಿ ಇಹಲೋಕದ ಜವಬ್ದಾರಿಗಳು ಮತ್ತು ವಾತ್ಸಲ್ಯಗಳಿಂದ ಅಡತಡೆಯಿಲ್ಲದಿರುವುದನ್ನು ಒಳಗೊಂಡಿದೆ.

## ನಿರಾಕರಣೆ ನಿರ್ವಹಿಸುವುದು

**ಲೂಕ 10:11**
**ನಿಮ್ಮ ಊರಿನಿಂದ ನಮ್ಮ ಕಾಲುಗಳಿಗೆ ಹತ್ತಿದ ದೂಳನ್ನು ಒರೆಸಿಬಿಡುತ್ತೇನೆ. ಅದು ನಿಮಗೇ ಇರಲಿ. ಆದಾಗ್ಯೂ ದೇವರ ರಾಜ್ಯವು ಸಮೀಪಕ್ಕೆ ಬಂದದೆ ಎಂದು ನಿಮಗೆ ತಿಳಿದಿರಲಿ ಎಂಬುದಾಗಿ ಹೇಳಿರಿ.**

ದೇವರ ರಾಜ್ಯದ ಪ್ರತಿನಿಧಿಗಳಾಗಿ, ನಾವು ಹೋಗುವ ಕಡೆಯಲ್ಲೆಲ್ಲಾ ಒಂದು ಕೆಂಪು ನೆಲ ಹೊದಿಕೆ ಹಾಕಿ ಸ್ವಾಗತಿಸುವುದನ್ನು ಪಡೆದುಕೊಳ್ಳುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನಮ್ಮನ್ನು ಮತ್ತು ನಾವು ತರುವಂತಹ ಸಂದೇಶವನ್ನು ನಿರಾಕರಣೆ ಮಾಡುವ ಜನರಿರುತ್ತಾರೆ. ದೇವರ ರಾಜ್ಯಕ್ಕಾಗಿ ನಮ್ಮ ಬದ್ದತೆ ಅಥವಾ ಎಲ್ಲಾ ಜನರಿಗೆ ದೇವರ ರಾಜ್ಯದ ಸುವಾರ್ತೆಯನ್ನು ತೆಗೆದುಕೊಂಡು ಹೋಗುವುದನ್ನು ಇದು ಯಾವುದೇ ರೀತಿಯಲ್ಲ ತಗ್ಗಿಸಬಾರದು. ನಾವು ತಿರಸ್ಕಾರವನ್ನು ಎದುರಿಸುವಾಗ, ನಾವು ತಿಳಿಸುವ ದೇವರ ರಾಜ್ಯದಲ್ಲಿ ಏನೋ ತಪ್ಪು ಇದೆ ಎಂಬುದಾಗಿ ಅಲ್ಲ ಆದರೆ ಸರಳವಾಗಿ ಆ ಮನುಷ್ಯನು ಬೆಳಕಿಗಿಂತ ಕತ್ತಲೆಯನ್ನು ಆರಿಸಿಕೊಳ್ಳುತ್ತಾರೆ.(ಯೋಹಾನ 3:19)

ದೇವರ ರಾಜ್ಯದ ಚಿಂತನೆಯು ನಿರಾಕರಣೆಯ ಹಿನ್ನಲೆಯಲ್ಲಿ ಅದನ್ನು ತಿರಸ್ಕರಿಸಿದ ಜನರಿಗೆ ನೀವು ದೇವರ ರಾಜ್ಯವನ್ನು ತಂದಿದ್ದೀರ ಎಂಬುದನ್ನು ತಿಳಿಯುವುದಾಗಿದೆ. ಆದರೆ ಇತರೆ ಜನರುಗಳ ಮಧ್ಯದಲ್ಲಿ ದೇವರ ರಾಜ್ಯವನ್ನು ಮುನ್ನಡೆಸಲು ಅಡೆತಡೆಯಿಲ್ಲದೆ ನೀವು ಮುಂದುವರೆಸುತ್ತೀರಿ.

# ಸೂಜಿಯ ಕಣ್ಣು

**ಮಾರ್ಕ 10:17-31**
**17 ಆತನು ಹೊರಟು ದಾರಿ ಹಿಡಿದು ಹೋಗುವಾಗ ಒಬ್ಬನು ಓಡುತ್ತಾ ಆತನ ಎದುರಿಗೆ ಬಂದು ಮೊಣಕಾಲೂರಿ – ಒಳ್ಳೇ ಬೋಧಕನೇ ನಾನು ನಿತ್ಯ ಜೀವಕ್ಕೆ ಬಾಧ್ಯಸ್ಥನಾಗಬೇಕಾದರೆ ಏನು ಮಾಡಬೇಕೆಂದು ಆತನನ್ನು ಕೇಳಲಾಗಿ ಯೇಸು ಅವನಿಗೆ**
**18 ನನ್ನನ್ನು ಒಳ್ಳೆಯವನೆಂದು ಯಾಕೆ ಹೇಳುತ್ತೀ? ದೇವನೊಬ್ಬನೇ ಹೊರತು ಮತ್ತಾವನೂ ಒಳ್ಳೆಯವನಲ್ಲ.**
**19 ನರಹತ್ಯ ಮಾಡಬಾರದು, ವ್ಯಭಿಚಾರ ಮಾಡಬಾರದು, ಕದಿಯಬಾರದು, ಸುಳ್ಳು ಸಾಕ್ಷಿ ಹೇಳ ಬಾರದು, ಮೋಸ ಮಾಡಬಾರದು, ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು ಎಂದು ದೇವರಾಜ್ಞೆಗಳು ನಿನಗೆ ಗೊತ್ತಿವೆಯಷ್ಟೆ ಎಂದು ಹೇಳಿದನು.**
**20 ಅವನು ಆತನಿಗೆ ಬೋಧಕನೇ ನಾನು ಚಿಕ್ಕಂದಿನಿಂದಲೂ ಇವೆಲ್ಲಕ್ಕೂ ಸರಿಯಾಗಿ ನಡಕೊಂಡು ಬಂದಿದ್ದೇನೆ ಎಂದು ಹೇಳಲು**
**21 ಯೇಸು ಅವನನ್ನು ದೃಷ್ಟಿಸಿ ನೋಡಿ ಪ್ರೀತಿಸಿ ಅವನಿಗೆ ನಿನಗೆ ಒಂದು ಕಡಿಮೆಯಾಗಿದೆ ಹೋಗು ನಿನ್ನ ಬದುಕನ್ನೆಲ್ಲಾ ಮಾರಿ ಬಡವರಿಗೆ ಕೊಡು ಪರಲೋಕದಲ್ಲಿ ನಿನಗೆ ಸಂಪತ್ತಿರುವುದು. ನೀನು ಬಂದು ನನ್ನನ್ನು ಹಿಂಬಾಲಿಸು ಎಂದು ಹೇಳಿದನು.**
**22 ಆದರೆ ಅವನು ಬಹಳ ಆಸ್ತಿಯುಳ್ಳವನಾಗಿದ್ದದರಿಂದ ಈ ಮಾತಿಗೆ ಮೋರೆ ಬಾಡಿದವನಾಗಿ ದುಃಖದಿಂದ ಹೊರಟುಹೋದನು.**
**23 ಆಗ ಯೇಸು ಸುತ್ತಲೂ ನೋಡಿ ತನ್ನ ಶಿಷ್ಯರಿಗೆ ಧನವಂತರು ದೇವರ ರಾಜ್ಯದಲ್ಲಿ ಸೇರುವುದು ಎಷ್ಟೋ ಕಷ್ಟ ಎಂದು ಹೇಳಿದನು.**
**24 ಶಿಷ್ಯರು ಆತನ ಮಾತುಗಳನ್ನು ಕೇಳಿ ಬೆರಗಾದರು. ಯೇಸು ತಿರುಗಿ ಅವರಿಗೆ ಮಕ್ಕಳಿರಾ ದೇವರ ರಾಜ್ಯದಲ್ಲಿ ಸೇರುವುದು ಎಷ್ಟೋ ಕಷ್ಟ**
**25 ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಸೇರುವುದಕ್ಕಿಂತ ಒಂಟೆಯು ಸೂಜಿ ಕಣ್ಣಿನಲ್ಲಿ ನುಗ್ಗಿ ಹೋಗುವುದು ಸುಲಭ ಎಂದು ಹೇಳಿದನು.**
**26 ಈ ಮಾತಿಗೆ ಅವರು ಇನ್ನಷ್ಟಾಶ್ಚರ್ಯ ಪಟ್ಟು (ಹೀಗಿದ್ದರೆ) ಯಾರಿಗೆ ರಕ್ಷಣೆ ಯಾದೀತು ಎಂದು ತಮ್ಮೊಳಗೆ ಹೇಳಿಕೊಳ್ಳಲು**
**27 ಯೇಸು ಅವರನ್ನು ದೃಷ್ಟಿಸಿ ನೋಡಿ ಇದು ಮನುಷ್ಯರಿಗೆ ಅಸಾಧ್ಯ ದೇವರಿಗೆ ಅಸಾಧ್ಯವಲ್ಲ. ದೇವರಿಗೆ ಎಲ್ಲವೂ ಸಾಧ್ಯವೇ ಅಂದನು.**
**28 ಪೇತ್ರನು ಆತನಿಗೆ – ಇಗೋ ನಾವು ಎಲ್ಲಾ ಬಿಟ್ಟು ಬಿಟ್ಟು ನಿನ್ನನ್ನು ಹಿಂಬಾಲಿಸಿದ್ದೇವೆ ಎಂದು ಹೇಳುವುದಕ್ಕೆ ಪ್ರಾರಂಭಿಸಲು ಯೇಸು**
**29 ನಿಮಗೆ ಸತ್ಯವಾಗಿ ಹೇಳುತ್ತೇನೆ. ಯಾವನು ನನ್ನ ನಿಮಿತ್ತವೂ ಸುವಾರ್ತೆಯ ನಿಮಿತ್ತವೂ ಮನೆಯನ್ನಾಗಲಿ, ತಂದೆಯನ್ನಾಗಲಿ, ಮಕ್ಕಳನ್ನಾಗಲಿ, ಭೂಮಿಯನ್ನಾಗಲಿ ಬಿಟ್ಟು ಬಿಟ್ಟಿರುವನೋ|**
**30 ಅವನಿಗೆ ಈಗಿನ ಕಾಲದಲ್ಲಿ ಮನೆ ಅಣ್ಣತಮ್ಮ ಅಕ್ಕತಂಗಿ ತಾಯಿ ಮಕ್ಕಳು ಭೂಮಿ ಇವೆಲ್ಲವೂ ಹಿಂಸೆಗಳು ಸಹಿತವಾಗಿ ನೂರರಷ್ಟು ಸಿಕ್ಕೇ ಸಿಕ್ಕುತ್ತವೆ. ಮತ್ತು ಮುಂದಣ ಲೋಕದಲ್ಲಿ ನಿತ್ಯಜೀವವು ದೊರೆಯುವದು**
**31 ಆದರೆ ಬಹುಮಂದಿ ಮೊದಲಿನವರಾಗುವರು ಕಡೆಯವರು ಮೊದಲಿನವರಾಗುವರು ಎಂದು ಹೇಳಿದನು.**
(ಮತ್ತಾಯ: 19:16-30 ನೋಡಿರಿ)

ಕರ್ತನಾದ ಯೇಸುವು ಶ್ರೀಮಂತಿಕೆಯ ಮೇಲೆ ಭರವಸೆಯಿಟ್ಟಿರುವವರ ದೇವರ ರಾಜ್ಯವನ್ನು ಪ್ರವೇಶಿಸುವುದು ಮತ್ತು ಅನುಭವಿಸುವುದು ಬಹಳ ಕಠಿಣವಾಗಿರುತ್ತೆಂಬುದನ್ನು ವ್ಯಾಖ್ಯಾನಿಸುವಾಗ ಹಣ, ಶ್ರೀಮಂತಿಕೆ ಮತ್ತು ಐಶ್ವರ್ಯದ ಮೇಲಿನ ನಮ್ಮ ಆಲೋಚನೆಗೆ ಸವಾಲು ಹಾಕುತ್ತಾನೆ. ಆದಾಗ್ಯೂ ದೇವರಿಗೆ ಎಲ್ಲವೂ ಸಾಧ್ಯಕರ ಎಂಬುದಾಗಿ ನಿರೀಕ್ಷೆ ನೀಡುತ್ತಾನೆ. ಈ ಪ್ರಪಂಚದಲ್ಲಿ ಅನೇಕ ಶ್ರೀಮಂತರು

ಇರುವುದನ್ನು ದೇವರು ನೋಡಲು ಶಕ್ತನಾಗಿದ್ದಾನೆ. ಮತ್ತು ದೇವರ ರಾಜ್ಯಕ್ಕೆ ಪ್ರವೇಶಿಸಲು ಅವರ ಐಶ್ವರ್ಯವು ಅವಕಾಶ ನೀಡದಂತೆ ಅಗತ್ಯವಾದ ಕೃಪೆಯನ್ನು ಹೊಂದಿದ್ದಾರಂಬುದನ್ನು ವ್ಯಕ್ತಗೊಳಿಸುತ್ತಾನೆ. ಶ್ರೀಮಂತಿಕೆ ಮತ್ತು ಐಶ್ವರ್ಯದ ಪ್ರೀತಿಯು ಜನರನ್ನು ದೇವರ ರಾಜ್ಯದಿಂದ ಹೊರಗಡೆ ಇರಿಸುತ್ತದೆ. ದೇವರ ರಾಜ್ಯದ ಆಲೋಚನೆಯು ಐಶ್ವರ್ಯ ಮತ್ತು ಶ್ರೀಮಂತಿಕೆಗಿಂತ ತುಂಬಾ ಅಧಿಕವಾಗಿ ಅರಸನು ಮತ್ತು ಆತನ ರಾಜ್ಯವನ್ನು ಪ್ರೀತಿಸುತ್ತಾರೆ. ಐಶ್ವರ್ಯ ಮತ್ತು ಶ್ರೀಮಂತಿಕೆಗಳು ಅರಸನನ್ನು ಮತ್ತು ಆತನ ಉದ್ದೇಶಗಳನ್ನು ಗೌರವಿಸಲು ಮತ್ತು ಸೇವೆಸಲ್ಲಿಸಲು ಸಾಧನಗಳಾಗಿ ಕಾಣಿಸುತ್ತವೆ. ಇವುಗಳು ದೇವರ ರಾಜ್ಯವನ್ನು ಅನುಭವಿಸುವುದರ ಕಡೆಗೆ ಅಡ್ಡಿಗಳಾಗಿ ಕಂಡುಬರಲು ಎಂದಿಗೂ ಅವಕಾಶ ನೀಡುವುದಿಲ್ಲ.

## ಬಾಹ್ಯರೂಪಕ್ಕಿಂತ ಅಧಿಕವಾದದು

**ಮತ್ತಾಯ 5:20**
**ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರಲೋಕರಾಜ್ಯದಲ್ಲಿ ಸೇರಲಾರಿರಿ ಎಂದು ನಿಮಗೆ ಹೇಳುತ್ತೇನೆ**.

ಕರ್ತನಾದ ಯೇಸುವು ಫರಿಸಾಯರ ಕಪಟವನ್ನು ವ್ಯಕ್ತಗೊಳಿಸಲು ತುಂಬಾ ಪ್ರಬಲವಾಗಿದ್ದನು. ಶಾಸ್ತ್ರಿಗಳು ಮತ್ತು ಫರಿಸಾಯರು ಅವನ ಕಪಟತನದಿಂದ ಪರಲೋಕ ರಾಜ್ಯಕ್ಕೆ ಪ್ರವೇಶಿಸಲು ಇತರರಿಗೂ ಅಡ್ಡಿಗಳಾಗಿದ್ದರು (ಮತ್ತಾಯ 23:13). ಎಂಬುದಾಗಿ ಆತನು ಹೇಳಿದ್ದಾನೆ. ಅವರನ್ನು ಕಟ್ಟುನಿಟ್ಟಾಗಿ ಗದರಿಸಿದನು ಮತ್ತು ಸುಂಕದವರು ಮತ್ತು ಸೂಳೆಯರೂ ಅವರಿಗಿಂತ ಮುಂದೆ ದೇವರ ರಾಜ್ಯ ಪ್ರವೇಶಿಸುವರು ಎಂಬುದಾಗಿ ಹೇಳಿದನು (ಮತ್ತಾಯ 21:32). ಫರಿಸಾಯರ ತೊಂದರೆಯೇನೆಂದರೆ ಇತರರಿಗೆ ಏನು ಮಾಡಬೇಕೆಂಬುದಾಗಿ ಹೇಳಿದರು. ಆದರೆ ತಾವೇ ಅದನ್ನು ಅಭ್ಯಾಸಿಸಲಿಲ್ಲ. ಅವರು ಏನೆಲ್ಲಾ ಮಾಡಿದರೂ ಅದೆಲ್ಲವನ್ನು ಮನುಷ್ಯರು ನೋಡಬೇಕು ಮತ್ತು ಹೊಗಳಬೇಕು ಎಂಬುದಾಗಿರುವ ಕ್ರಮದಲ್ಲಿ ಮಾಡಿದರು (ಮತ್ತಾಯ 23:3,4). ಫರಿಸಾಯರು ಮತ್ತು ಶಾಸ್ತ್ರೀಗಳನ್ನು ಮೀರಿಸುವಂತಹ ಜೀವನ ಶೈಲಿಯನ್ನು ಹೊಂದಿರಬೇಕೆಂಬುದಾಗಿ ಯೇಸುವು ಸವಾಲುಗಳನ್ನು ಹಾಕುತ್ತಾನೆ. ಆಗ ಮಾತ್ರ ಪರಲೋಕ ರಾಜ್ಯವನ್ನು ನಾವು ಅನುಭವಿಸುತ್ತೇವೆ.

ದೇವರ ರಾಜ್ಯದ ಆಲೋಚನೆಯು, ಸರಿಯಾದ ಜ್ಞಾನ, ಸರಿಯಾದ ಉಪದೇಶ ಅಥವಾ ಸರಿಯಾದ ಸಂಕಲ್ಪಗಳನ್ನು ಹೊಂದಿರುವುದು ಮಾತ್ರ ಸಾಕಾಗುವುದಿಲ್ಲ ಎಂಬುದನ್ನು ತಿಳಿಸುತ್ತದೆ. ಇದು ಕಾರ್ಯರೂಪಕ್ಕೆ ರೂಪಾಂತರ ಗೊಳ್ಳಬೇಕು. ನಮಗೆ ತಿಳಿದಿರುವುದು ಮತ್ತು ನಾವು ಬೋಧಿಸುವುದರಿಂದ ಜೀವಿಸಬೇಕು

# 5.ದೇವರ ರಾಜ್ಯದ ಜೀವಿಸುವಿಕೆ (ಜೀವನ)

## ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ

**ಲೂಕ 17:20,21**
**20 ದೇವರ ರಾಜ್ಯವು ಯಾವಾಗ ಬರುವದೆಂದು ಫರಿಸಾಯರು ಆತನನ್ನು ಕೇಳಿದಾಗ ಆತನು ಅವರಿಗೆ ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದಲ್ಲ**
**21ಇಗೋ ಇಲ್ಲಿ ಇದೆ ಅಗೋಅಲ್ಲಿ ಇದೆ ಎಂದು ಹೇಳುವದಕ್ಕಾಗದು ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ ಅಂತ ತಿಳುಕೊಳ್ಳಿರಿ ಎಂದು ಉತ್ತರಕೊಟ್ಟನು.**

ಫರಿಸಾಯರು ಅಕ್ಷರಶ: ದೇವರ ರಾಜ್ಯವು ಯಾವಾಗ ಸ್ಥಾಪಿಸಲ್ಪಡುತ್ತದೆಂಬುದನ್ನು ನಿಶ್ಚಯಿಸಿಕೊಳ್ಳಲೂ ಆಸಕ್ತಿಕರವಾಗಿದ್ದರು. ಆ ಕ್ಷಣದಲ್ಲಿ ಅವರ ಮಧ್ಯದಲ್ಲಿ ಇದ್ದಂತಹ ದೇವರ ರಾಜ್ಯವನ್ನು – ಆತ್ಮಿಕ ದೇವರ ರಾಜ್ಯದ ಸ್ವಭಾವವನ್ನು ವ್ಯಾಖ್ಯಾನಿಸುವುದರಿಂದ ಯೇಸುವು ಪ್ರತಿಕ್ರಿಯಿಸಿದನು. ಈ ಆತ್ಮಕ ದೇವರ ರಾಜ್ಯವು ಹೆಚ್ಚು ಬಾಹ್ಯ ಅಭಿಮಾನಿಗಳು ಅಥವಾ ಆಡಂಬರದ ತೋರಿಕೆಯಿಂದ ಬರುವುದೆಲ್ಲವೆಂಬುದಾಗಿ ಆತನು ಸೂಚಿಸಿದನು. ಬದಲಿಗೆ ಆತ್ಮಿಕ ದೇವರ ರಾಜ್ಯವು ನಮ್ಮಲ್ಮಿಯೇ ಇದೆ. ಇದು ಒಬ್ಬ ವ್ಯಕ್ತಿಯೊಳಗೆ, ವೈಯಕ್ತಿಕವಾಗಿ ಮೊದಲು ಮತ್ತು ಆನಂತರ ವ್ಯಕ್ತಿಯ ಮೂಲಕವಾಗಿ ಕಾರ್ಯ ಮಾಡುವ ದೇವರ ರಾಜ್ಯವಾಗಿದೆ.

ನಾವು ಪ್ರಜ್ಞೆಯುಳ್ಳವರಾಗಿ ಕಂಡುಬರಬೇಕು ಅಥವಾ ನಮ್ಮಲ್ಲಿಯೇ ಇರುವಂತಹ ಮತ್ತು ನಮ್ಮ ಮೂಲಕವಾಗಿ ಕಾರ್ಯಮಾಡುವಂತಹ ದೇವರ ರಾಜ್ಯವನ್ನು ನಿರಂತರವಾಗಿ ಗುರುತಿಸಬೇಕು. ಅರಸನ ಆಳ್ವಿಕೆ ಮತ್ತು ದೂರೆತನ ನಮ್ಮೊಳಗೆ ಮತ್ತು ನಮ್ಮ ಮೂಲಕವಾಗಿ ಕೆಲಸ ಮಾಡುತ್ತದೆ. ಇದು ನಮ್ಮ ಕುರಿತಾದ ಎಲ್ಲವುಗಳ ಒಳವ್ಯಾಪಿಸುತ್ತದೆ. ಹೀಗೆ ನಮ್ಮ ಜೀವನ ಶೈಲಿ-ನಾವು ಜೀವಿಸುವ ರೀತಿ, ನಮ್ಮ ಆಯ್ಕೆಗಳು, ಹವ್ಯಾಸಗಳು, ಮತ್ತು ತಿರ್ಮಾನಗಳ ಮೇಲೆ ಪರಿಣಾಮ ಬೀರುತ್ತದೆ. ದೇವರ ರಾಜ್ಯದ ಜೀವನಶೈಲಿಯು ನಮ್ಮಲ್ಲಿಯೇ ಇರುವ ದೇವರ ರಾಜ್ಯದ ಒಂದು ಕೆಲಸವಾಗಿದೆ.

## ದೇವರ ರಾಜ್ಯದ ಜೀವಸುವಿಕೆಯ ಗುಣಲಕ್ಷಣಗಳು

ನಾವು ಸಂಬಂಧ ಪಟ್ಟಂತಹ ದೇವರ ರಾಜ್ಯವು "ಈ ಪ್ರಪಂಚದ್ದು ಅಲ್ಲ". ದೃಷ್ಟಿಕೋನಗಳು, ಜೀವನಶೈಲಿಗಳು, ಮೌಲ್ಯಗಳು ಮತ್ತು ಉದ್ದೇಶಗಳು ಎಲ್ಲವೂ ಈ ಪ್ರಪಂಚಕ್ಕಿಂತ ತುಂಬಾ ವಿಭಿನ್ನವಾಗಿರುವ ದೇವರ ರಾಜ್ಯದಲ್ಲಿ ನಾವು ಇದ್ದೇವೆ. ಈಗ ದೇವರ ರಾಜ್ಯದ ಜೀವನ ಶೈಲಿಯ ಕೆಲವು ಗುಣಲಕ್ಷಣಗಳನ್ನು ಪರೀಕ್ಷಿಸೋಣ .

# ಪರಿಶುದ್ಧತೆ ಮತ್ತು ಪೂಜ್ಯತೆ

**2ಕೊರಿಂಥದವರಿಗೆ 6:14-18**
**14 ನೀವು ಕ್ರಿಸ್ತ ನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡರಿ .ಧರ್ಮಕ್ಕೂ ಅಧರ್ಮಕ್ಕೂಜೊತೆಯೇನು ?**
**15 ಬೆಳಕಿಗೂ ಕತ್ತಲೆಗೂ ಐಕ್ಯವೇನು ? ಕ್ರಿಸ್ತನಿಗೂ,ಸೈತಾನನಿಗೂ ಒಡನಾಟವೇನು? ನಂಬುವವನಿಗೂ ನಂಬದೆಇರುವವನಿಗೂ ಪಾಲುಗಾರಿಕೆ ಏನು ?**
**16 ದೇವರಮಂದಿರಕ್ಕೂವಿಗ್ರಹಗಳಿಗೂ ಒಪ್ಪಿಗೆ ಏನು? ನಾವು ಜೀವಸ್ವರೂಪನಾದ ದೇವರ ಮಂದಿರವಾಗಿದ್ದೇವಲ್ಲಾ ಇದರ ಸಂಬಂಧವಾಗಿ ದೇವರು ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು. ನಾನು ಅವರಿಗೆ ದೇವರಾಗಿರುವೆನು ಅವರು ನನಗೆ ಪ್ರಜೆಯಾಗಿರುವರು ಎಂದು ಹೇಳಿದ್ದಾನೆ.**
**17 ಆದ್ದರಿಂದ ಅನ್ಯಜನರ ಮದ್ಯದಲ್ಲಿಂದ ಹೊರಟು ಬಂದು ಪ್ರತ್ಯೇಕವಾಗಿರಿ. ಅಶುದ್ಧವಾದ ಯಾವದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ.**
**18 ಇದ್ದಲ್ಲದೆ ನಾನು ನಿಮ್ಮನ್ನು ಸೇರಿಸಿಕೊಂಡು ನಿಮಗೆ ತಂದೆಯಾಗಿರುವೆನು ನೀವು ನನಗೆ ಕುಮಾರ ಕುಮಾರಿಯರು ಆಗಿರುವಿರೆಂದು ಸರ್ವಶಕ್ತನಾದ ಕರ್ತನು ಹೇಳುತ್ತಾನೆ.**

ಅಪೊಸ್ತಲನಾದ ಪೌಲನು ವಿಶ್ವಾಸಿಗಳು ಮತ್ತು ವಿಶ್ವಾಸಿಗಳ ನಡುವೆ ಒಂದು ಸಂಪೂರ್ಣ ವ್ಯತಿರಿಕ್ತತೆಯನ್ನು ಸೆಳೆಯುತ್ತಾನೆ. ವಿಶ್ವಾಸಿಗಳ ನೀತಿವಂತರು ಕ್ರಿಸ್ತನ ಬೆಳಕು, ದೇವರ ಆಲಯ ಎಂಬುದಾಗಿ ಕರೆಯಲ್ಪಡುತ್ತಾರೆ. ಮತ್ತೊಂದು ಕಡೆಯಲ್ಲಿ, ಅಧರ್ಮ ಭೂತಪ್ರೇತದ ಅಂಧಕಾರ (ನಿಷ್ಪ್ರಯೋಜಕ ಎಂದರ್ಥ, ಸೈತಾನನ ಒಂದು ಶಿರ್ಷಿಕೆ) ಮತ್ತು ವಿಗ್ರಹಗಳು ಮುಂತಾದವು ಅವಿಶ್ವಾಸಿಗಳ ಜೀವಿತವನ್ನು ವ್ಯಾಖ್ಯಾನಿಸಲು ಉಪಯೋಗಿಸಲ್ಪಟ್ಟಿದೆ. ದೇವರ ರಾಜ್ಯದಲ್ಲಿರುವ ಯಾರಾದರೊಬ್ಬರ ಒಬ್ಬ ವಿಶ್ವಾಸಿಯ ಜೀವಿತದಿಂದ ತುಂಬಾ ವಿಭಿನ್ನವಾಗಿ ನೋಡುವುದು ಬಹಳ ಸುಲಭವಾಗಿದೆ.

ಪ್ರಪಂಚದ ಜನರು ದುರಾತ್ಮನನ್ನುಅಭ್ಯಾಸಿಸುವುದರಿಂದ ಅಂಧಕಾರವನ್ನು ಬಯಸುವಂತದ್ದು ಸಾಮಾನ್ಯವಾದುದಾಗಿದೆ (ಯೋಹಾವ 3:19-21). ಹೇಗಾದರೂ ದೇವರ ರಾಜ್ಯದ ಜನರಿಗಿ, ನಾವು ಬೆಳಕಿನಲ್ಲಿ ನಡೆಯಲು ಮತ್ತು ಪವಿತ್ರತೆಯನ್ನು ಅಭ್ಯಾಸಿಸಲು ಕರೆಯಲ್ಪಟ್ಟಿದ್ದೇವೆ. ನಮಗೆ ಪವಿತ್ರತೆಯು ದೇವರ ರಾಜ್ಯದ ರೂಢಿ, ನಮ್ಮ ದೇವರ ರಾಜ್ಯದ ಜೀವನ ಶೈಲಿ.

ಪೌಲನು ಕೊರಿಂಥ, ಗಲಾತ್ಯ ಮತ್ತು ಎಫೆಸದವರಿಗಿನ ಅವನ ಪ್ರತಿಕೆಗಳಲ್ಲಿ ವಿಶ್ವಾಸಿಗಳಿಗೆ ತಿಳಿಸಿ ಬರೆಯುವಾಗ , ಪಾಪಯುತ ಜೀವನ ಶೈಲಿಯು ದೇವರ ಮುಂದೆ ಅಂಗೀಕರಿಸಲ್ಪಡುವುದಿಲ್ಲ ಮತ್ತು ಪ್ರವೇಶವನ್ನು ಮತ್ತು ದೇವರ ರಾಜ್ಯವನ್ನು ಅನುಭವಿಸುವುದನ್ನು ತಡೆಹಿಡಿಯುತ್ತದೆ ಎಂಬುದಾಗಿ ಸಂಪೂರ್ಣವಾಗಿ ಸ್ಪಷ್ಟವಾಗಿ ಸೂಚಿಸುತ್ತಾನೆ.

**1 ಕೊರಿಂಥದವರಿಗೆ 6:9-10**
**9 ಅನ್ಯಾಯಗಾರರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂಬದು ನಿಮಗೆ ತಿಳಿಯದೋ? ಮೋಸಹೋಗಬೇಡರಿ, ಜಾರರು, ವಿಗ್ರಹಾರಾಧಕರು, ವ್ಯಭಿಚಾರಿಗಳು, ವಿಟರು ಪುರುಷಗಾಮಿಗಳು,**
**10 ಕಳ್ಳರು, ಲೋಭಿಗಳು, ಕುಡುಕರು, ಬೈಯ್ಯುವವರು, ಸುಲುಕೊಳ್ಳುವವರು, ಇವರೊಳಗೆ ಒಬ್ಬರಾದರು ದೇವರ ರಾಜ್ಯಕ್ಕೆ ಭಾಧ್ಯರಾಗುದಿಲ್ಲ.**

**ಗಲಾತ್ಯದವರಿಗೆ 5:19-21**
**19 ಶರೀರ ಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಅವೆ. ಯಾವುವೆಂದರೆ – ಜಾರತ್ವ ಬಂಡುತನ, ನಾಚಿಕೆಗೇಡಿತನ, ವಿಗ್ರಹಾರಾಧನೆ, ಮಾಟ, ಹಗೆತನ, ಜಗಳ, ಹೊಟ್ಟೆ ಕಿಚ್ಚು, ಸಿಟ್ಟು,**
**20 ಕಕ್ಷಭೇದ, ಭಿನ್ನಮತ, ಮತ್ಸರ, ಕುಡಿಕತನ, ದುಂದೌತಣ ಇಂತವುಗಳೇ**
**21 ಇವುಗಳ ವಿಷಯದಲ್ಲಿ ಇಂಥಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ.**

**ಎಫೆಸದವರಿಗೆ 5:3-5**
**3 ಜಾರತ್ವ ಯಾವ ವಿಧವಾದ ಬಂಡುತನ ದ್ರವ್ಯಾಶೆ ಇವುಗಳ ಸುದ್ದಿಯಾದರೂ ನಮ್ಮಲ್ಲಿ ಇರಬಾರದು. ಇವುಗಳಿಗೆ ದೂರವಾಗಿರುವುದೇ ದೇವಜನರಿಗೆ ಯೋಗ್ಯವಾದದ್ದು.**
**4 ಹೊಲಸು ಮಾತು, ಹುಚ್ಚುಮಾತು, ಕುಚೂದ್ಯ ಮಾತು ಇವು ಬೇಡ, ಅಯುಕ್ತವಾಗಿವೆ**
**5 ಇವುಗಳನ್ನು ಬಿಟ್ಟು ದೇವರಿಗೆ ಉಪಕಾರ ಸ್ತುತಿ ಮಾಡುವುದು ಉತ್ತಮ. ಜಾರರು ದುರಾಚಾರಿಗಳು, ವಿಗ್ರಹ ಆರಾಧಕರಂತಿರುವ ಲೋಭಿಗಳು, ಇವರಲ್ಲಿ ಒಬ್ಬರಿಗಾದರೂ ಕ್ರಿಸ್ತನ ಮಾತು ದೇವರ ರಾಜ್ಯದಲ್ಲಿ ಬಾಧ್ಯತೆ ಇಲ್ಲವೇ ಇಲ್ಲವೆಂದು ನೀವು ಚೆನ್ನಾಗಿ ಬಲ್ಲಿರಲ್ಲವೇ.**

ನಮ್ಮ ಒಳ್ಳೆಯ ಕಾರ್ಯಗಳಿಂದ ಅಥವಾ ಪವಿತ್ರವಾದ ಜೀವಿತದಿಂದ ರಕ್ಷಣೆ ಹೊಂದಿಲ್ಲ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಬದಲಿಗೆ ನಾವು ರಕ್ಷಿಸಲ್ಪಟ್ಟಿರುವುದರಿಂದ ಒಳ್ಳೆಯ ಕಾರ್ಯಗಳು ಮತ್ತು ಪವಿತ್ರ ಜೀವಿತವನ್ನು ತೋರ್ಪಡಿಸುತ್ತೇವೆ. ರಕ್ಷಣೆ ಮತ್ತು ಪವಿತ್ರಿಕರಣ ಒಟ್ಟಿಗೆ ಹೋಗುತ್ತವೆ. ರಕ್ಷಣೆಯ ,ವೈಯಕ್ತಿಕವಾಗಿ ಜೀವಿತದಲ್ಲಿ ಶುದ್ದೀಕರಣದ ಮೇಲೆ ಪರಿಣಾಮ ಬೀರುತದೆ. ನನ್ನ ಕಾರ್ಯಗಳಿಂದಲ್ಲದೆ ನಂಬಿಕೆಯ ಮೂಲಕವಾಗಿ ಕೃಪೆಯಿಂದ ನಾನು ರಕ್ಷಣೆ ಹೊಂದಿದ್ದರೆ ಮತ್ತು ಆದಾಗ್ಯೂ ನಾನು ಅನೀತಿವಂತಿಕೆಯನ್ನು ನಾನು ಅಭ್ಯಾಸಿಸುತ್ತಿದ್ದರೆ, ದೇವರ ರಾಜ್ಯದಲ್ಲಿ ಯಾವುದೇ ಜಾಗ ನನಗೆ ಇರುವುದಿಲ್ಲ - ಅಮೇಲೆ ದೇವರ ಕೃಪೆಯು ಯಾವ ಪಾತ್ರ ಹೊಂದಿದೆ?

**ಇಬ್ರಿಯರಿಗೆ 12:28**
**ಆದಕಾರಣ ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳವರಾಗಿದ್ದು ಆತನಿಗೆ ಸಮರ್ಪಕವಾದ ಆರಾಧನೆಯನ್ನು ಭಕ್ತಿಯಿಂದಲೂ ಭಯದಿಂದಲೂ ಮಾಡೋಣ.**

ನಾವು ಕದಲಿಸಲಾರದ ರಾಜ್ಯದಲ್ಲಿದ್ದೇವೆ ಮತ್ತು ಅಂತಹ ಪ್ರಬಲವಾದ ಮಹಿಮೆಯುಳ್ಳ ರಾಜ್ಯದ ಭಾಗವಾಗಿ ನಾವುಗಳು ನಮ್ಮ ಜೀವಿತದಲ್ಲಿ ಪಾಪದೊಡನೆ ಸುತ್ತಲೂ ಗೊಂದಲ ಮಾಡಿಕೊಳ್ಳುವ ಅಗತ್ಯತೆಯಿಲ್ಲ. ಬದಲಿಗೆ ನಮಗೆ ಕೊಡಲ್ಪಟ್ಟ ಕೃಪೆಯನ್ನು ನಾವು ಸೂಕ್ತವಾಗಿರಬೇಕು ಮತ್ತು ಪೂಜ್ಯತೆಯಲ್ಲ ಮತ್ತು ದೈವಿಕತೆಯಲ್ಲಿ ನಡೆಯಬೇಕು.

"ಕೃಪೆಯನ್ನು ನಾವು ಹೊಂದೋಣ" ಎಂಬುದಕ್ಕೆ ಗ್ರೀಕ್ ನಲ್ಲಿ ವಾಸ್ತವವಾದ ಅರ್ಥವು ಪಡೆದುಕೊಂತಹ "ಕೃಪೆಯನ್ನು ಗಟ್ಟಿಯಾಗಿ ನಾವು ಹಿಡಿದುಕೊಳ್ಳೋಣ" ಎಂಬುದಾಗಿದೆ ಆದ್ದರಿಂದ ಆ ಕೃಪೆಯಿಂದ ದೇವರ ಮುಂದೆ ಪುಜ್ಯತೆ ಮತ್ತು ದೈವಿಕ ಭಯದಲ್ಲಿ ನಡೆಯೋಣ. ಒಂದು ಯಥಾರ್ಥವಾದ ದೇವರ ಕೃಪೆಯ ಅನುಭವವು ಯಾವಾಗಲೂ ಪುಜ್ಯತೆಯಲ್ಲ ಮತ್ತು ದೈವಿಕ ಭಯದಲ್ಲಿ ಫಲಿತಾಂಶನೀಡುತ್ತದೆ. ನಮ್ಮನ್ನು ಪಾಪಯುತ ಭೋಗ, ಪಾಪಯುತ ಇಚ್ಚೆಗಳ ಸಂತೃಪ್ತಿ, ಮತ್ತು ಪಾಪದ ಬಗ್ಗೆ ಸಾಂದರ್ಭಿಕವಾಗಿರುವುದರಿಂದ "ಬಿಡುಗಡೆಗೊಳಿಸಲೂ" ಕೃಪೆಯನ್ನು ಪಡೆದುಕೊಳ್ಳುವುದರ ಕುರಿತು ನಾವು ಮಾತಾನಾಡುತ್ತಿದ್ದರೆ - ಆವಾಗ ಇಂತಹ ಬಗೆಯ ಕೃಪೆಯು ದೇವರಿಂದ ಬಂದಂತಹ ಕೃಪೆಯಾಗಿರುವುದಿಲ್ಲ. ಬದಲಿಗೆ ಇದು ಒಂದು ತಪ್ಪು ತಿಳುವಳಿಕೆ ಮತ್ತು ನಿಜವಾದ ದೇವರ ಕೃಪೆಯ ತಪ್ಪುಅರ್ಥ ವಿವರಣೆಯಾಗಿದೆ. ದೇವರ ರಾಜ್ಯಕ್ಕೆ ಹೊಸದಾಗಿ ಹುಟ್ಟಿದವರಾಗಿ, ನಮ್ಮ ಜೀವಿತಸಲ್ಲ ದೈವಿಕ ಜೀವನಕ್ರಮ, ಪೂಜ್ಯತೆಯನ್ನು ಉತ್ಪಾದಿಸುವಂತಹ ದೇವರ ಅಧಿಕಾರಕೊಡುವ ಕೃಪೆಯನ್ನು ಅನುಭವಿಸುವುದಕ್ಕೆ ನಾವು ಮುನ್ನಡೆಸಲ್ಪಡುತ್ತೇವೆ. "ತನ್ನ ರಾಜ್ಯಪ್ರಭಾವಗಳಲ್ಲಿ ಪಾಲುಗಾರರಾಗುವದಕ್ಕೆ ಕರೆಯುವ ದೇವರಿಗೆ ಯೋಗ್ಯರಾಗಿ ನೀವು ನಡೆಯಬೇಕೆಂದು" (1 ಥೆಸಲೋನಿಕದವರಿಗೆ 2:12) ಇದಕ್ಕೆ ಈ ಕೃಪೆಯು ನಿಮ್ಮನ್ನು ನಡೆಸುತ್ತದೆ.

## ನೀತಿವಂತಿಕೆ , ಶಾಂತಿ ಮತ್ತು ಸಂತೋಷ

**ರೋಮಾಪುರದವರಿಗೆ 14:16-19.**
**16 ನಿಮಗಿರುವ ಮೇಲು ದೋಷಣೆಗೆ ಆಸ್ಪದವಾಗಬಾರದು**
**17 ಯಾಕಂದರೆ ತಿನ್ನುವದೂ ಕುಡಿಯುವುದೂ ದೇವರ ರಾಜ್ಯವಲ್ಲ ನೀತಿಯೂ ಸಮಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿದೆ.**
**18 ಈ ಪ್ರಕಾರವಾಗಿ ಕ್ರಿಸ್ತನ ಸೇವೆಯನ್ನು ಮಾಡುವವನು ದೇವರಿಗೆ ಮೆಚ್ಚಿಕೆಯಾದವನಾಗಿಯೂ ಮನುಷ್ಯರಿಗೆ ಸಂಭಾವಿತನಾಗಿಯೂ ಇರುವನಷ್ಟೇ**
**19 ಆದರಿಂದ ನಾವು ಸಮಾಧಾನಕ್ಕೂ ಪರಸ್ಪರ ಭಕ್ತಿವೃದ್ಧಿಗೂ ಅನುಕೂಲವಾಗಿರುವವುಗಳನ್ನು ಸಾಧಿಸಿಕೊಳ್ಳೋಣ .**

ರೋಮಾಪುರದವರಿಗೆ 14ನೇ ಅದ್ಯಾಯದಲ್ಲಿ ಪೌಲನು ಆಹಾರ ಮತ್ತು ಮಾಂಸದ ವಿಷಯವನ್ನು ತಿಳಿಯಪಡಿಸುತ್ತಿದ್ದಾನೆ. ಹೊಸ ವಿಶ್ವಾಸಿಗಳ ನಂಬಿಕೆಗೆ ಒಂದು ಅಡ್ಡಿ ಅಥವಾ ಅಡಚಣೆ ಅಡಿಗಲ್ಲು ಅಥವಾ

ಅಪರಾಧವಾಗಿ ಕಂಡು ಬರುವುದಾದರೆ ದೇವರ ರಾಜ್ಯದ ಜೀವನ ಕ್ರಮದ ಭಾಗವಾಗಿ ಇಂತಹ ವಿಷಯಗಳನ್ನು ನಾವು ಮಾಡಬಾರದೆಂಬಂತಹ ಉಪದೇಶವನ್ನು ನಮಗೆ ಅವನು ತನ್ನ ಸೂಚನೆಯನ್ನು ಒಟ್ಟುಗೂಡಿಸಿದ್ದಾನೆ. ದೇವರ ರಾಜ್ಯವು ಆತ್ಮನ ವಿಷಯಗಳಾದ ನೀತಿವಂತಿಕೆ ಸಮಾಧಾನ ಮತ್ತು ಆನಂದವನ್ನು ನಿಜವಾಗಿ ಒಳಗೊಂಡಿದೆ ಎಂಬುದು ನಮಗೆ ಗೊತ್ತಿದೆ. ತಿನ್ನುವುದು ಮತ್ತು ಕುಡಿಯುವುದಕ್ಕಿಂತ ಆತ್ಮನ ವಿಷಯಗಳು ನಮಗೆ ಅತ್ಯುತ್ತಮವಾಗಿ ಪ್ರಾಮುಖ್ಯತೆಯುಳ್ಳ ವಿಚಾರವಾಗಿದೆ. ಆದ್ದರಿಂದ ಇನ್ನೊಬ್ಬ ವಿಶ್ವಾಸಿಯ ನಂಬಿಕೆಯನ್ನು ಸಂಪಾದಿಸುವ ಸಲುವಾಗಿ ನಾವು ತಿನ್ನುವ ಮತ್ತು ಕುಡಿಯುವ (ಅಂದರೆ ಲೋಕದಲ್ಲಿ ಆನಂದಿಸುವ) ನಮ್ಮ ಹಕ್ಕುಗಳನ್ನು ಚಿತ್ತಪೂರ್ವಕವಾಗಿ ತ್ಯಜಿಸಿಬಿಡುತೇವೆ.

ನಾವು ಇದನ್ನು ಮಾಡುವಾಗ, ನಾವು ದೇವರಿಂದ ಮತ್ತು ಮನುಷ್ಯರಿಂದ ಅಂಗೀಕರಿಸಲ್ಪಡುತೇವೆ. ಆದರಿಂದ ನಾವು ಆತ್ಮನ ಕಾರ್ಯಗಳನ್ನು ಉತ್ತೇಜಿಸುವಂತಹ ಮತ್ತು ವಿಶ್ವಾಸಿಗಳ ಭಕ್ತಿಯನ್ನು ವೃದ್ಧಿ ಮಾಡುವ ಫಲಿತಾಂಶ ನೀಡುವ ಕಾರ್ಯಗಳನ್ನು ಹಿಂಬಾಲಿಸುತೇವೆ.

ದೇವರ ರಾಜ್ಯದ ಜೀವನಶೈಲಿಯು, ನೀತಿವಂತಿಕೆ, ಸಮಾಧಾನ ಮತ್ತು ಪವಿತ್ರಾತ್ಮನಲ್ಲಿ ಆನಂದ ಮತ್ತು ಇತರೆ ವಿಶ್ವಾಸಿಗಳ ಲಾಭವನ್ನು ಹಿಂಬಾಲಿಸುವ ಕ್ರಮದಲ್ಲಿ ವೈಯಕ್ತಿಕ ಆಯ್ಕೆಗಳ ಮತ್ತು ಅಭಿರುಚಿಗಳ ನನ್ನ ಹಕ್ಕುಗಳನ್ನು ನಾನು ಚಿತ್ತಪೂರ್ವಕವಾಗಿ ಬಿಟ್ಟುಬಿಡುವುದಾಗಿದೆ.

## ಬಲ ಅಧಿಕಾರ ಮತ್ತು ದೊರೆತನ

**1ಕೊರಿಂಥ ದವರಿಗೆ 4:19,20**
**19 ಆದರೆ ಕರ್ತನ ಚಿತ್ತವಿದ್ದರೆ ನಾನು ಬೇಗ ನಿಮ್ಮ ಬಳಿಗೆ ಒಂದು ಉಬ್ಬಿಕೊಡಿರುವವರ ಮಾತನ್ನಲ್ಲ ಅವರ ಶಕ್ತಿಯನ್ನೇ ಗೊತ್ತುಮಾಡಿ ಕೊಳ್ಳುವೆನು**
**20 ದೇವರ ರಾಜ್ಯವು ಮಾತಿನಲ್ಲಿ ಇಲ್ಲ ಶಕ್ಕಿಯಲ್ಲಿಯೇ ಆಧಾರಗೊಂಡಿದೆ.**

ಕೊರಿಂಥದಲ್ಲಿನ ಸ್ಥಳೀಯ ಸಭಿಕರಲ್ಲಿ ಕೆಲವು ಜನರು ಅವರ ಮಾತಗಳು ಹರಟೆ ಮಾತು , ಹಿಂದೆ ದೂರುವುದು, ಚಾಡಿಹೇಳುವುದು ಮುಂತಾದವುಗಳಿಂದ ಭಿನ್ನಾಭಿಪ್ರಾಯ ಮತ್ತು ಅಪಸ್ವರವನ್ನು ಸೃಷ್ಟಿಸುತ್ತಿದ್ದಂತಹ ಒಂದು ಪರಿಸ್ಥಿತಿಯಲ್ಲಿ ಆತನು ದೇವರ ರಾಜ್ಯದ ಬಲದೊಡನೆ ಬರುತ್ತದೆ ಎಂಬುದಾಗಿ ಪೌಲನು ಪ್ರಕಟಿಸುತ್ತಾನೆ.

ಯೇಸುವು ಜೀವಿಸಿದಂತಹ ಭೂಲೋಕದ ಜೀವಿತವು ದೇವರ ರಾಜ್ಯದ ಜೀವನ ಕ್ರಮವು ನಮ್ಮ ಮಾದರಿಯಾಗಿದೆ. ಕೃಪೆ ಮತ್ತು ಸತ್ಯದೊಡನೆ ಅನುಕಂಪ ಮತ್ತು ದೀನತೆಯಿಂದ ತುಂಬಿದ ಜೀವಿತ ಇದಾಗಿತ್ತು. ಹಾಗೆಯೇ ಬಲದೊಡನೆ, ಅಧಿಕಾರ ಮತ್ತು ದೊರೆತನದ ಜೀವಿತವು ಸಹ ಆಗಿತ್ತು. ದೇವರ ರಾಜ್ಯದಲ್ಲಿ ಕ್ರಿಸ್ತನು

ಪ್ರವೇಶ ಮಾಡುತ್ತಿದ್ದಂತೆ ದುರಾತ್ಮಗಳು ಭಯದಿಂದ ಓಡುತ್ತವೆ ಮತ್ತು ರೋಗಗಳು ವಾಸಿಯಾದವು. ಕರ್ತನಾದ ಯೇಸುವು ಪರಿಸ್ಥಿತಿಗಳು ಮತ್ತು ಸಂದರ್ಭಗಳನ್ನು ಪುರುಷರ ಕೋಲಾಹಲ ಸಮುದ್ರದಲ್ಲಿ ಬಿರುಗಾಳಿಗಳು ಆಹಾರದ ಅವಶ್ಯಕತೆ ಮುಂತಾದವುಗಳ ಮೇಲೆ ಪ್ರಾಬಲ್ಯ ಹೊಂದಿದ್ದಾರೆ. ಇದು ಭೂಮಿಯ ಮೇಲೆ ಸತ್ಯವಾಗಿ ದೇವರ ರಾಜ್ಯದ ಜೀವನಕಲೆಯಾಗಿದೆ. ಅಧಿಕಾರ ಮತ್ತು ಬಲದ ಒಂದು ಜೀವತವು ಎಲ್ಲಾ ವಿಶ್ವಾಸಿಗಳಿಗಾಗಿ ರೂಢಿಯಾಗಿದೆ. ಆನಂತರ ಅಧ್ಯಾಯದಲ್ಲಿ ಇದರ ಕುರುತು ನಾವು ಚರ್ಚಿಸೋಣ.

## ಸಹಿಷ್ಣುತೆ ಮತ್ತು ಸಂಕಟ

**2.ಥೆಸಲೋನಿಕದವರಿಗೆ 1:4,5**
**4 ಹೀಗಿರುವದರಿಂದ ನಿಮಗೆ ಬಂದಿರುವ ಎಲ್ಲಾ ಹಿಂಸೆಗಳಲ್ಲಿಯೂ ನೀವು ಅನುಭವಿಸುತ್ತಿರುವ ಸಂಕಟಗಳಲ್ಲಿಯೂ ತೋರಿ ಬಂದ ನಿಮ್ಮ ತಾಳ್ಮೆ ನಂಬಿಕೆಗಳನ್ನು ನೆನಸಿ ನಿಮ್ಮ ವಿಷಯವಾಗಿ ಹೆಚ್ಚಳ ಪಟ್ಟು ದೇವರ ಸಭೆಗಳೊಳಗೆ ನಾವೇ ಮಾತಾಡುತ್ತೇವೆ.**
**5 ದೇವರು ನ್ಯಾಯವಾದ ತೀರ್ಪು ಮಾಡುತ್ತಾನೆಂಬದಕ್ಕೆ ನಿಮ್ಮ ತಾಳ್ಮೆಯು ಸ್ಪಷ್ಟವಾದ ನಿದರ್ಶನವಾಗಿದೆ. ಯಾವ ದೇವರಾಜ್ಯಕ್ಕೋಸ್ಕರ ನೀವು ಕಷ್ಟವನ್ನುಭವಿಸುತ್ತೀರೋ ಅದಕ್ಕೆ ಯೋಗ್ಯನಾಗಬೇಕೆಂಬದೇ ದೇವರ ಅಭಿಪ್ರಾಯ.**

ಈ ಲೋಕದಲ್ಲಿ, ಅರಸನು ಮತ್ತು ಆತನ ರಾಜ್ಯದ ನಿಮಿತ್ತವಾಗಿ ಹಿಂಸೆಗಳನ್ನು ನಾವು ಎದುರಿಸುತ್ತೇವೆ. ಪ್ರಸಕ್ತವಾಗಿ ದುರಾತ್ಮನ ಪ್ರಭಾವದ ಅಧೀನದಲ್ಲಿರುವಂತಹ ಒಂದು ಪ್ರದೇಶದಲ್ಲಿ ನಾವಿದ್ದೇವೆ. ನಾವು ಪ್ರಸ್ತುತಪಡಿಸುವ ದೇವರ ರಾಜ್ಯವನ್ನು ದ್ವೇಷಿಸುವ ಜನರು ಇದ್ದಾರೆ. ಆದ್ದರಿಂದ ದುರಾತ್ಮನ ಸಮೂಹಗಳು ಮತ್ತು ಜನರು ನಮ್ಮನ್ನು ಹಿಂಸಿಸುವುದು ಮತ್ತು ವಿರೋಧಿಸುವುದು ಸಾಮಾನ್ಯವಾದುದಾಗಿದೆ. ದೇವರರಾಜ್ಯದ ಜೀವನ ಶೈಲಿಯು ಅಂತಹ ಅನುಭವಗಳ ರಹಿತವಾಗಿಲ್ಲ. ಸತ್ಯಕರವಾಗಿ ದೇವರ ರಾಜ್ಯಕ್ಕಾಗಿ ಬಾಧೆಯನ್ನು ಅನುಭವಿಸುವುದು ಗೌರವವುಳ್ಳದ್ದು ಮತ್ತು ಆನಂದಕರವಾದದ್ದು.

## ಕ್ಷಮಾಪಣೆಯು ವಿಸ್ತರಿಸಲ್ಪಡುವುದು

**ಮತ್ತಾಯ 18:23-35**
**23 ಆದದರಿಂದ ಪರಲೋಕ ರಾಜ್ಯವು ತನ್ನ ಸೇವಕರಿಂದ ಲೆಕ್ಕವನ್ನು ತೆಗೆದುಕೊಳ್ಳಬೇಕೆಂದಿದ್ದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ.**
**24ಅವನು ಲೆಕ್ಕಾ ತೆಗೆದುಕೊಳ್ಳವದಕ್ಕೆ ಪ್ರಾರಂಭಮಾಡಿದಾಗ ಕೋಟ್ಯಂತರ ಸಾಲ ಮಾಡಿದವನೊಬ್ಬನನ್ನು ಅವನ ಬಳಿಗೆ ಹಿಡಿತಂದರು.**
**25 ಆ ಸಾಲಾ ತೀರಿಸುವದಕ್ಕೆ ಅವನಲ್ಲಿ ಏನೂ ಇಲ್ಲದ್ದರಿಂದ ಅವನ ಒಡೆಯನು ಅವನನ್ನೂ ಅವನ ಹೆಂಡತಿ ಮಕ್ಕಳನ್ನೂ ಅವನ ಬದುಕೆಲ್ಲವನ್ನೂ ಮಾರಿ ಅದನ್ನು ತೀರಿಸಬೇಕೆಂದು ಅಪ್ಪಣೆ ಮಾಡಿದನು**
**26 ಆ ಸೇವಕನು ಅವನ ಕಾಲಿಗೆ ಬಿದ್ದು ಅವನಿಗೆ ಒಡೇಯನೇ**

**ಸ್ವಲ್ಪ ತಾಳಿಕೋ ನಿನ್ನದೆಲ್ಲಾ ನಾನು ಕೊಟ್ಟು ತೀರಿಸುತ್ತೇನೆಂದು ನಮಸ್ಕರಿಸಲಾಗಿ**
**27 ಆ ಸೇವಕನ ಒಡೆಯನು ಕನಿಕರಪಟ್ಟು ಅವನನ್ನು ಬಿಡಿಸಿ ಆ ಸಾಲವನ್ನೆಲ್ಲಾ ಬಿಟ್ಟು ಬಿಟ್ಟನು**
**28 ತರುವಾಯ ಆ ಸೇವಕನು ಹೊರಕ್ಕೆ ಬಂದು ನನಗೆ ನೂರು ಹಣಾ ಕೊಡಬೇಕಾದ ಒಬ್ಬ ಜೊತೇ ಸೇವಕನನ್ನು ಕಂಡು ಅವನನ್ನು ಹಿಡಿದು ಎಲ್ಲಾ ನನ್ನ ಸಾಲ ಎಂದು ಹೇಳಿಗೆ ಕುತ್ತಿಗೆ ಹಿಸಿಕಿದನು.**
**29 ಆಗ ಅವನ ಜೊತೆ ಸೇವಕನು ಅವನು ಕಾಲಿಗೆ ಬಿದ್ದು ಸ್ವಲ್ಪ ತಾಲಿಕೋ ತೀರಿಸುತ್ತೇನೆ ಎಂದು ಬೇಡಿಕೊಂಡನು.**
**30 ಆದರೆ ಅವನು ಒಪ್ಪದೆ ಹೊರಟು ಹೋಗಿ ಆ ಸಾಲಾ ತೀರಿಸುವ ತನಕ ಅವನನ್ನು ಸೆರೆ ಮನೆಯಲ್ಲಿ ಹಾಕಿಸಿದನು**
**31 ಅವನ ಜೊತೆ ಸೇವಕರು ನಡೆದ ಸಂಗತಿಯನ್ನು ನೋಡಿ ಬಹಳವಾಗಿ ದುಃಖಪಟ್ಟು ಒಡೆಯನ ಬಳಿಗೆ ಬಂದು ನಡೆದುದ್ದನ್ನೆಲ್ಲಾ ತಿಳಿಸಿದರು.**
**32 ಆಗ ಅವನ ಒಡೆಯನು ಅವನನ್ನು ಕರೆಸಿ ಎಲ್ಲಾ ನೀಚನೇ ನೀನು ನನ್ನನ್ನು ಬೇಡಿಕೊಂಡದ್ದರಿಂದ ಆ ಸಾಲವನ್ನೆಲ್ಲಾ ನಾನು ಬಿಟ್ಟು ಬಿಟ್ಟೆನಲ್ಲಾ**
**33 ನಾನು ನಿನ್ನನ್ನು ಕರುಣಿಸದ ಹಾಗೆ ನೀನು ಸಹ ನಿನ್ನ ಜೊತೇ ಸೇವಕನನ್ನು ಕರುಣಿಸಬಾರದಾಗತ್ತೇ ಎಂದು ಹೇಳಿ ಸಿಟ್ಟು ಮಾಡಿ**
**34 ತನಗೆ ಕೊಡಬೇಕಾದ ಸಾಲವನ್ನು ತೀರಿಸುವ ತನಕ ಪೀಡಿಸುವವರ ಕೈಗೆ ಒಪ್ಪಿಸಿದನು**
**35 ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನಃ ಪೂರ್ವಕವಾಗಿ ಕ್ಷಮಿಸದೆ ಹೋದರೆ ಪರಲೋಕದಲ್ಲಿರುವ ನನ್ನ ತಂದೆಯೂ ನಿಮಗೆ ಹಾಗೆಯೇ ಮಾಡುವನು ಅಂದನು.**

ದೇವರ ರಾಜ್ಯದಲ್ಲಿ ಕ್ಷಮಾಪಣೆಯನ್ನು ವಿಸ್ತರಿಸುವ ಪ್ರಾಮುಖ್ಯತೆಯ ಕುರಿತೆ ನಮಗೆ ಬೋದನೆಯಲ್ಲಿ, ಕರ್ತನಾನದ ಯೇಸುವು ಮೇಲಿನ ಸಾಮ್ಯದಲ್ಲಿ ಕೃತಜ್ಞತೆಯಿಲ್ಲದ ಸೇವಕನ ಕುರಿತು ನಿರೂಪಿಸಿದ್ದಾನೆ. ದೇವರ ರಾಜ್ಯದಲ್ಲಿ, ನಮಗೆ ತಪ್ಪೆಸಗಿದವರಿಗೆ ಕ್ಷಮಾಪಣೆ ಮತ್ತು ನಮ್ಮ ಮೇಲೆ ಆತನು ಕೃಪೆ ಮತ್ತು ಕರುಣೆಯನ್ನು ತೋರಿಸಿದ ರೀತಿಯಲ್ಲಿ ತೋರಿಸುವಂತೆ ದೇವರು ಬಯಸುತ್ತಾನೆ.ಕ್ಷಮಾಪಣೆಯನ್ನು ಅಗಾಧವಾಗಿ ಮತ್ತು ಉಚಿತವಾಗಿ ನೀಡುವುದು ದೇವರ ರಾಜ್ಯದ ಜೀವನ ಶೈಲಿ.

## ಉಸ್ತುವಾರಿ (ಮನೆವಾರ್ತೆಗಾರತನ)

**ಮತ್ತಾಯ 25:14-30**
**14 ದೇಶಾಂತರಕ್ಕೆ ಹೋಗುವ ಒಬ್ಬ ಮನುಷ್ಯನು ತನ್ನ ಆಳುಗಳನ್ನು ಕರೆದು ಅವರಿಗೆ ತನ್ನ ಆಸ್ತಿಯನ್ನು ಒಪ್ಪಿಸಿಕೊಟ್ಟಂತಿರುವದು**
**15ಅವನು ಒಬ್ಬನಿಗೆ ಐದು ತಲಾಂತು, ಒಬ್ಬನಿಗೆ ಎರಡು, ಒಬ್ಬನಿಗೆ ಒಂದು, ಹೀಗೆ ಅವನವನ ಸಾಮರ್ಥ್ಯದ ಪ್ರಕಾರ ಕೊಟ್ಟು ಬೇರೊಂದು ದೇಶಕ್ಕೆ ಹೋದನು.**
**16 ಐದು ತಲಾಂತು ಹೊಂದಿದವನು ಹೆಚ್ಚಾಗಿ ಅದನ್ನು ವ್ಯಾಪಾರಕ್ಕೆ ಹಾಕಿ ಇನ್ನೂ ಐದು ತಲಾಂತು ಗಳಿಸಿಕೊಂಡನು**
**17 ಹಾಗೆಯೇ ಎರಡು ತಲಾಂತು ಹೊಂದಿದವನು. ಇನ್ನೂ ಎರಡು ಸಂಪಾದಿಸಿಕೊಂಡನು**
**18 ಆದರೆ ಒಂದು ತಲಾಂತು ಹೊಂದಿದವನು ಹೋಗಿ ಭೂಮಿಯನ್ನು ಅಗೆದು ತನ್ನ ದಣಿಯ ಹಣವನ್ನು ಬಚ್ಚಿಟ್ಟನು**
**19 ಬಹುಕಾಲದ ಮೇಲೆ ಆ ಆಳುಗಳ ದಣಿಯು ಒಂದು ಅವರಿಂದ ಲೆಕ್ಕ ತೆಗೆದುಕೊಳ್ಳಲು**

**20 ಐದು ತಲಾಂತು ಹೊಂದಿದವನು ಇನ್ನೂ ಐದು ತಲಾಂತು ತಂದು ಸ್ವಾಮಿ ನೀನು ಐದು ತಲಾಂತನ್ನು ನನಗೆ ಕೊಟ್ಟಿದ್ದಿಯಲ್ಲಾ ಇಗೋ ಇನ್ನು ಐದು ತಲಾಂತು ಸಂಪಾದಿಸಿದ್ದೇನೆ ಅಂದನು**
**21 ಅವನ ದಣಿಯು ಭೂ ನಂಬಿಗಸ್ತನಾದ ಒಳ್ಳೆ ಆಳು ನೀನು ಸ್ವಲ್ಪ ಕೆಲಸದಲ್ಲಿ ನಂಬಿಗಸ್ತನಾಗಿದ್ದಿ ದೊಡ್ಡ ಕೆಲಸದಲ್ಲಿ ನಿನ್ನನ್ನು ಇಡುತ್ತೇನೆ. ನಿನ್ನ ದಣಿಯ ಸೌಭಾಗ್ಯದಲ್ಲಿ ಸೇರು ಅಂದನು.**
**22 ಆಗ ಎರಡು ತಲಾಂತು ಹೊಂದಿದವನು ಮುಂದೆ ಬಂದು ಸ್ವಾಮಿ ಎರಡು ತಲಾಂತು ನನಗೆ ಒಪ್ಪಿಸಿದಿಯಲ್ಲಾ ಇಗೋ ಇನ್ನು ಎರಡು ತಲಾಂತು ಸಂಪಾದಿಸಿದ್ದೇನೆ. ಅಂದನು**
**23 ಅವನ ದಣಿಯು ಅವನಿಗೆ ಭಲಾ ನಂಬಿಗಸ್ತನಾದ ಒಳ್ಳೆ ಆಳು ನೀನು ಸ್ವಲ್ಪ ಕೆಲಸದಲ್ಲಿ ನಂಬಿಗಸ್ತನಾಗದ್ದೀ ದೊಡ್ಡ ಕೆಲಸದಲ್ಲಿ ನಿನ್ನನ್ನು ಇಡುತ್ತೇನೆ. ನಿನ್ನ ದಣಿಯ ಸೌಭಾಗ್ಯದಲ್ಲಿ ಸೇರು ಎಂದು ಹೇಳಿದನು.**
**24 ತರುವಾಯ ಒಂದೇ ತಲಾಂತು ಹೊಂದಿದವನು ಸಹ ಮುಂದೆ ಬಂದು ಸ್ವಾಮಿ ನೀನು ಕಠಿಣ ಮನುಷ್ಯನು ನೀನು ಬಿತ್ತದಿರುವಲ್ಲಿ ಕೊಯ್ಯುವವನು, ನೀನು ತೂರದಿರುವಲ್ಲಿರಾಶಿ ಮಾಡಿಕೊಳ್ಳುವವನು ಎಂದು ತಿಳಿದು**
**25 ಹೆದರಿಕೊಂಡು ಹೋಗಿ ನಿನ್ನ ತಲಾಂತನ್ನು ಭೂಮಿಯಲ್ಲಿ ಬಚ್ಚಿಟ್ಟೆನು ಇಗೋ ನಿನ್ನದು ನಿನಗೆ ಸಂದಿದೆ ಅಂದನು.**
**26 ಆಗ ಅವನ ದಣಿಯು ಅವನಿಗೆ ಮೈಗಳ್ಳನಾದ ಕೆಟ್ಟ ಆಳು ನೀನು ನಾನು ಬಿತ್ತದಿರುವಲ್ಲಿ ಕೊಯ್ಯುವವನು ತೂರದಿರುವಲ್ಲಿ ರಾಶಿಮಾಡಿ ಕೊಳ್ಳುವವನು ಎಂದು ತಿಳಿದಿಯಾ?**
**27 ಹಾಗಾದರೆ ನೀನು ನಿನ್ನ ಹಣವನ್ನು ಸಾಹುಕಾರರಲ್ಲಿ ಬಡ್ಡಿಗೆ ಹಾಕಬೇಕಾಗಿತ್ತು. ನಾನು ಬಂದು ನಿನ್ನದನ್ನು ಬಡ್ಡಿಸಹಿತ ಪಡಕೊಳ್ಳುತ್ತಿದ್ದನು ಎಂದು ಹೇಳಿ**
**28 ತನ್ನ ಸೇವಕರಿಗೆ ಅವನಿಂದ ಆ ತಲಾಂತು ತೆಗೆದು ಹತ್ತು ತಲಾಂತು ಇದ್ದವನಿಗೆ ಕೊಡಿರಿ.**
**29 ಇದ್ದವರಿಗೆಲ್ಲಾ ಕೊಡಲ್ಪಡವದು ಅವರಿಗೆ ಮತ್ತು ಹೆಚ್ಚಾಗುವುದು ಇಲ್ಲದವನ ಕಡೆಯಿಂದ ಇದ್ದದ್ದು ತೆಗೆಯಲ್ಪಡುವದು**
**30 ಮತ್ತು ಕೆಲಸಕ್ಕೆ ಬಾರದ ಈ ಆಳನ್ನು ಹೊರಗೆ ಕತ್ತಲೆಗೆ ಹಾಕಿಬಿಡಿರಿ ಎಂದು ಹೇಳಿದನು ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೋ ಇರುವವು.**

ತಲಾಂತುಗಳ ಸಾಮ್ಯವು ದೇವರ ರಾಜ್ಯದಲ್ಲಿನ ಮನವಾರ್ತೆತನದು ಪ್ರಾಮುಖ್ಯತೆಯನ್ನು ನಮಗೆ ಪ್ರಕಟಿಸುತ್ತದೆ. ಇತರೆ ಸಾಮ್ಯಗಳೊಡನೆಯ ರೀತಿಯಂತೆ " ಪರಲೋಕ ರಾಜ್ಯವು ಹಾಗೇ" ಎಂಬುದಾಗಿ ಹೇಳುತ್ತಾ ದೇವರ ರಾಜ್ಯದಲ್ಲಿನ ಜೀವದ ರೀತಿ ಅಥವಾ ಇದು ಒಂದು ತತ್ವ ಎಂಬುದನ್ನು ಸೂಚಿಸುತ್ತಾ ಯೇಸು ಈ ದೃಷ್ಟಾಂತವನ್ನು ಪ್ರಾರಂಭಿಸಿದನು. ಮೂಲ ಸಂಪನ್ಮೂಲಗಳು, ತಲಾಂತುಗಳು, ಅವಕಾಶಗಳು, ಸಂಪರ್ಕಗಳೊಡನೆ ಮತ್ತು ನಮ್ಮ ಜೀವಿತದ್ದಲ್ಲ ಆತನು ಇರಿಸಿದಂತಹವುಗಳಿಗೆ ಉತ್ತಮ ಮನೆವಾರ್ತೆಯವರಾಗಿರಬೇಕೆಂದು ದೇವರು ನೀಲ್ಲಿಸುತ್ತಾನೆ. ಆತನು ನಮಗೆ ವಹಿಸಿಕೊಟ್ಟಂತದ್ದರಲ್ಲ. ಉತ್ಪಾದಕತೆ, ಲಾಭದಾಯಕತೆ, ದ್ವಿಗುಣತೆ, ಫಲಪ್ರದತೆಯನ್ನು ಮತ್ತು "ಹೆಚ್ಚಳತೆಯನ್ನು ಆತನು ಅವಶ್ಯಕವಾಗಿ ನೋಡುತ್ತಾನೆ. ಆತನು ನಮಗೆ ಕೊಟ್ಟಿದ್ದನ್ನು ಹಾಗೆಯೇ ಸುಮ್ಮನೇ ಹಿಂತಿರುಗಿಕೊಡುವುದು, ಒಂದು ತಲಾಂತು ಹೊಂದಿದ ಮನುಷ್ಯನು ಸಾಕಷ್ಟಿಲ್ಲದೆ ಮತ್ತು ಸ್ವೀಕಾರಾರ್ಥವಲ್ಲದಂತೆ ಆಗುತ್ತದೆ. ಆತನು ನಮಗೆ ಕೊಟ್ಟಂತಹ ನಿಯೋಜನೆ ಮತ್ತು ವರಗಳು ಆತನು ಮೆಚ್ಚುವಂತಹ ಫಲವನ್ನು ಹೊರತರಲು ನಾವುಗಳು ಪರಿಶ್ರಮ, ತ್ಯಾಗ, ತಾಳ್ಮೆ, ಪ್ರಯತ್ನ, "ಜ್ಞಾನ ಮುಂತಾಂದವುಗಳನ್ನು ನಾವು ಹಾಕುವುದು ಆತನಿಗೆ ಅಗತ್ಯವಿದೆ. ಇದು ದೇವರ ರಾಜ್ಯದ ಪಾರುಪತ್ಯತನ, ದೇವರ ರಾಜ್ಯದ ಜೀವನ ಕಲೆಯು ದೇವರ ರಾಜ್ಯ ಮನೆವಾರ್ತೆತನವನ್ನು ಬಯಸುತ್ತದೆ.

## ಪಕ್ಷಪಾತವಿಲ್ಲ

**ಯಾಕೋಬನು 2: 1:5**
**1 ನನ್ನ ಸಹೋದರರೇ ಪ್ರಭಾವವುಳ್ಳ ನಮ್ಮ ಕರ್ತನಾದ ಯೇಸುಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಪಕ್ಷಪಾತಿಗಳಾಗಿರಬಾರದು**
**2 ಹೇಗೆಂದರೆ ಒಬ್ಬ ಮನುಷ್ಯನು ಚಿನ್ನದ ಉಂಗುರವನ್ನೂ ಶೋಭಾಯಮಾನವಾದ ವಾಸ್ತ್ರಗಳನ್ನು ಹಾಕಿಕೊಂಡು ನಿಮ್ಮ ಸಭಾಮಂದಿರದೊಳಗೆ ಬರಲು ಮತ್ತು ಒಬ್ಬ ಬಡ ಮನುಷ್ಯನು ಹೀನವಾದ ಬಟ್ಟೆ ಹಾಕಿಕೊಂಲಡು ಬರಲು**
**3 ನೀವು ಶೋಭಾಯಮಾನವಾದ ವಾಸ್ತ್ರಗಳನ್ನು ಧರಿಸಿಕೊಂಡಿರುವವನನ್ನು ಮರ್ಯಾದೆಯಿಂದ ನೋಡಿ ಅವನಿಗೆ ನೀವು ಇಲ್ಲ ಈ ಸುಖಾಸನದ ಮೇಲೆ ಕೂತುಕೊಳ್ಳಿರಿ ಎಂತಲೂ ಆ ಬಡ ಮನುಷ್ಯನಿಗೆ ನೀನು ಅಲ್ಲಿ ನಿಂತಿಕೋ ಇಲ್ಲವೆ ನನ್ನ ಕಾಲ್ಮಣೆಯ ಹತ್ತಿರ ನೆಲದ ಮೇಲೆ ಕೂತುಕೋ ಎಂತಲೂ ಹೇಳಿದರೆ**
**4 ನೀವು ನಿಮ್ಮಲ್ಲಿ ಭೇದಮಾಡುವವರಾಗಿ ಅನ್ಯಾಯವಾದ ತೀರ್ಪನ್ನು ಮಾಡುವವರಾದಿರಲ್ಲಾ**
**5 ನನ್ನ ಪ್ರಿಯ ಸಹೋದರರೇ ಕೇಳಿರಿ. ದೇವರು ಲೌಕಿಕ ವಿಷಯದಲ್ಲಿ ಬಡವರಾಗಿವವರನ್ನು ಆದುಕೊಂಡು ಅವರು ನಂಬಿಕೆಯಲ್ಲಿ ಐಶ್ವರ್ಯವಂತರಾಗಿಯೂ ತನ್ನನ್ನು ಪ್ರೀತಿಸುವವರಾಗಿ ತಾನು ವಾಗ್ದಾನ ಮಾಡಿದ ರಾಜ್ಯಕ್ಕೆ ಬಾಧ್ಯರಾಗಿಯೂ ಇರಬೇಕೆಂದು ನೇಮಿಸಲಿಲ್ಲವೋ?**

ನಿಜವಾದ ದೇವರಾಜ್ಯದ ಜೀವನಶೈಲಿಯು ಎಲ್ಲಾ ಕುಲಗಳ ಜನರು, ಭಾಷೆಗಳು, ಸಂಸ್ಕೃತಿಗಳು, ವರ್ಗಗಳು ಅಥವಾ ಸಾಮಾಜಿಕ ಅಡತಡೆಗಳನ್ನು ಸುತ್ತುಗಟ್ಟುವ ಹೃದಯವನ್ನು ಹೊಂದಿರುವುದಾಗಿರುತ್ತದೆ. ದೇವರ ರಾಜ್ಯದ ಪರಸ್ಪರ ಬಾಧ್ಯಸ್ಥರಂತೆ ಒಬ್ಬರಿಗೊಬ್ಬರು ಗ್ರಹಿಸಿಕೊಳ್ಳಬೇಕು ಪ್ರತಿಯೊಬ್ಬ ವ್ಯಕ್ತಿಯಲ್ಲಿಯು ದೇವರ ರಾಜ್ಯದ ಮೌಲ್ಯವನ್ನು ನೋಡುತ್ತೇವೆ ಗೌರವವು ಸಲ್ಲತಕ್ಕಂತಹವರಿಗೆ ನಾವು ಗೌರವವನ್ನು ಕೊಡುವುದು ಸತ್ಯವಾದುದಾಗಿದೆ. ಕರ್ತನಲ್ಲಿ ಸೇವೆ ಮಾಡುವವರಿಗೆ, ದೇವರ ವಾಕ್ಯದಲ್ಲಿ ದುಡಿಯುವವರಿಗೆ ಮತ್ತು ನಮ್ಮ ಜೀವಿತಗಳಲ್ಲಿ ಆತ್ಮಿಕ ಮೇಲ್ವಿಚಾರಣೆ (1 ಥೆಸಲೋನಿಕದವರಿಗೆ 5:12:13 ) ನಾವು ಹೆಚ್ಚು ಗೌರವಿಸುತ್ತೇವೆ. ಆದಾಗ್ಯೂ ನಾವು ಪಕ್ಷಪಾತ ಮಾಡದೇ ಅಥವಾ ಲೌಕಿಕ ಮಾನದಂಡವಾದ- ಸಂಪತ್ತು, ಸಾಮಾಜಿಕ ನಿಲುವು ಅಥವಾ ಸಹ ಅಂಗ ಇವುಗಳ ಆಧಾರದ ಮೇಲೆ ಬಹಳ ಆದ್ಯತೆಯ ಸತ್ಕಾರವನ್ನು ಒದಗಿಸಿದಂತಹ ರೀತಿಯಲ್ಲಿ ವಿಷಯಗಳನ್ನು ನಾವು ಮಾಡುತ್ತೇವೆ.

## ಅರಸನಿಗಾಗಿ ಸಿದ್ದತೆ

**ಮತ್ತಾಯ 25:1:13**
**1 ಆಗ ಪರಲೋಕರಾಜ್ಯವು ಆರತಿಗಳನ್ನು ತೆಗೆದುಕೊಂಡು ಮದಲಿಂಗನನ್ನು ಎದುರುಗೊಳ್ಳುವುದಕ್ಕೆ ಹೊರಟಂತ ಹತ್ತು ಮಂದಿ ಕನ್ಯೆಯರಿಗೆ ಹೋಲಿಕೆಯಾಗಿರುವದು.**
**2 ಅವರಲ್ಲಿ ಐದು ಮಂದಿ ಬುದ್ದಿವಂತೆಯರು ಐದು ಮಂದಿ ಬುದ್ದಿಯಿಲ್ಲದವರು**
**3 ಬುದ್ದಿಯಿಲ್ಲದವರು ತಮ್ಮ ಆರತಿಗಳನ್ನು ತಕ್ಕೊಂಡರು, ಆದರೆ ಎಣ್ಣೆ ತಕ್ಕೊಳ್ಳಲಿಲ್ಲ.**
**4 ಬುದ್ದಿವಂತೆಯರು ತಮ್ಮ ಆರತಿಗಳ ಕೂಡ ಪಾತ್ರೆಗಳಲ್ಲಿ ಎಣ್ಣೆ ತಕ್ಕೊಂಡರು.**
**5 ಮದಲಿಂಗನು ಬರುವದಕ್ಕೆ ತಡಮಾಡಲು ಅವರೆಲ್ಲರು ತೂಕಡಿಸಿ ಮಲಗಿದರು**
**6 ಆದರೆ ಅರ್ಧ ರಾತ್ರಿಯಲ್ಲಿ ಇಗೋ ಮದಲಿಂಗನು ಅವನನ್ನು ಎದುರುಗೊಳ್ಳುವದಕ್ಕೆ ಹೊರಡಿರಿ ಎಂಬ ಕೂಗಾಯಿತು.**
**7 ಆಗ ಆ ಕನ್ಯೆಯರೆಲ್ಲರು ಎಚ್ಚೆತ್ತು ತಮ್ಮ ಆರತಿಗಳನ್ನು ನೆಟ್ಟಗೆ ಮಾಡಿದರು.**

**8 ಹಾಗೆ ಬುದ್ದಿಯಿಲ್ಲದವರು ಬುದ್ದಿವಂತೆಯವರಿಗೆ ನಿಮ್ಮ ಎಣ್ಣೆಯಲ್ಲಿ ನಮಗೆ ಸ್ವಲ್ಪ ಕೊಡಿರಿ. ನಮ್ಮ ಆರತಿಗಳು ಆರಿಹೋಗುತ್ತವೆ ಎಂದು ಹೇಳಿದರು.ಅದಕ್ಕೆ ಆ ಬುದ್ದಿವಂತೆಯರು ನಿಮಗೆ ಕೊಟ್ಟರೆ ನಮಗೂ ನಿಮಗೂ ಕೂಡ ಸಾಲದೆ ಹೋದೀತು ನೀವು ಮಾರುವವರ ಬಳಿಗೆ ಹೋಗಿ ಕೊಂಡುಕೊಂಡರೆ ಒಳ್ಳೇದು ಅಂದರು.**
**10 ಅವರು ಕೊಂಡಕೊಳ್ಳಲಿಕ್ಕೆ ಹೋದಾಗ ಮದಲಿಂಗನು ಬಂದನು. ಸಿದ್ದವಾಗಿದ್ದವರು ಅವನ ಸಂಗಡ ಮದುವೆಯ ಮನೆಯೊಳಕ್ಕೆ ಹೋದರು.ಬಾಗಿಲು ಮುಚ್ಚಲಾಯಿತು**
**11 ತರುವಾಯ ಉಳಿದ ಕನ್ಯೆಯರು ಸಹ ಬಂದು ಸ್ವಾಮಿ ಸ್ವಾಮಿ ನಮಗೆ ತೆರೆಯಿರಿ. ಅಂದರು.**
**12ಆತನು ನಿಮ್ಮನ್ನು ನಾನರಿಯೆನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು**
**13 ಆದಕಾರಣ ಆ ದಿನವಾದರೂ ಗಳಿಗೆಯಾದರೂ ನಿಮಗೆ ಗೊತ್ತಿಲ್ಲವಾದದರಿಂದ ಎಚ್ಚರವಾಗಿರ್ರಿ.**

ಅರಸನ ಬರುವಿಕೆಗಾಗಿ ಸಿದ್ದತೆಯ ಸ್ಥಿತಿಯಲ್ಲಿ ಸ್ಥಿರವಾಗಿ ಜೀವಿಸಬೇಕೆಂಬುದಾಗಿ ನಮಗೆ ಬೋಧಿಸಲು ಪರಲೋಕ ರಾಜ್ಯದ ಕುರಿತು ಈ ಸಾಮ್ಯವನ್ನು ಕರ್ತನಾದ ಯೇಸು ನಮಗೆ ನೀಡಿದನು. ಈಗ ನಮ್ಮ ಆರತಿಗಳು ಉರಿಯುತ್ತಿರಲು ಸಾಕಾಗುವಷ್ಟು ಎಣ್ಣೆಯನ್ನು ನಾವು ಹೊಂದಿರುವುದು ಮಾತ್ರವಲ್ಲದೇ, ಆತನು ಬರುವ ತನಕ ನಮ್ಮ ಆರತಿಗಳು ಉರಿಯುತ್ತಿರುವಂತೆ ಇರಿಸಿಕೊಳ್ಳಲೂ ಸಾಕಷ್ಟು ಮೀಸಲಿಟ್ಟು ಕಾಯ್ದಿರಿಸಿಕೊಂಡಿರುವುದನ್ನು ಖಚಿತಪಡಿಸಿಕೊಂಡಿರುವಾಗ ಯೇಸುವು ಬುದ್ದಿವಂತರಾಗಿರುವುದು ಎಂಬುದಾಗಿ ಇದನ್ನು ಕರೆಯುತ್ತಾನೆ.

ಈ ಸಾಮ್ಯವನ್ನು ಒಂದು ರೀತಿಯಲ್ಲಿ ಅನ್ವಯಿಸಿಕೊಳ್ಳುವುದೆಂದರೆ ನಮ್ಮ ಜೀವಿತಗಳು ಮತ್ತು ನಮ್ಮ ಕಾರ್ಯಗಳು ಬೆಳಕನ್ನು ಕೊಡುವಂತಹ ನಮ್ಮ ಆರತಿಗಳು ಎಂಬುದಾಗಿ ಅರ್ಥಮಾಡಿಕೊಳ್ಳುವುದಾಗಿದೆ.

ನಾವು - ನಮ್ಮ ಜೀವನ, ನಾವು ಯಾರು ಎಂಬುದು - ಪ್ರಪಂಚದ ಬೆಳಕಾಗಿದೆ (ಮತ್ತಾಯ5:14). ನಮ್ಮ ಒಳ್ಳೆಯ ಕಾರ್ಯಗಳು-ಸೇವೆ, ನಾವು ಆತನ ಹೆಸರಿನಲ್ಲಿ ಮಾಡುವ ಕೆಲಸಗಳು ಮತ್ತು ಅತನ ಸಲುವಾಗಿ, ನಮ್ಮ ರಾಜ್ಯ ನಿಯೋಜನೆ - ಜನರು ಅವರ ಮುಂದೆ ಬೆಳಕು ಹೊಳೆಯುವುದನ್ನು ಜನರು ನೋಡುವ ರೀತಿಯಾಗಿರುತ್ತದೆ ಮತ್ತು ಹೀಗೆ ಸ್ವರ್ಗದಲ್ಲಿರುವ ನಮ್ಮ ತಂದೆಯನ್ನು ಮಹಿಮೆಪಡಿಸಿಪಡಿಸುತ್ತಾರೆ (ಮತ್ತಾಯ 5:16). ನಮ್ಮ ಜೀವನ ಮತ್ತು ಸೇವೆ,ಯೇಸು ಬರುವ ತನಕ ನಿರಂತರವಾಗಿ ನಮ್ಮಬೆಳಕನ್ನು ಹೊರಹೊಮ್ಮಿಸ ಬೇಕು ಎಂಬುದನ್ನು ನಾವು ಖಚಿತಪಡಿಸಿಕೊಳ್ಳಬೇಕು. ಇದು ಸಂಭವಿಸಲು , ನಾವು ನಿರಂತರವಾಗಿ ತೈಲ ಪೂರೈಕೆಯನ್ನು ಹೊಂದಿರಬೇಕು. ತೈಲವು,ದೇವರ ಜೀವನ, ಪ್ರಸನ್ನತೆ, ಅಭಿಷೇಕ, ಆತನ ಆತ್ಮದ ಕೆಲಸ - ಇವಿಲ್ಲದೆ ನಾವು ಮತ್ತು ನಾವು ಮಾಡುವ ಒಳ್ಳೆಯ ಕಾರ್ಯಗಳು ನಿರ್ಜೀವವಾಗಿವೆ.ನಾವು ಹಾದುಹೋಗುವ ಪ್ರತಿ ದಿನದಂದು ನಿರಂತರವಾಗಿ ಈ ತೈಲ ಪೂರೈಕೆ ಇರುವುದನ್ನು ಖಚಿತಪಡಿಸಿಕೊಳ್ಳಬೇಕು.ನಾವು ಅದನ್ನು ಹೇಗೆ ಮಾಡಬಹುದು? ತೈಲವು ಪ್ರಾರ್ಥನೆ, ವಿಧೇಯತೆ ಮತ್ತು ಅನ್ಯೋನ್ಯತೆಯಲ್ಲಿ ಅತನೊಂದಿಗೆ ಸಂಪರ್ಕ ಹೊಂದಿದ

" ಆತನಲ್ಲಿ ನೆಲೆಗೊಂಡಿರುವ" ಜೀವನದಿಂದ ಬರುತ್ತದೆ ಅದು ಯಾವಾಗಲೂ ಅತನ ಹೃದಯದೊಂದಿಗೆ ಸಂಪರ್ಕದಲ್ಲಿದೆ ಇದು ನಮ್ಮ ಜೀವನದಲ್ಲಿ ನಿರಂತರ ಆಧಾರದಲ್ಲಿ ಕೆತ್ತದೆ,ಇದ್ದರೆ ನಾವ ಸ್ವಲ್ಪ ಸಮಯದವರೆಗೆ ದೀಪಗಳನ್ನು ಉರಿಸುವ ಐದು ಕನ್ಯೆಯರಂತೆ, ಆದರೆ ರಾಜನು ಬರುವ ತನಕ ಸಾಕಾಗುವುದಿಲ್ಲ

ದೇವರ ರಾಜ್ಯದ ಜೀವನವು ಆತನು ಬರುವ ತನಕ ನಮ್ಮ ಜೀವನ ಮತ್ತು ಸೇವೆಯಲ್ಲಿ ಆತನ ಬೆಳಕನ್ನು ಪ್ರಕಾಶಿಸಲು ನಿರಂತರ ಅನ್ಯೋನ್ಯತೆಯ ಜೀವನಶೈಲಿಯನ್ನು ಬಯಸುತ್ತದೆ

## ದೇವರ ರಾಜ್ಯದ ಸಲುವಾಗಿ ಅವಿವಾಹಿತರಾಗಿರುವುದು

**ಮತ್ತಾಯ 19:9-12**
**9ಮತ್ತು ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಮತ್ತೊಬ್ಬಳನ್ನು ಮದುವೆಮಾಡಿಕೊಳ್ಳುವವನು ವ್ಯಭಿಚಾರ ಮಾಡುವವನಾಗುತ್ತಾನೆಂದು ನಿಮಗೆ ಹೇಳುತ್ತೇನೆ ಅಂದನು.**
**10 ಅದಕ್ಕೆ ಶಿಷ್ಯರು - ಹೆಂಡತಿಯ ವಿಷಯವಾಗಿ ಗಂಡನ ಧರ್ಮ ಹೀಗಿದ್ದರೆ ಮದುವೆಯಾಗುವದು ಒಳ್ಳೇದಲ್ಲ ಅಂದಾಗ**
**11 ಆತನು ಅವರಿಗೆ - ಈ ಮಾತನ್ನು ಅಂಗೀಕರಿಸುವ ವರವನ್ನು ಹೊಂದಿದವರೇ ಹೊರತು ಮತ್ತಾರೂ ಅದನ್ನು ಅಂಗೀಕರಿಸುವದಿಲ್ಲ.**
**12 ತಾಯಿಯ ಗರ್ಭದಿಂದ ನಪುಂಸಕರಾಗಿ ಹುಟ್ಟಿದವರು ಕೆಲವರು ಇದ್ದಾರೆ; ಮನುಷ್ಯರಿಂದ ನಪುಂಸಕರಾಗಿ ಮಾಡಲ್ಪಟ್ಟವರು ಕೆಲವರು ಇದ್ದಾರೆ; ಮತ್ತು ಪರಲೋಕರಾಜ್ಯದ ನಿಮಿತ್ತವಾಗಿ ತಮ್ಮನ್ನು ತಾವೇ ನಪುಂಸಕರಾಗಿ ಮಾಡಿಕೊಂಡವರು ಕೆಲವರು ಇದ್ದಾರೆ. ಅಂಗೀಕರಿಸಬಲ್ಲವನು ಅಂಗೀಕರಿಸಲಿ ಎಂದು ಹೇಳಿದನು.**

“ನಪುಂಸಕ” ಎಂಬ ಪದವನ್ನು ಇಲ್ಲಿ ಮದುವೆಯಾಗದೆ-ಬ್ರಹ್ಮಚಾರಿಯಾಗಿರುವ ಸಂದರ್ಭದಲ್ಲಿ ಬಳಸಲಾಗುತ್ತದೆ. ಸಾಮಾನ್ಯವಾಗಿ ಅರ್ಥಮಾಡಿಕೊಳ್ಳುವಂತೆ ಇದು ಕೆಲವು ದೈಹಿಕ ಬದಲಾವಣೆಗೆ ಒಳಗಾಗುತ್ತಿಲ್ಲ.ಮದುವೆಗೆ ಯಾವುದೇ ಒಲವು ಅಥವಾ ಬಯಕೆ ಇಲ್ಲದ ಬ್ರಹ್ಮಚಾರಿಗಳಾಗಿರಲು ಕೆಲವರು ಹುಟ್ಟಿದ್ದಾರೆ .ಸಾಮಾಜಿಕ, ಧಾರ್ಮಿಕ ಅಥವಾ ಇತರ ಪ್ರಭಾವ ಗಳು ಅವರನ್ನುಬ್ರಹ್ಮಚಾರಿಗಳಾಗಿರಲು ಒತ್ತಾಯಿಸಿ ಮನುಷ್ಯನಿಂದ ಬ್ರಹ್ಮಚಾರಿಯಾಗಿರುವವರು-ಇದ್ದಾರೆ ತದನಂತರ ದೇವರ ರಾಜ್ಯದ ಸಲುವಾಗಿ ಬ್ರಹ್ಮಚರ್ಯ ಜೀವನಶೈಲಿಯನ್ನು ಆಯ್ಕೆ ಮಾಡಿದವರು ಇದ್ದಾರೆ.ಅಪೊಸ್ತಲ ಪೌಲನು ಈ ಮೂರನೇ ವರ್ಗದ ಶ್ರೇಷ್ಠ ಉದಾಹರಣೆ. ನಂಬುವ ಹೆಂಡತಿ ತನಗೆ ತೆಗೆದುಕೊಳ್ಳುವ ಹಕ್ಕಿದೆ ಎಂದು ಪೌಲನಿಗೆ ತಿಳಿದಿತ್ತುಮತ್ತು ಆದರೂ ಸುವಾರ್ತೆಯನ್ನು ಸಾರುವುದಕ್ಕೆ ಅವನು ಈ ಹಕ್ಕನ್ನು ತ್ಯಜಿಸಲು ನಿರ್ಧರಿಸಿದನು(1 ಕೊರಿಂಥ 9: 5,15,16) ಇದರಿಂದ ಅವನು ಕರ್ತನ ಸೇವೆಯನ್ನು ಯಾವುದೇ ಕಾರ್ಯಭಂಗ ರಹಿತವಾಗಿ ಮಾಡಬಹುದಾಗಿತ್ತು (1 ಕೊರಿಂಥ 7:35).

# 6.ದೇವರ ರಾಜ್ಯದ ಸಂಸ್ಕೃತಿ

## ಅರಸರುಗಳು ಮತ್ತು ಯಾಜಕರುಗಳು

ವಿಶ್ವಾಸಿಗಳಾಗಿ ನಾವು ಆತನ ರಕ್ತದಿಂದ ನಮ್ಮ ಪಾಪಗಳಿಂದ ತೊಳೆಯಲ್ಪಟ್ಟಿದ್ದೇವೆಯೇಸು, ಮತ್ತು ಆತನು ನಮ್ಮನ್ನು ನಮ್ಮ ದೇವರಿಗೆ ರಾಜರು ಮತ್ತು ಯಾಜಕರನ್ನಾಗಿ ಮಾಡಿದ್ದಾನೆ (ಪ್ರಕಟನೆ 1: 5,6). ನಾವು ರಾಜರು ಮತ್ತು ನಮ್ಮ ದೇವರಿಗೆ ಯಾಜಕರು ಎಂಬ ವರ್ತಮಾನ ಕಾಲದ- ಅನ್ವಯವಿದೆ ಪ್ರಸ್ತುತದಲ್ಲಿ, ಅರಸರು ಮತ್ತು ಯಾಜಕರಾಗಿ ಭೂಮಿಯ ಮೇಲೆ ದೇವರ ಆಳ್ವಿಕೆ ಮತ್ತು ರಾಜ್ಯಭಾರ ಪ್ರತಿನಿಧಿಸುತ್ತೇವೆ.ನಮ್ಮಭೂಲೋಕದ ಕ್ಷೇತ್ರದಲ್ಲಿ ಆತನ ರಾಜ್ಯವು ಬರುವುದನ್ನು ನೋಡಲು ನಾವು ಇಲ್ಲಿದ್ದೇವೆ . ಈ ಜೀವಿತದ ವ್ಯವಹಾರಗಳಲ್ಲಿ ಸ್ವರ್ಗೀಯ ಹಸ್ತಕ್ಷೇಪವನ್ನು ತರಲು ಮತ್ತುದೇವರ ಹೃದಯ ಹುಡುಕಲು ,ಭೂಲೋಕದ ವಿಚಾರಗಳನ್ನು ಪರಲೋಕಕ್ಕೆ ತೆಗೆದುಕೊಂಡು ಹೋಗಲು ಮತ್ತು ಆರಾಧನೆಯಲ್ಲಿ ನಮ್ಮ ದೇವರಿಗೆ ಮಹಿಮೆಪಡಿಸಲು ಯಾಜಕರಂತೆ ನಾವಿದ್ದೇವೆ ನಾವು ಆತನ ಅಕ್ಷರಶಃ ರಾಜ್ಯದಲ್ಲಿ ಭೂಮಿಯ ಮೇಲೆ ಆಳ್ವಿಕೆ ನಡೆಸುವುದರಲ್ಲಿ ಅರಸರು ಮತ್ತು ಯಾಜಕರುಗಳಾಗಿ ಒಂದು ಭವಿಷ್ಯ-ಕಾಲದ ಅನ್ವಯವು ಸಹ ಇದೆ (ಪ್ರಕಟನೆ 5: 9,10).

ರಾಜ ವಂಶಸ್ಥರಾದ ಯಾಜಕರುಗಳು ರಾಜಮನೆತನದವರು, ರಾಜರು,ಅಥವಾ ಯಾಜಕರುಗಳಂತೆ ನಾವು ಒಂದು ಪವಿತ್ರ ದೇಶದವರಾಗಿದ್ದೇವೆ (1 ಪೇತ್ರ 2: 9). “ರಾಷ್ಟ್ರ” ಎಂಬ ಪದ ಗ್ರೀಕ್“ಎಥ್ನೋಸ್” ಇದು ಜನಾಂಗ ಅಥವಾ ಬುಡಕಟ್ಟು ಎಂದೂ ಅರ್ಥೈಸಬಲ್ಲದು. ಒಂದು ರಾಷ್ಟ್ರ, ಜನಾಂಗ ಅಥವಾ ಬುಡಕಟ್ಟು ಮೂಲಭೂತವಾಗಿ ಒಂದೇ ಅಭ್ಯಾಸ, ಪದ್ಧತಿಗಳು ಅಥವಾ ಸಂಸ್ಕೃತಿ.ಜನರಾಗಿರುತ್ತಾರೆ, ಅರಸರುಗಳು ಮತ್ತು ಯಾಜಕರುಗಳಂತೆ ಒಂದೇ ಸಾಮಾನ್ಯ ರಾಜ್ಯದ ಸಂಸ್ಕೃತಿಯ ಜನರಾಗಿದ್ದೇವೆ ಹಂಚಿಕೆಯ ವರ್ತನೆಗಳು, ಮೌಲ್ಯಗಳು, ಗುರಿಗಳು ಮತ್ತು ಅಭ್ಯಾಸಗಳ ನಾವು ಹೊಂದಿದ್ದೇವೆ. ನಾವು ನಂಬಿಕೆ ಮತ್ತು ನಡವಳಿಕೆಯ ಸಾಮಾನ್ಯ ವ್ಯವಸ್ಥೆಯನ್ನು ಹಂಚಿಕೊಳ್ಳುತ್ತೇವೆ ನಾವು ವಿಶ್ವಾಸಿಗಳ ಸಮುದಾಯವಾಗಿ ದೇವರರಾಜ್ಯದ ಯೋಚನೆ ಮತ್ತು ದೇವರರಾಜ್ಯದ ಜೀವಿತವನ್ನು ಅನುಸರಿಸಿದಾಗ, ನಮ್ಮ ಪರಿಸರದಲ್ಲಿ ನಾವು ದೇವರರಾಜ್ಯದ ಸಂಸ್ಕೃತಿಯನ್ನು ರಚಿಸಲು ಸಾಧ್ಯವಾಗುತ್ತದೆ.

## ಚಾಲ್ತಿಯಲ್ಲಿರುವ ಸಂಸ್ಕೃತಿ

ವಿಶ್ವಾಸಿಗಳ ಸಮುದಾಯವು ಅವರ ಮಧ್ಯದಲ್ಲಿ ಸತ್ಯವಾದ ದೇವರ ರಾಜ್ಯದ ಸಂಸೃತಿಯನ್ನು ಸ್ಥಾಪಿಸಿದಾಗ ಅದರ ಚಾಲ್ತಿಯಲ್ಲಿರುವ ಸಂಸ್ಕೃತಿಯನ್ನು ಅವರು

ಗುರ್ತಿಸುತ್ತಾರೆ ದೇವರ ರಾಜ್ಯದ ಸಂಸ್ಕೃತಿ ಸುತ್ತಮುತ್ತಲಿನ ಯಾವುದೇ ಸಂಸ್ಕೃತಿಯ ದುಷ್ಕೃತ್ಯಗಳನ್ನು ಮೀರಿಸುತ್ತದೆ ಅದು. ಜನರು ದೇವರ ರಾಜ್ಯದ ಸಂಸ್ಕೃತಿ ಪರಿಸರಕ್ಕೆ ಬಂದಾಗ, ಅವರ ಅಸ್ತಿತ್ವದಲ್ಲಿರುವ ಸಂಸ್ಕೃತಿಯ ಕೆಟ್ಟದ್ದನ್ನು ಅವರೊಂದಿಗೆ ತರುತ್ತಾರೆ, ಅವರು ನಡೆದು ಬಂದಂತದ್ದರೊಡನೆ ಬದಲಾಗುವುದು ಸಂಸ್ಕೃತಿ ಮಾತ್ರವೇ ಆಗಿದೆ

ಅಂತಹ ರಾಜ್ಯದ ಅರಸರುಗಳು ಮತ್ತು ಯಾಜಕರುಗಳಂತೆ ಸತ್ಯವಾಗಿ ಕಾರ್ಯನಿರ್ವಹಿಸುವ ವಿಶ್ವಾಸಿಗಳ ಸಮುದಾಯಗಳ ಮದ್ಯದಲ್ಲಿ ಅಂತಹ ಸಂಸ್ಕೃತಿಯನ್ನು ಸತ್ಯವಾಗಿ ಸ್ಥಾಪಿಸುವುದು ಸವಾಲು ಆಗಿದೆ ವಿಸ್ವಾಸಿಗಳು ದೇವರ ರಾಜ್ಯದ ಬೋಧನೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ದೇವರ ರಾಜ್ಯದ ದೃಷ್ಟಿಕೋನದಲ್ಲಿ ಆಲೋಚಿಸಲು ಮತ್ತು ಜೀವಿಸಲು ಪ್ರಾರಂಭಿಸುವಂತೆ ಮಾಡಿದರೆ ಆಗ ನಾವು ವಿಶ್ವದ ಯಾವುದೇ ಭಾಗ,ಯಾವುದೇ ಸಮುದಾಯದಲ್ಲಿ ಬಲವಾದ ರಾಜ್ಯ ಸಂಸ್ಕೃತಿಯನ್ನು ಸ್ಥಾಪಿಸಬಹುದು ಅಂತಹ ಸಮುದಾಯವು ದೇವರ ರಾಜ್ಯವನ್ನು ಮುನ್ನಡೆಸಲು ಬಲವುಳ್ಳ ಚಾಲ್ತಿಯಲ್ಲಿರುವುದಾಗಿ ಕಂಡುಬರುತ್ತದೆ ನಿಜವಾಗಿಯೂ ಅವರು ಉಪ್ಪಾಗಿರುತ್ತಾರೆ ಮತ್ತು ಅವರ ಜಗತ್ತಿನಲ್ಲಿ ಬೆಳಕಾಗಿರುತ್ತಾರೆ

ರಾಜ್ಯ ಸಂಸ್ಕೃತಿಯ ಕೆಲವೇ ಅಂಶಗಳು ಇಲ್ಲಿವೆ:

## ಗೌರವದ ಒಂದು ಸಂಸ್ಕೃತಿ

ದೇವರ ರಾಜ್ಯದ ಸಂಸ್ಕೃತಿಯು ಗೌರವ, ಪೂಜ್ಯತೆ ಮತ್ತು ಘನತೆಯನ್ನು ಕೊಡುವುದನ್ನು ನಾವು ಅಭ್ಯಾಸಿಸುವಂತದ್ದಾಗಿರುತ್ತದೆ. ದೇವರ ರಾಜ್ಯದ ಮುಖ್ಯಸ್ಥನಾದ ನಮ್ಮ ದೇವರು, ನಮ್ಮ ಕರ್ತನು ಮತ್ತು ನಮ್ಮ ಅರಸನನ್ನು ನಾವು ಘನತೆಯನ್ನು ಸಲ್ಲಿಸುತ್ತೇವೆ. ದೇವರ ರಾಜ್ಯದಲ್ಲಿ ನಿರ್ಧಿಷ್ಟ ಕಾರ್ಯವೈಖರಿಗಳಲ್ಲಿ ಸೇವೆ ಸಲ್ಲಿಸಲು ದೇವರಿಂದ ನೇಮಿಸಲ್ಪಟ್ಟವರಿಗೆ ನಾವು ಘನತೆಯನ್ನು ದಯಪಾಲಿಸುತ್ತೇವೆ. ದೇವರ ಜನರನ್ನು ಉತ್ತಮವಾಗಿ ನಡೆಸುವವರು ಮತ್ತು ದೇವರ ವಾಕ್ಯದಲ್ಲಿ ಮತ್ತು ದೈವ ಸಿದ್ಧಾಂತದಲ್ಲಿ ದುಡಿಯುವವರಿಗೆ “ಇಮ್ಮಡಿಯಾದ ಮಾನವು” ಕೊಡಲ್ಪಟ್ಟಿದೆ.(1 ತಿಮೊಥೆಯನಿಗೆ 5-17 ) ನೀವು ಯಾರಾನ್ನಾದರೂ ಗೌರವಿಸುವಾಗ ಅವರು ವೈಯಕ್ತಿಕವಾಗಿ ನಿಮಗೆ ಅವರು ಯಾವ ಅರ್ಥವುಳ್ಳವರು ಮತ್ತು ಅವರು ಯಾರು ಎಂಬುದರ ಮೇಲೆ ನಿಮ್ಮ ಸ್ಥಿತಿಯ ಮೌಲ್ಯವನ್ನು ನೀವು ತೋರಿಸುತ್ತೀರಿ. ನೀವು ಹೇಳುವಂತಹ ಮತ್ತು ನೀವು ಮಾಡುವ ಕ್ರಿಯೆ ಮೂಲಕ ನೀವು ಮಾನವನ್ನು ಕೊಡುತ್ತೀರಿ. ನೀವು ಒಬ್ಬರ ಕುರಿತು ಬಹಳ ಮಾತಾಡುವಾಗ ನೀವು ಮಾನವನ್ನು ಕೊಡುತ್ತೀರಿ. ನೀವು ಒಬ್ಬರ ಕುರಿತು ಬಹಳ ಮಾತಾಡುವಾಗ ನೀವು ಘನತೆಯನ್ನು ಕೊಡುತ್ತೀರಿ. ಯಾರಾದರೊಬ್ಬರ ಮಾನಹಾನಿ ಮಾಡಲು ನೀವು ನಿರಾಕರಿಸುವಾಗ ನೀವು ಘನತೆಯನ್ನು ನೀಡುತ್ತೀರಿ ನೀವು ಒಬ್ಬ ವ್ಯಕ್ತಿಯ ಪ್ರಸನ್ನತೆಯಲ್ಲಿ ನಿಂತುಕೊಳ್ಳುವಾಗ, ಚಪ್ಪಾಳೆಯೊಡನೆ ಹೊಗಳುವಾಗ, ಹಣಕಾಸಿನಲ್ಲಿ ಸಹಾಯ

ಕೊಡುವಾಗ ಅಥವಾ ಯಾವ ರೀತಿಯಲ್ಲಿಯಾದರೂ ಸೇವೆ ಸಲ್ಲಿಸುವಾಗ ಆ ವ್ಯಕ್ತಿಗೆ ನೀವು ಘನತೆ ತೋರಿಸುತ್ತೀರಿ.

ನೀವು ಯಾರಾನ್ನಾದರೂ ಗೌರವಿಸುವಾಗ, ನೀವು ಜೀವಿತಗಳ ಮೂಲಕ ನೀವು ಹೊಂದಿಕೊಳ್ಳಲೂ, ಶಕ್ತರಾಗುತ್ತೀರಿ. ಒಬ್ಬ ಪ್ರವಾದಿ, ಒಬ್ಬ ನೀತಿವಂತ ಮನುಷ್ಯ ಅಥವಾ ಶಿಷ್ಯರನ್ನು ದೇವರ ರಾಜ್ಯದಲ್ಲಿ ಅವರು ಏನಾಗಿದ್ದಾರೆಂಬುದಾಗಿ ಅವರನ್ನು ಸ್ವೀಕರಿಸುವಾಗ ಅಥವಾ ಗೌರವಿಸುವಾಗ, ಅವರು ಏನಾಗಿದ್ದಾರೆಂಬುದನ್ನು ಪ್ರತಿನಿಧಿಸುವಂತಹ ಒಂದು ಬಹುಮಾನವನ್ನು ನೀವು ಪಡೆದುಕೊಳ್ಳುತ್ತೀರಿ.(ಮತ್ತಾಯ 10:41,42)

ಪಾಸ್ಟರ್ ಬಿಲ್ ಜಾನ್ಸನ್ ಬೇತೇಲ್ ಸಭೆ (ರೆಡ್ಡಿಂಗ್, ಸಿ.ಎ ) ಅವರು ಹಂಚಿಕೆಯಲ್ಲಿ ನಾವು ಕೇಳಿದ್ದನ್ನು ಬಹಳ ಇಷ್ಟಪಡುತ್ತೇನೆ. ಎಲೀಷನು ಎಲೀಯನಿಂದ ತರಬೇತಿ ಹೊಂದಿದನು ಮತ್ತು ಎರಡರಷ್ಟು ಅಭಿಷೇಕ ಮತ್ತು ಬಲವನ್ನು ಹೊಂದಿದ್ದನು. ಮತ್ತು ಅನೇಕ ಅದ್ಭುತ ಕಾರ್ಯಗಳಲ್ಲಿ ಎರಡರಷ್ಟನ್ನು ಮಾಡಿದನು. ಆದಾಗ್ಯೂ ಸ್ಥಾನಿಕನಾದ ಯೋಹಾನನು ಪೂರ್ವಿಕನು, ಎಲೀಯನು ಬಲ ಮತ್ತು ಆತ್ಮದಲ್ಲಿ ಬಂದನು ಎಲೀಷನಲ್ಲಿ ಬರಲಿಲ್ಲ. ಅದು ಏಕೆ? ಪಾಸ್ಟರ್ ಬಿಲ್ ರವರು ಹೀಗೆ ವಿವರಿಸುತ್ತಾರೆ. ದೇವರು ಒಂದು ಚಳುವಳಿಯ ತಂದೆಯರನ್ನು ಗೌರವಿಸುತ್ತಾನೆ. ಮೌಲ್ಯವನ್ನು ಪಾವತಿಸಿದವನೊಬ್ಬನ ಮೇಲೆ ಮತ್ತು ಬೀಜಗಳನ್ನು ಬಿತ್ತಿದವನು ಮತ್ತು ಒಂದು ಸ್ಥಳದಲ್ಲಿ ದೇವರ ಒಂದು ನೂತನ ಚಲನೆಯನ್ನು ಪ್ರವರ್ತಗೊಳಿಸಿದವರಿಗೆ ದೇವರು ಘನತೆಯನ್ನು ಇರಿಸುತ್ತಾನೆ.

## ನಿಸ್ವಾರ್ಥಕೊಡುವಿಕೆಯ ಒಂದು ಸಂಸ್ಕೃತಿ

ದೇವರ ರಾಜ್ಯದ ಸಂಸ್ಕೃತಿಯು ಇದರ ನಿಸ್ವಾರ್ಥ ಕೊಡುವಿಕೆಯಿಂದ ವರ್ಣಿಸಲ್ಪಟ್ಟಿದೆ. ಕೊಡುವಿಕೆಯಿಂದ ವರ್ಣಿಸಲ್ಪಟ್ಟಿದೆ. ಕೊಡುವಿಕೆಯ ಪ್ರಕ್ರಿಯೆಯಲ್ಲ ಆನಂದವಿದೆ. ಇದು ಸಮಯವನ್ನು ಪರಿಶ್ರಮಗಳು, ಪ್ರೋತ್ಸಾಹ, ಚಂಬಲ, ಸಂತೈಸುವಿಕೆ, ಹಣಕಾಸು ಮತ್ತು ಇತರೆ ವಿಷಯಗಳನ್ನು ಕೊಡುವುದಾಗಿರಬಹುದು. ಕೊಡುವಿಕೆಯ ಯಾವುದೇ ರೂಪವಾಗಿರಬಹುದು ಜನರು ತುಂಬಾ ಹರ್ಷಚಿತ್ತದಿಂದ ಮಾಡುತ್ತಾರೆ. ಜನರು ಸಂತೋಷದಿಂದ ತ್ಯಾಗ ಮಾಡುತ್ತಾರೆ. ಇದು ಸ್ವಯಂಪ್ರೇರಿತ, ಬಲತ್ಕಾರ ಅಥವಾ ಕಡ್ಡಾಯರಹಿತವಾಗಿರುತ್ತದೆ. ಇದು ಹೃದಯದಿಂದ ಹೊರ ಸೂಸುತ್ತದೆ. ನಿಸ್ವಾರ್ಥ ಕೊಡುವಿಕೆಯು ತೆರೆಮರೆಯಲ್ಲಿ ಗಮನಕ್ಕೆ ಬಾರದೆ ಮತ್ತು ಹೆಚ್ಚಾಗಿ ಪ್ರಶಂಸೆಗೆ ಆಗಾಗ್ಗೆ ಒಳಗಾಗದಿರುವಂತಹ ದೇವರ ರಾಜ್ಯದಲ್ಲಿ ಪುರುಷ ಮತ್ತು ಸ್ತ್ರೀಯರಲ್ಲಿ ಕಾಣಿಸಲ್ಪಟ್ಟಿದೆ. ನಿಸ್ವಾರ್ಥ ಕೊಡುವಿಕೆಯು ಭೂಲೋಕದ ಅವಕಾಶಗಳು ಮತ್ತು ಯಶಸ್ಸುಗಳನ್ನು ತ್ಯಜಿಸಿದಂತಹ ಮತ್ತು ದೇವರ ರಾಜ್ಯದ ಮುಂದುವರಿಕೆ ಮತ್ತು ಜನರಿಗೆ ಸೇವೆ ಸಲ್ಲಿಸಲೂ ಅವರ ಬಲವನ್ನು ಮತ್ತು ಸಮಯವನ್ನು ಹೂಡಿಕೆ ಮಾಡಿದಂತಹ ದೇವರ ರಾಜ್ಯದ

ಪುರುಷ ಮತ್ತು ಸ್ತ್ರೀಯರಲ್ಲಿ ಕಾಣಿಸಲ್ಪಟ್ಟಿದೆ. ಕೊಡುವವನಿಗೆ ಪಡೆಯುವವನು ಹಿಂತಿರುಗಿ ಕೊಡಲೂ ಶಕ್ತವಾದಂತಹ ಒಂದು ಸ್ಥಾನದಲ್ಲಿ ಜರುಗುವಂತಹ ಕೊಡುವಿಕೆಯ ಒಂದು ರೀತಿಯದ್ದಲ್ಲ. ಬದಲಿಗೆ ತಕ್ಕ ಸಮಯದಲ್ಲಿ ದೇವರು ನಮಗೆ ಬಹುಮಾನ ನೀಡುವನು ಎಂಬುದನ್ನು ತಿಳಿಯದಂತಹ, ನಮ್ಮಿಂದ ಪಡೆದುಕೊಂಡವರಿಂದ ಹಿಂತಿರಗಿ ಏನನ್ನು ಎದುರು ನೋಡದೆ ಕೊಡುವಂತಹ ಒಂದು ವಿಧ ಇದಾಗಿದೆ.

"ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅವನನ್ನು ನನಗೂ ಮಾಡಿದ ಹಾಗಾಯಿತು. (ಮತ್ತಾಯ 25:40) ಎಂಬುದಾಗಿ ಆತನು ಹೇಳಿದಂತಹ ಅರಸನ ಮಾತುಗಳಿಂದ ಪ್ರೇರಣೆಗೊಂಡು ಕೊಡುವಂತಹ ಒಂದು ವಿಧವು ಇದಾಗಿದೆ. ಇದು ದೇವರ ಪ್ರೀತಿಗಾಗಿ ಮತ್ತು ಜನರ ಪ್ರೀತಿಗಾಗಿ ಪ್ರೇರಣೆಗೊಂಡಂತಹ ಕೊಡುವಿಕೆಯ ಒಂದು ವಿಧವು ಇದಾಗಿದೆ.

## ಧೈರ್ಯಶಾಲಿ ನಂಬಿಕೆಯ ಒಂದು ಸಂಸ್ಕೃತಿ

ದೇವರ ರಾಜ್ಯದ ಸಂಸ್ಕೃತಿಯು ಧೈರ್ಯಶಾಲಿ ನಂಬಿಕೆಯ ಜನರಿಂದ ಗುಣಲಕ್ಷಣ ಹೊಂದಿದೆ. – ಅವರ ಹೃದಯದಲ್ಲಿ ಸಮೃದ್ದಿ ಆನಂದ ಮತ್ತು ಅವರ ಮುಖದ ಮೇಲೆ ಒಂದು ನಗುವಿನೊಡನೆ ಪ್ರತಿಕೂಲ ರೂಪದಲ್ಲಿ ಬಲಿಷ್ಟವಾಗಿ ನಿಂತುಕೊಂಡಿರುವ ಜನರು ಆಗಿದ್ದಾರೆ. ಇಂತಹ ಬಗೆಯ ನಂಬಿಕೆಯು ದೈನಂದಿನ ಜೀವಿತದಲ್ಲಿ ಮಾತನಾಡಲೂ, ದೋಣಿಯಿಂದ ಹೊರ ಬಂದು- ಕೆಲವು ಹಾನಿ ಸಂಭವಗಳನ್ನು ಒಬ್ಬನು ಹೊಂದಲೂ ಶಕ್ತಗೊಳಿಸುತ್ತದೆ. ಧೈರ್ಯಶಾಲಿ ನಂಬಿಕೆಯ ಜನರು ಅಪಾವ ಸಂಭವಗಳನ್ನು ತೆಗೆದುಕೊಳ್ಳುವವರಾಗಿರುತ್ತಾರೆ. ದೇವರ ರಾಜ್ಯವು ಬರುವುದನ್ನು ಮತ್ತು ಆತನ ಚಿತ್ತವು ನೆರವೇರುವುದನ್ನು ನೋಡುವ ಕ್ರಮದಲ್ಲಿ ಅವರ ಗೌರವವನ್ನು ಸಾಲಿನಲ್ಲಿರಿಸಲು ಅವರು ಮನಸ್ಸಿಗೆ ತೆಗೆದುಕೊಳ್ಳುವುದಿಲ್ಲ. ಎಲ್ಲಾ ವೆಚ್ಚಗಳಲ್ಲಿ ದೇವರು ಮಹಿಮೆ ಹೊಂದಿದ್ದನ್ನು ನೋಡಲೂ ಅವರು ಪ್ರೇರಣೆ ಹೊಂದಿರುತ್ತಾರೆ. ಇಂತಹ ಬಗೆಯ ನಂಬಿಕೆಯು ವ್ಯಾಪಾರ ಸ್ಥಳದಲ್ಲಿರಬಹುದು, ಸಮುದಾಯಗಳಲ್ಲಿ ಅಥವಾ ಸಂಧಿಸಿರುವ ಪ್ರದೇಶಗಳಿರಬಹುದು ಇಲ್ಲಿ ದೇವರ ರಾಜ್ಯದ ಮುಂದೆವರಿಕೆಯನ್ನು ನೋಡುತ್ತದೆ.ಇಂತಹ ವಿಧದ ನಂಬಿಕೆಯು ಅದ್ಭುತಗಳ ಸ್ವಸ್ಥತೆಗಳು ಮತ್ತು ಬಿಡುಗಡೆಗಳು ಕಾರಣವಾಗುತ್ತದೆ.

## ಆನಂದದ ಒಂದು ಸಂಸ್ಕೃತಿ

ಯೇಸುಕ್ರಿಸ್ತನ ಹೆಸರಿನಲ್ಲಿ ಫಿಲಿಪ್ಪನು ಸಮಾರ್ಯದಲ್ಲಿ ದೇವರ ರಾಜ್ಯದ ಕುರಿತು ವಿಷಯಗಳನ್ನು ಪ್ರಸಂಗಿಸಿದಾಗ ಆ ಒಂದು ನಗರದಲ್ಲಿ ಮಹಾಸಂತೋಷವಿತ್ತು. ಅಶುದ್ದ ಆತ್ಮಗಳು ಹೊರಟು ಹೋದವು ಕುಂಟರು ಸಂಪೂರ್ಣ ಗುಣ ಹೊಂದಿದರು ಮತ್ತು ಜನರು ಆನಂದಿಸಿದರು. ಅವರ ಮಧ್ಯದಲ್ಲಿ ದೇವರ ರಾಜ್ಯವನ್ನು ಅನುಭವಿಸಿದ ಮತ್ತು ಜೀವಿಸಿದಂತಹ ಜನರುಗಳು ಪವಿತ್ರಾತ್ಮದಲ್ಲಿ ನೀತಿವಂತಿಕೆ  ಸಮಾಧಾನ ಮತ್ತು

ಆನಂದವನ್ನು ನಿರೂಪಿಸಿದರು. ಯಾವುದು ಈ ಆನಂದವನ್ನು ಕದ್ದುಕೊಳ್ಳುವುದಿಲ್ಲ. ಯಾವುದೇ ಮಾನಹಾನಿಯಿಲ್ಲ, ಯಾವುದೇ ಅಪಚಾರವಿಲ್ಲ ಅಥವಾ ಹಿಂಸೆಯು ಕರ್ತನ ಆನಂದವನ್ನು ಅವರು ಕಳೆದುಕೊಳ್ಳಲು ಕಾರಣವಾಗುವುದಿಲ್ಲ. ಕರ್ತನ ಆನಂದವು ಹರ್ಷಚಿತ್ತದ ನಗೆಯೊಡನೆ ವ್ಯಕ್ತವಾಗುವುದು ಮಾತ್ರವಲ್ಲದೇ ಯಾವುದೇ ಪರಿಸ್ಥಿತಿಯ ಮದ್ಯದಲ್ಲಿ ಭರವಸೆ ಮತ್ತು ಸಮಾಧಾನದ ಶಾಂತ ಪ್ರಜ್ಞೆಯ ಮೂಲಕವಾಗಿಯೂ ವ್ಯಕ್ತಪಡಿಸಲ್ಪಟ್ಟಿದೆ. ಇಡೀ ಲೋಕವು ನಿಮ್ಮ ಮೇಲೆ ತೂಗುತ್ತಿರುವಂತೆ ಕಾಣಿಸುವಾಗಲೂ ಬೆಳಕಾಗಿರುವುದರ ಸಾಮರ್ಥ್ಯವು ಇದಾಗಿದೆ. ವಿಷಯಗಳು ಸಮುದಾಯದಲ್ಲಿ ಜನರನ್ನು ಹೊರತುಪಡಿಸಿ ಎಳೆಯುವಾಗಲೂ "ಒಟ್ಟಿಗೆ ಅಂಟಿಕೊಂಡಿರುವಂತೆ" ಶಕ್ತಿಗೊಳಿಸುವಂತಹ ಒಂದು ಆನಂದ ಇದಾಗಿದೆ. ಇದು ಆತ್ಮನ ಅನ್ಯೋನ್ಯತೆ ಮತ್ತು ಐಕ್ಯತೆಯ ಪೋಷಣೆ ಮಾಡುವ ಆನಂದ ಇದಾಗಿದೆ ."ಹೇಳಲು ಶಕ್ಯವಾದಂಥ ಪ್ರಭಾವವುಳ್ಳ ಸಂತೋಷದಿಂದ ಹರ್ಷಿಸುವ" (1ಪೇತ್ರನು1:8)ಇಂತದ್ದು ದೇವರ ರಾಜ್ಯದ ಸಂಸ್ಕೃತಿಯ ಪರಿಸರವಾಗಿದೆ.

## ಪರಲೋಕದ ಸಂಸ್ಕೃತಿಯು ಭೂಮಿಯ ಮೇಲೆ ಆಕ್ರಮಿಸುತ್ತದೆ.

ದೇವರ ರಾಜ್ಯದ ಸಂಸ್ಕೃತಿಯು ಭೂಮಿಯ ಮೇಲೆ ಪರಲೋಕವನ್ನು ತೋರ್ಪಡಿಸದಿದ್ದರೆ ಪರಿಪೂರ್ಣವಾಗಿರುವುದಿಲ್ಲ. ಆತನ ರಾಜ್ಯವು ಬರಲಿ ಮತ್ತು ಪರಲೋಕದಲ್ಲಿ ಆತನ ಚಿತ್ತವು ನೆರವೇರುವ ಪ್ರಕಾರ ಭೂಲೋಕದಲ್ಲಿಯು ನೆರವೇರಲಿ ಎಂಬುದಾಗಿ ಪ್ರಾರ್ಥಿಸಲು ಹೇಳಲ್ಪಟ್ಟಿದ್ದೇವೆ. ಆತನ ಚಿತ್ತವು ಕಳೆದುಹೋದವರನ್ನು ರಕ್ಷಿಸುವುದು, ರೋಗಿಗಳು ವಾಸಿಯಾಗುವುದು, ದುರಾತ್ಮಗಳು ಹೊರಹಾಕುವುದು, ಬಂಧನದಲ್ಲಿರುವವರನ್ನು ಬಿಡಿಸುವುದು, ಶುಭ ಸಂದೇಶವನ್ನು ಬಡವರಿಗೆ ಕೇಳಲೂ ತಿಳಿಸುವುದು, ಆಶ್ರಯವಿಲ್ಲದವರು ಒಂದು ಆಶ್ರಯ ಹೊಂದುವುದು, ಹಸಿದವರಿಗೆ ಅನ್ನ ಕೊಡುವುದು, ಬೆತ್ತಲೆಯಾಗಿರುವವರಿಗೆ ಬಟ್ಟೆ ಕೊಡುವುದು, ವಿಧವೆಯರು ಮತ್ತು ಅನಾಥರಿಗೆ ಕಾಳಜಿ ತೋರಿಸುವುದು, ದೌರ್ಜನ್ಯ ಮತ್ತು ನಿಂದನೆಗೆ ಒಳಗಾದವರು ಬಿಡುಗಡೆ ಮತ್ತು ನಿರೀಕ್ಷೆ ಪಡೆಯುವುದು –ಪರಲೋಕವನ್ನು ಪ್ರತಿನಿಧಿಸುವ ಎಲ್ಲವೂ ಭೂಮಿಯನ್ನು ಆಶ್ರುಮಿಸುತ್ತದೆ. ಎಲ್ಲಾ ಸಮಯದಲ್ಲಿಯೂ ಇಂತಹ ವಿಷಯಗಳು ಜರುಗುತ್ತಿರುವಂತಹ ಪರಿಸರವು ದೇವರ ರಾಜ್ಯದ ಸಂಸ್ಕೃತಿಯಾಗಿದೆ.

# 7.ದೇವರ ರಾಜ್ಯದ ಸಾಮ್ಯಗಳು

## ಸಾಮ್ಯಗಳು ಏಕೆ?

ಕರ್ತನಾದ ಯೇಸುವು ನಿಕೊದೇಮನೆಂಬ ಒಬ್ಬ ಮನುಷ್ಯನೊಂದಿಗೆ ಸಂಭಾಷಣೆಯಲ್ಲಿ ತೊಡಗಿದ್ದನು ಮತ್ತು ಪರಲೋಕದ ಹುಟ್ಟುವುದು ಅಥವಾ ಹೊಸದಾಗಿ ಹುಟ್ಟುವುದರ ಅವಶ್ಯಕತೆಯನ್ನು ಅವನಿಗೆ ವಿವರಿಸುತ್ತಿದ್ದನು. ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ಪರಲೋಕ ರಾಜ್ಯವನ್ನು ಸೇರಿಸಾರನು ಎಂಬುದಾಗಿ ಯೇಸು ಹೇಳಿದನು. ಒಬ್ಬ ವ್ಯಕ್ತಿಯೊಳಗೆ ಆತ್ಮನ ಈ ಕಾರ್ಯವನ್ನು ವರ್ಣಿಸಲು ಮಗುವಿನ ಜನನದ ಸಾದೃಶ್ಯವನ್ನು ಆತನು ಉಪಯೋಗಿಸಿದನು. ಒಬ್ಬನು ಆತ್ಮದಿಂದಲು ಮತ್ತು ನೀರಿನಿಂದಲೂ ಹುಟ್ಟಬೇಕು ಎಂಬುದಾಗಿ ಆತನು ಹೇಳಿದನು ಮೊದಲ ಪ್ರಾಕೃತ ಜನನದ ಪ್ರಕ್ರಿಯೆಯು ಅರ್ಥವಾಗುವಂತಹದ್ದು, ಎರಡನೇ ಜನನವು ಹೊಸದಾಗಿ ಹುಟ್ಟುವುದು ನೀವು ಸಂಪೂರ್ಣವಾಗಿ ವಿವರಿಸಲಾಗದಂತಹದ್ದು ಆದರೆ ಇದು ಜರುಗಿದೆ ಎಂಬುದು ನಿಮಗೆ ಗೊತ್ತು ಇದು ಬೀಸುವ ಗಾಳಿಯಂತೆ ಅದು ಎಲ್ಲಿಂದ ಹೊಗುತ್ತದೆ. ಎಂಬುದನ್ನು ನೀವು ಹೇಳಲಾಗದು ಆದರೆ ಬೀಸುತ್ತಿರುವ ಸ್ಪರ್ಶವನ್ನು ನೀವು ಆತ್ಮದಿಂದ ಹುಟ್ಟಿದ ಪ್ರತಿಯೊಬ್ಬರೂ ಹಾಗೆಯೇ ನಕೋದೇಮನು ಇಂತಹ ವಿಷಯಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟಕರವೆಂದು ತಿಳಿದನು. ಯೇಸುವು ಈ ರೀತಿ ಕೇಳುವ ಮೂಲಕ ಅವನಿಗೆ ಸವಾಲು ಹಾಕಿದನು" ನಾನು ಭೂಲೋಕದಲ್ಲಿ ನಡೆಯುವ ಕಾರ್ಯಗಳನ್ನು ಕುರಿತು ನಿಮಗೆ ಹೇಳುವಾಗ ನೀವು ನಂಬದೆ ಹೋದರೆ ಪರಲೋಕದ ಕಾರ್ಯಗಳನ್ನು ಕುರಿತು ನಿಮಗೆ ಹೇಳಿದರೆ ಹೇಗೆ ನಂಬೀರಿ? (ಯೋಹಾನ 3-12).

ದೇವರ ರಾಜ್ಯದ  ಕುರಿತು ಆತನ ಬೋಧನೆಯಲ್ಲ" ಅರ್ಥಮಾಡಿಕೊಳ್ಳುವುದು ಮತ್ತು ನಂಬುವುದು" ಎಂಬ ಅಂತರವನ್ನು ಯೇಸುವು ನಿವಾರಿಸಬೇಕಿತ್ತು. ಪರಲೋಕ ರಾಜ್ಯದ ಗೂಢಾರ್ಥಗಳನ್ನು (ಗುಪ್ತವಾದ ಸತ್ಯ ರಹಸ್ಯ ವಿಷಯಗಳು, ಅಗೋಚರ ನೈಜ್ಯಸ್ಥಿತಿಗಳು) ಜನರು ಹೀಗೆ ಅರ್ಥಮಾಡಿಕೊಳ್ಳುವಂತೆ ಆತನು ಮಾಡಿದನು?

**ಮತ್ತಾಯ 13:10-17**
**10 ತರುವಾಯ ಆತನ ಶಿಷ್ಯರು ಬಂದು ಯಾಕೆ ಸಾಮ್ಯರಾಪವಾಗಿ ಅವರ ಸಂಗಡ ಮಾತಾಡುತ್ತೀ ಎಂದು ಕೇಳಿದರು**
**11 ಅದಕ್ಕಾತನು ಅವರಿಗೆ ಪರಲೋಕ ರಾಜ್ಯದ ಗುಟ್ಟುಗಳನ್ನು ತಿಳಿಯುವ ವರವು ನಿಮಗೇ ಕೊಟ್ಟದೇ ಅವರಿಗೆ ಕೊಟ್ಟಿಲ್ಲ**
**12 ಯಾಕೆಂದರೆ ಇದ್ದವನಿಗೆ ಕೊಡಲ್ಪಡುವುದು ಅವನಿಗೆ ಮತ್ತೂ ಹೆಚ್ಚಾಗುವುದು ಇಲ್ಲದವನ ಕಡೆಯಿಂದ ಇದ್ದದ್ದೂ ತೆಗೆಯಲ್ಪಡುವುದು**
**13 ನಾನು ಅವರ ಸಂಗಡ ಸಾಮನ್ಯರೂಪವಾಗಿ ಮಾತಾಡುವುದಕ್ಕೆ ಕಾರಣವೇನೆಂದರೆ ಅವರಿಗೆ ಕಣ್ಣಿದ್ದರೂ ನೋಡುವುದಿಲ್ಲ ಕಿವಿಯಿದ್ದರೂ ಕೇಳುವುದಿಲ್ಲ ಮತ್ತು ತಿಳುಕೊಳ್ಳುವದಿಲ್ಲ**
**14 ಯೇಶಾಯನು ಹೇಳಿದ ಪ್ರವಾದನೆಯು ಅವನಲ್ಲಿ ನೆರವೇರುತ್ತದೆ. ಅದೇನಂದರೆ ನೀವು ಕಿವಿಯಿದ್ದು ಕೇಳಿದರೂ ತಿಳುಕೊಳ್ಳುವದೇ ಇಲ್ಲ ಕಣ್ಣಿದ್ದು ನೋಡಿದರೂ ಕಾಣುವದೇ ಇಲ್ಲ**

**15 ಈ ಜನರ ಹೃದಯವು ಕೊಬ್ಬಿತು ಇವರ ಕಿವಿ ಮುಚ್ಚಿಕೊಂಡಿದ್ದಾರೆ. ತಾವು ಕಣ್ಣಿನಿಂದ ಕಂಡು ಕಿವಿಯಿಂದ ಕೇಳಿ ಹೃದಯದಿಂದ ತಿಳಿದು ನನ್ನ ಕಡೆಗೆ ತಿರುಗಿಕೊಂಡು ನನ್ನಿಂದ ಸ್ವಸ್ಥತೆಯನ್ನು ಹೇಗೂ ಹೊಂದಬಾರದೆಂದು ಮಾಡಿಕೊಂಡಿದ್ದಾರೆ ಎಂಬುದು**
**16ಆದರೆ ನಿಮ್ಮ ಕಣ್ಣು ಕಾಣುತ್ತವೆ. ನಿಮ್ಮ ಕಿವಿ ಕೇಳುತ್ತವೆ. ಆದದರಿಂದ ನೀವು ಧನ್ಯರು**
**17 ನಿಮಗೆ ಸತ್ಯವಾಗಿ ಹೇಳುತ್ತೇನೆ ನೀವು ನೋಡುತ್ತಿರುವ ಕಾರ್ಯಗಳನ್ನು ಬಹುಮಂದಿ ಪ್ರವಾದಿಗಳೂ ಸತ್ಪುರುಷರೂ ನೋಡಬೇಕೆಂದು ಅಪೇಕ್ಷಿಸಿದರೂ ನೋಡಲಿಲ್ಲ ನೀವು ಕೇಳುತ್ತಿರುವ ಸಂಗತಿಗಳನ್ನು ಅವರು ಕೇಳಬೇಕೆಂದು ಅಪೇಕ್ಷಿಸಿದರೂ ಕೇಳಲಿಲ್ಲ.**

“ನೋಡುವಂತಹ ಕಣ್ಣು ಮತ್ತು ಕೇಳುವಂತಹ ಕಿವಿಯಿಂದ” ಶಿಷ್ಯರುಗಳು ದೇವರಿಂದ ಕೃಪೆ ಹೊಂದಲ್ಪಟ್ಟಿದ್ದರು ಮತ್ತು ಆದ್ದರಿಂದ ದೇವರ ರಾಜ್ಯದ ರಹಾಸ್ಯಾರ್ಥಗಳನ್ನು ಅರ್ಥಮಾಡಿಕೊಂಡರು ಆದಾಗ್ಯೂ ಗುಂಪಿನಲ್ಲಿದ್ದ ಜನರ ಹೃದಯಗಳು ಮಂದವಾಗಿದ್ದವು. ಕಣ್ಣು ಕಾಣುತ್ತಿರಲಿಲ್ಲ ಮತ್ತು ಕಿವಿಗಳು ಕೇಳುತ್ತಿರಲಿಲ್ಲ. ಆದದರಿಂದ ಯೇಸುವು ಸಾಮ್ಯಗಳನ್ನು ದೈನಂದಿನ ಜೀವನದ ಕಥೆಗಳನ್ನು ದೇವರ ರಾಜ್ಯದ ಗೂಢಾರ್ಥಗಳನ್ನು ತಿಳಿಸಲು ಉಪಯೋಗಿಸಿದನು. ಸಾಮ್ಯಗಳ ನಮ್ಮ ಪ್ರಪಂಚದಿಂದ ಆತನ ಪ್ರಪಂಚದ ಕುರಿತು ನಮಗೆ ಬೋಧಿಸುವ ಕಥೆಗಳಾಗಿವೆ.

**ಮತ್ತಾಯ 13:34,35**
**34 ಯೇಸು ಈ ಮಾತುಗಳನ್ನೆಲ್ಲಾ ಜನರ ಗುಂಪುಗಳಿಗೆ ಸಾಮ್ಯರೂಪವಾಗಿ ಹೇಳಿದನು ಸಾಮ್ಯವಿಲ್ಲದೆ ಒಂದನ್ನೂ ಹೇಳಲಿಲ್ಲ.**
**35 ಹೀಗೆ ನಾನು ಬಾಯಿದೆರೆದು ಸಾಮ್ಯರೂಪವಾಗಿ ಉಪದೇಶಿಸುವೆನು ಲೋಕಾದಿಯಿಂದ ಮರೆಯಾಗಿದ್ದವುಗಳನ್ನು ಹೊರಪಡಿಸುವೆನು ಎಂದು ಒಬ್ಬ ಪ್ರವಾದಿಯ ಮುಖಾಂತರ ನುಡಿದ ಮಾತು ನೆರವೇರಿತು.**

ಲೋಕಾದಿಯಿಂದ ಮರೆಯಾಗಿದ್ದವುಗಳನ್ನು ಸಾಮ್ಯಗಳು ಪ್ರಕಟಿಸುತ್ತವೆ. ಸಾಮ್ಯಗಳು ಬಹಳ ಉತ್ತಮವಾದ ಕಥೆಗಳಿಗಿಂತ ಅಧಿಕವಾಗಿರುವುದಾಗಿದೆ. ಅಗೋಚರವಾದ ರಾಜ್ಯದ ತತ್ವಗಳನ್ನು ಅವು ನಮಗೆ ಪ್ರಕಟಿಸುತ್ತವೆ. ಇದು ಆತ್ಮೀಕ ದೇವರ ರಾಜ್ಯದ ಕುರಿತು ಕಲಿಯಲು ಮತ್ತು ಪ್ರಾಕೃತ ಇಹಲೋಕದ ಕ್ಷೇತ್ರದಲ್ಲಿ ಜೀವಿಸುವಾಗ ಅಂತಹ ತತ್ವಗಳನ್ನು ಅನ್ವಯಿಸಿಕೊಳ್ಳುವ ಅವಕಾಶವನ್ನು ಈಗ ನಾವು ಪಡೆಯುತ್ತೇವೆ.

ಹಿಂದನ ಭಾಗಗಳಲ್ಲಿ ಈಗಾಗಲೇ ಕೆಲವು ಸಾಮ್ಯಗಳನ್ನು ನಾವು ನೋಡಿದ್ದೇವೆ ಇಲ್ಲಿ ಕೆಲವು ಸಾಮ್ಯಗಳನ್ನು ಅವಲೋಕಿಸೋಣ. ಇವುಗಳಲ್ಲಿ ಅನೇಕ ಸಾಮ್ಯಗಳು ಸಾಮಾನಾಂತರವಾಗಿ ಮತ್ತಾಯ, ಮಾರ್ಕ ಮತ್ತು ಲೂಕನ ಸುವಾರ್ತೆಯಲ್ಲಿ ಕಾಣಿಸುತ್ತವೆ.

## ಬಿತ್ತುವವನು ಮತ್ತು ದೇವರ ರಾಜ್ಯದ ವಾಕ್ಯ

ಮತ್ತಾಯ 13:18-23

**18 ,19 ಬಿತ್ತುವವನ ವಿಷಯವಾದ ಸಾಮ್ಯದ ಅರ್ಥವನ್ನುಕೇಳಿರಿ. ಯಾವನಾದರೂ ಪರಲೋಕ ರಾಜ್ಯದ ವಾಕ್ಯವನ್ನು ಕೇಳಿ ತಿಳುಕೊಳ್ಳದೆ ಇರುವಲ್ಲಿ ಸೈತಾನನು ಬಂದು ಆ ಮನುಷ್ಯನ ಮನಸ್ಸಿನಲ್ಲಿ ಬಿತ್ತಿದ್ದನ್ನು ತೆಗೆದು ಹಾಕುತ್ತಾನೆ. ಆ ಮನುಷ್ಯನೇ ಬೀಜ ಬಿದ್ದ ದಾರೀ ಮಗ್ಗುಲಾಗಿರುವವನು**
**20 ಒಬ್ಬನು ವಾಕ್ಯವನ್ನು ಕೇಳಿದ ಕೂಡಲೇ ಸಂತೋಷದಿಂದ ಅದನ್ನು ಸ್ವೀಕರಿಸುತ್ತಾನೆ.**
**21 ತನಗೆ ಬೇರಿಲ್ಲದ ಕಾರಣ ಇವನು ಸ್ವಲ್ಪಕಾಲ ಮಾತ್ರವೇ ಇದ್ದು ಆ ವಾಕ್ಯದ ನಿಮಿತ್ತವಾಗಿ ಸಂಕಟವಾಗಲಿ ಹಿಂಸೆಯಾಗಲಿ ಬಂದರೆ ಬೇಗ ಎಡವಿ ಬೀಳುತ್ತಾನೆ. ಇವನೇ ಬೀಜ ಬಿದ್ದ ಬಂಡೆಯ ನೆಲವಾಗರುವವನು.**
**22 ಒಬ್ಬನು ವಾಕ್ಯವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಯೂ ಐಶ್ವರ್ಯದಿಂದುಂಟಾಗುವ ಮೋಸವು ಆ ವಾಕ್ಯವನ್ನು ಅಡಗಿಸಿಬಿಡುವುದರಿಂದ ಫಲವನ್ನು ಕೊಡದೆ ಇರುತ್ತಾನೆ ಇವನೇ ಮುಳ್ಳುಗಿಡಗಳಲ್ಲಿ ಬೀಜ ಬಿದ್ದ ನೆಲವಾಗಿರುವವನು.**
**23 ಒಬ್ಬನು ವಾಕ್ಯವನ್ನು ಕೇಳಿ ತಿಳುಕೊಂಡು ಫಲವಂತನಾಗಿ ನೂರರಷ್ಟಾಗಲಿ ಆರವತ್ತರಷ್ಟಾಗಲಿ ಮೂವತ್ತರಷ್ಟಾಗಲಿ ಫಲವನ್ನು ಕೊಡುತ್ತಾನೆ ಇವನೇ ಒಳ್ಳೆಯ ನೆಲವಾಗಿರುವವನು ಎಂದು ಹೇಳಿದನು.**

ಬಿತ್ತುವವನ ಸಾಮ್ಯವು ಒಂದು ಪ್ರಾರಂಭಿಕ ಸಾಮ್ಯಗಳಾಗಿವೆ. ನಾವು ಈ ಸಾಮ್ಯವನ್ನು ಅರ್ಥಮಾಡಿಕೊಂಡರೆ ಉಳಿದ ಇತರ ಎಲ್ಲಾ ಸಾಮ್ಯಗಳನ್ನು ಅರ್ಥಮಾಡಿಕೊಳ್ಳಬಹುದೆಂದು ಯೇಸುವು ಹೇಳಿದ್ದಾನೆ. ಈ ರೀತಿಯಾಗಿರುವಂತಹ ದೈನಂದಿನ ಸಾಮಾನ್ಯ ಜೀವಿತದಿಂದ ಆತ್ಮಿಕ ಸತ್ಯಗಳನ್ನು ನಾವು ಹೇಗೆ ಹೊರಹೊಮ್ಮಿಸುವುದನ್ನು ಕಲಿಯಬಹುದು. ಆ ಮೇಲೆ ಯೇಸುವು ಕೊಟ್ಟಂತಹ ಇತರೆ ಸಾಮ್ಯಗಳನ್ನು ನೆರವೇರಿಸಬಹುದು ದೇವರ ರಾಜ್ಯದ ವಾಕ್ಯವನ್ನು ಮಾತಾಡುವುದರಿಂದ ಆತನ ರಾಜ್ಯದಲ್ಲಿ ದೇವರು ಕಾರ್ಯಮಾಡುತ್ತಾನೆಂಬುದನ್ನು ಬಿತ್ತುವವನ ಸಾಮ್ಯವು ನಮಗೆ ಬೋಧಿಸುತ್ತದೆ. ಅರಸನಿಂದ ವಾಕ್ಯವು ಹೊರಡಿಸುವಾಗ ದೇವರ ರಾಜ್ಯದಲ್ಲಿನ ಪ್ರತಿಯೊಬ್ಬರ ಜೀವಿತದಲ್ಲಿ ಅದು ನೆರವೇರಿಸಲ್ಪಡಬೇಕೆಂದು ಸಂಕಲ್ಪ ಹೊಂದಿದೆ ದೇವರು ಮಾತಾನಾಡುವಂತಹ ವಾಕ್ಯವು ದೇವರ ರಾಜ್ಯದ ವಾಕ್ಯವಾಗಿದೆ ನಮ್ಮ ಜೀವಿತದಲ್ಲಿ ಉತ್ಪಾದಿಸುವುದಕ್ಕಾಗಿ ರಚಿಸಲ್ಪಟ್ಟ ಬೀಜದಂತಿದೆ. ಇದು ಸಂಪೂರ್ಣ ಸಂಭವನೀಯ ಮತ್ತು ದೇವರ ಸೃಜನಶೀಲ ಬಲದ ಸಂಪೂರ್ಣತೆಯಾಗಿರುತ್ತದೆ. ಒಬ್ಬರ ಜೀವಿತವು ನಿತ್ಯವು ನೆಲಸುವಂತಹ ಅವಿನಾಶವಾದ ಬೀಜದಂತೆ ದೇವರ ವಾಕ್ಯದ ಬೀಜದಲ್ಲಿ ಯಾವುದೇ ತಪ್ಪುಗಳಿಲ್ಲ (1 ಪೇತ್ರನು 1:23) ದೇವರು ವಾಕ್ಯವನ್ನು ಬಿಡುಗಡೆಗೊಳಿಸುವಾಗ, ಅದು ನಮ್ಮ ಜೀವತದಲ್ಲಿ ಫಲಭರಿತವಾಗಲೂ ಮತ್ತು ನಮ್ಮ ಹೃದಯಗಳಲ್ಲಿ ಆಳವಾಗಿ ಬೇರೂರಲೂ ಸಂಕಲ್ಪ ಹೊಂದಿರುತ್ತದೆ. ಆದರೂ ವೈರಿಗಳು ಸೈತಾನ ಮತ್ತು ಅವನ ದುರಾತ್ಮಗಳು ವಾಕ್ಯವನ್ನು ಕದ್ದುಕೊಳ್ಳಲೂ ಪ್ರಯತ್ನಿಸುವವರು ಇದ್ದಾರೆ, ನಾವು ಅವಕಾಶ ನೀಡಿದರೆ ಅವರು ಕದಿಯುತ್ತಾರೆ. ನಮ್ಮ ಜೀವಿತದಲ್ಲಿ ದೇವರ ವಾಕ್ಯವು ನೆರವೇರುವುದನ್ನು ತಡೆಯುವಂತಹ ಇತರೆ ಸಂಗತಿಗಳಿವೆ- ಅವು ಪ್ರಪಂಚದ ನಿಮಿತ್ತದ ಹಿಂಸೆಗಳು ಮತ್ತು ತೊಂದರೆ ನೋವುಗಳಾಗಿವೆ. ಹಾಗೆಯೇ, ನಮ್ಮ ಹೃದಯಗಳು

ಇತರ ವಿಷಯಗಳಿಗೆ ದುರಾಸೆ ಹೊಂದಿದ್ದರೆ, ಈ ಪ್ರಪಂಚದ ವ್ಯವಹಾರಗಳಿಂದ ಅತಿಯಾದ ಹೊರೆಯಾಗಿದ್ದರೆ ಅಥವಾ ಸಂಪತ್ತಿನ ಮೋಸದಿಂದ ದೂರವಾಗಿ ಸೆಳೆಯಲ್ಪಟ್ಟಿದ್ದರೆ, ದೇವರ ವಾಕ್ಯವು ನಮ್ಮಲ್ಲಿ ಫಲಭರಿತ ಕಾರ್ಯ ಮಾಡಲು ಸಾಧ್ಯವಾಗುವುದಿಲ್ಲ ಆದ್ದರಿಂದ ನಮ್ಮ ಜೀವಿತದಲ್ಲಿ ಅರಸನ ವಾಕ್ಯಗಳು ಫಲನೀಡುವುದನ್ನು ಖಾತರಿಪಡಿಸಿಕೊಳ್ಳಲು, ನಮ್ಮ ಹೃದಯದಲ್ಲಿ ಮಣ್ಣಿನ ಸಾರಸ್ಥಿತಿ ಪಾಲಿಸಬೇಕು ಮತ್ತು ನಮ್ಮ ಹೃದಯಗಳನ್ನು ಕಾಯ್ದುಕೊಳ್ಳುವ ಜವಬ್ದಾರಿಯು ನಮ್ಮ ಮೇಲಿರುತ್ತದೆ ಆತನ ವಾಕ್ಯದಿಂದ ನಮ್ಮಲ್ಲಿ ದೇವರು ಕಾರ್ಯ ಮಾಡುವಂತಹ ದೇವರ ರಾಜ್ಯದ ತತ್ವಗಳಿಂದ ಜೀವಿಸಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. ನಾವು ಆತನ ವಾಕ್ಯವನ್ನು ಪೋಷಿಸಿದರೆ, ನಮ್ಮ ಜೀವಿತದಲ್ಲಿ ಆತನ ವಾಕ್ಯವು ನೆರವೇರುವ ಲಾಭದಲ್ಲಿ ನಿಲ್ಲುತ್ತೇವೆ.

## ಉತ್ತಮ ಬೀಜಗಳು ಮತ್ತು ಹಣಜಿಗಳು

**ಮತ್ತಾಯ 13:24-30:36-43**
**24 ಆತನು ಮತ್ತೊಂದು ಸಾಮ್ಯವನ್ನು ಅವರಿಗೆ ಹೇಳಿದನು. ಅದೇನಂದರೆ ಪರಲೋಕ ರಾಜ್ಯವು ಒಳ್ಳೆಯ ಬೀಜವನ್ನು ಹೊಲದಲ್ಲಿ ಬಿತ್ತಿದ ಒಬ್ಬ ಮನುಷ್ಯನಿಗೆ ಹೋಲಿಕೆಯಾಗಿದೆ.**
**25 ಆದರೆ ಜನರು ನಿದ್ರೆ ಮಾಡುವ ಕಾಲದಲ್ಲಿ ಅವನ ವೈರಿಯು ಬಂದು ಗೋಧಿಯ ನಡುವ ಹಣಜಿ ಬಿತ್ತಿ ಹೋದನು.**
**26 ಗೋಧಿಯು ಬೆಳೆದು ಫಲಕ್ಕೆ ಬಂದಾಗ ಹಣಜಿ ಸಹ ಕಾಣಬಂತು**
**27 ಆಗ ಯಜಮಾನನ ಆಳುಗಳು ಅವನ ಬಳಿಗೆ ಬಂದು ಅಯ್ಯಾ ನೀನು ನಿನ್ನ ಹೊಲದಲ್ಲಿ ಒಳ್ಳೆಯ ಬೀಜ ಬಿತ್ತಿದಿಯಲ್ಲಾ ಹಣಜಿ ಎಲ್ಲಿಂದ ಬಂತು ಎಂದು ಕೇಳಲು**
**28 ಅವನು ಇದು ಒಬ್ಬ ವೈರಿ ಮಾಡಿದ ಕೆಲಸ ಅನ್ನಲಾಗಿ ಆಳುಗಳು ಅವನನ್ನು ಹಾಗಾದರೆ ನಾವು ಅದನ್ನು ಆರಿಸಿ ತೆಗೆಯೋಣೋ ಎಂದು ಕೇಳಲು**
**29 ಅವನು ಬೇಡ ಹಣಜಿಯನ್ನು ಆರಿಸಿ ತೆಗೆಯುವಾಗ ಅದರ ಸಂಗಡ ಗೋಧಿಯನ್ನೆಲ್ಲಾದರೂ ಕಿತ್ತೀರಿ,**
**30 ಸುಗ್ಗಿ ಕಾಲದ ತನಕ ಎರಡೂ ಕೂಡ ಬೆಳೆಯಲಿ ಸುಗ್ಗಿ ಕಾಲದಲ್ಲಿ ನಾನು ಕೊಯ್ಯುವವರಿಗೆ – ಮೊದಲು ಹಣಜಿಯನ್ನು ಆರಿಸಿ ತೆಗೆದು ಅದನ್ನು ಸುಡುವುದಕ್ಕೆ ಹೊರೆಕಟ್ಟಿ ಹಾಕಿ ಗೋಧಿಯನ್ನು ತನ್ನ ಕಣಜದಲ್ಲಿ ತುಂಬಿರಿ ಎಂದು ಹೇಳುವೆನು.**
**36 ಆಗ ಯೇಸು ಜನರನ್ನು ಬಿಟ್ಟು ಮನೆಗೆ ಹೋದ ಮೇಲೆ ಆತನ ಶಿಷ್ಯರು ಬಂದು ಹೊಲದಲ್ಲಿಯು ಹಣಜಿಯ ಸಾಮ್ಯದ ಅರ್ಥವನ್ನು ನಮಗೆ ಹೇಳು ಅಂದರು**
**37 ಅದಕ್ಕಾತನು ಒಳ್ಳೆಯ ಬೀಜವನ್ನು ಬಿತ್ತುವವನಂದರೆ ಮನುಷ್ಯಕುಮಾರನು**
**38 ಹೊಲವೆಂದರೆ ಈಲೋಕ ಒಳ್ಳೆಯ ಬೀಜವೆಂದರೆ ಪರಲೋಕ ರಾಜ್ಯದವರು, ಹಣಜಿ ಅಂದರೆ ಸೈತಾನನನು**
**39 ಅದನ್ನು ಬಿತ್ತುವ ವೈರಿ ಅಂದರೆ ಸೈತಾನನು ಸುಗ್ಗಿಕಾಲ ಅಂದರೆ ಯುಗದ ಸಮಾಪ್ತಿ ಕೊಯ್ಯುವವರು ಅಂದರೆ ದೇವದೂತರು**
**40ಹೀಗಿರಲಾಗಿ ಹೇಗೆ ಹಣಜಿಯನ್ನು ಆರಿಸಿತೆಗೆದು ಸುಟ್ಟು ಬಿಡುತ್ತಾರೋ ಹಾಗೆಯೇ ಯುಗದ ಸಮಾಪ್ತಿಯಲ್ಲಿ ನಡೆಯುವದು**
**41 ಮನುಷ್ಯ ಕುಮಾರನು ತನ್ನ ದೂತರನ್ನು ಕಳುಹಿಸುವನು ಅವನು ಆತನ ರಾಜ್ಯದೊಳಗಿಂದ ಎಲ್ಲಾ ಕಂಟಕರನ್ನು**
**42 ಅಧರ್ಮಿಗಳನ್ನು ಕೂಡಿಸಿ ಬೆಂಕಿಕೊಂಡದಲ್ಲಿ ಹಾಕುವರು ಅಲ್ಲಿ ಗೋಳಾಟವು ಕಟಕಟನೆ ಹಲ್ಲು ಕಡಿಯೋಣವೂ ಇರುವವು.**

**43 ಆಗ ನೀತಿವಂತರು ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು ಕಿವಿಯುಳ್ಳುವನು ಕೇಳಲಿ ಅಂದನು.**

ಇಂದಿನ ಪ್ರಪಂಚದಲ್ಲಿ ಮನುಷ್ಯಕುಮಾರ, ಕರ್ತನಾದ ಯೇಸುವು ಒಳ್ಳೆಯ ಬೀಜವನ್ನು ಬಿತ್ತುತ್ತಿದ್ದಾನೆ. ನೀವು ಮತ್ತು ನಾನು, ವಿಶ್ವಾಸಿಗಳು, ಒಳ್ಳೆಯ ಬೀಜಗಳಾಗಿದ್ದೇವೆ. ನಾವು ದೇವರ ರಾಜ್ಯದ ಪುತ್ರರು ಆಗಿದ್ದೇವೆ. ಆದದರಿಂದ ಕರ್ತನಾದ ಯೇಸುವು ನಮ್ಮನ್ನು ಉದ್ದೇಶಪೂರ್ವಕವಾಗಿ "ಬಿತ್ತಿದ" ಸ್ಥಳವು ಪುಸಕ್ತವಾಗಿ ಪ್ರಪಂಚದಲ್ಲಿನ ನಮ್ಮ ಸ್ಥಳ ಎಂಬುದಾಗಿ ತಿಳಿಯಬೇಕು. ನಮ್ಮ ಸುತ್ತಲೂ ದುಷ್ಟನ ಕೆಟ್ಟ ಬೀಜಗಳನ್ನು ಬಿತ್ತುತ್ತಾನೆ ಎಂಬುದನ್ನು ಉತ್ತವಾಗಿ ತಿಳಿದು ದೇವರ ರಾಜ್ಯದಲ್ಲಿ ಪುತ್ರರಂತೆ ನಾವಿರುವಂತಹ ಸ್ಥಳದಲ್ಲಿಯೇ ಆತನು ಇರಿಸಿದ್ದಾನೆ. ಆದರೂ ನಮ್ಮೊಳಗೆ ದೇವರ ರಾಜ್ಯವು ಚಾಲ್ತಿಯಲ್ಲಿರುವುದಾಗಿದೆ. ಪ್ರಪಂಚಕ್ಕೆ ಅರಸನ ದೊರೆತನವನ್ನು ಬಿಡುಗಡೆ ಮಾಡಲೂ ನಾವು ಇಲ್ಲಿದ್ದೇವೆ ಮತ್ತು ಈ ಲೋಕದಲ್ಲಿ ಸೈತಾನನು ಹಣಜಿಯ ಮೂಲಕವಾಗಿ ಸಾಧಿಸಬೇಕೆಂಬುದಾಗಿ ಹುಡುಕುವಂತಹವೆಲ್ಲವನ್ನು ಗೆದ್ದು ಜಯಶಾಲಿಯಾಗುತ್ತೇವೆ.

ಇಂದು ನೀವು ಇರುವ ಸ್ಥಿತಿಯ ಕುರಿತು ಗೊಣಗದೆ ಮತ್ತು ದೂರು ಹೇಳದೆ, ನೀವು ಒಳ್ಳೆಯ ಬೀಜವಾಗಿರುವಂತೆ ಕರ್ತನಾದ ಯೇಸು ಸಂಕಲ್ಪಸಿದ ಸ್ಥಳದಲ್ಲಿ, ಆತನ ರಾಜ್ಯದ ಪುತ್ರರು ಮತ್ತು ಪುತ್ರಿಯರು ಆಗಿರುವಂತಹ ರೀತಿಯಲ್ಲಿ ನೋಡಿಕೊಳ್ಳಿರಿ. ಅಲ್ಲಿ ಬಲವಾಗಿ ನಿಂತುಕೊಳ್ಳಿರಿ! ಯುಗದ ಸಮಾಪ್ತಿಯಲ್ಲಿ ಖಂಡಿತವಾಗಿಯು ದೇವದೂತರು ಸ್ವಚ್ಛಗೊಳಿಸುವ ಕಾರ್ಯ ಮಾಡುತ್ತಾರೆ ಮತ್ತು ನೀತಿವಂತನು ನಿರಂತರವಾಗಿ ಹೊಳೆಯುವನು.

# ಎಳೆಯುವ ಬಲೆ

**ಮತ್ತಾಯ 13:47-50**
**47 ಮತ್ತು ಪರಲೋಕ ರಾಜ್ಯವು ಒಂದು ಬಲೆಗೆ ಹೋಲಿಕೆಯಾಗಿದೆ ಅದನ್ನು ಸಮುದ್ರದಲ್ಲಿ ಹಾಕಿ ಎಲ್ಲಾ ಜಾತಿಯ ಮೀನುಗಳನ್ನು ಹಿಡಿದರು.**
**48 ಅದು ತುಂಬಿದ ಮೇಲೆ ಅದನ್ನು ದಡಕ್ಕೆ ಎಳೆದು ಕೂತುಕೊಂಡು ಒಳ್ಳೆಯ ಮೀನುಗಳನ್ನು ಪುಟ್ಟಿಗಳಲ್ಲಿ ತುಂಬಿಕೊಂಡು ಕೆಟ್ಟ ಮೀನುಗಳನ್ನು ಬಿಸಾಟುಬಿಟ್ಟರು.**
**49 ಹಾಗೆಯೇ ಯುಗದ ಸಮಾಪ್ತಿಯಲ್ಲಿ ಆಗುವದು ದೇವದೂತರು ಹೊರಟು ಬಂದು ನೀತಿವಂತರೊಳಗಿಂದ ಕೆಟ್ಟವರನ್ನು ಬೇರೆಮಾಡಿ ಅವರನ್ನು ಬೆಂಕಿ ಕೊಂಡದಲ್ಲಿ ಹಾಕುವರು**
**50 ಅಲ್ಲಿ ಗೋಳಾಟವು ಕಟಕಟನೆ ಹಲ್ಲು ಕಡಿಯೋಣವೂ ಇರುವವು.**

ಮೀನುಗಾರರು ಅವರು ಹಿಡಿದ ಮೀನುಗಳನ್ನು ಬೇರೆ ಮಾಡುವುದನ್ನು ಯುಗದ ಸಮಾಪ್ತಿಯನ್ನು ವರ್ಣಿಸಲು ಮತ್ತು ನ್ಯಾಯವಂತವನಿಂದ ದುಷ್ಟನನ್ನು ಬೇರ್ಪಡಿಸುವುದರಿಂದ ಪರಿಚಿತ ದೃಶ್ಯವನ್ನು ಯೇಸು ಉಪಯೋಗಿಸಿದನು.

# ದೇವರ ರಾಜ್ಯದ ವ್ಯಾಪಕ ಸ್ವಭಾವ

**ಮತ್ತಾಯ 13:31-33**
**31ಆತನು ಮತ್ತೊಂದು ಸಾಮ್ಯವನ್ನು ಅವರಿಗೆ ಹೇಳಿದನು ಅದೇನಂದರೆ ಪರಲೋಕ ರಾಜ್ಯವು ಸಾಸಿವೆ ಕಾಳಿಗೆ ಹೋಲಿಕೆಯಾಗಿದೆ. ಒಬ್ಬ ಮನುಷ್ಯನು ಅದನ್ನು ತೆಗೆದುಕೊಂಡು ಹೋಗೆ ತನ್ನ ಹೊಲದಲ್ಲಿ ಬಿತ್ತಿದನು**
**32 ಅದು ಎಲ್ಲಾ ಬೀಜಗಳಿಗಿಂತಲೂ ಸಣ್ಣದಾಗಿದೆ ಬೆಳೆದ ಮೇಲೆ ಕಾಯಿಪಲ್ಯದ ಗಿಡಗಳಿಗಿಂತ ದೊಡ್ಡದಾಗಿ ಮರವಾಗುತ್ತದೆ. ಆಕಾಶದಲ್ಲಿ ಹಾರಾಡುವ ಪಕ್ಷಿಗಳು ಒಂದು ಅದರ ಕೊಂಬೆಗಳಲ್ಲಿ ವಾಸಮಾಡುತ್ತವೆ.**
**33 ಮತ್ತೊಂದು ಸಾಮ್ಯವನ್ನು ಅವರಿಗೆ ಹೇಳಿದನು ಅದೇನಂದರೆ ಪರಲೋಕ ರಾಜ್ಯವು ಹುಳಿ ಹಿಟ್ಟಿಗೆ ಹೋಲಿಕೆಯಾಗಿದೆ. ಅದನ್ನು ಒಬ್ಬ ಹೆಂಗಸು ತಕ್ಕೊಂಡು ಮೂರು ಸೇರು ಹಿಟ್ಟಿನಲ್ಲಿ ಕಲಿಸಿಡಲು ಆ ಹಿಟ್ಟೆಲ್ಲಾ ಹುಳಿಯಾಯಿತು.**

ಕರ್ತನಾದ ಯೇಸುವು ಪರಲೋಕ ರಾಜ್ಯವನ್ನು ಸಾಸಿವೆ ಕಾಳು ಮತ್ತು ಹುಳಿಹಿಟ್ಟಿನಂತೆ ಹೋಲಿಸಿದ್ದಾನೆ. ಈ ಎರಡು ಸಾಮ್ಯಗಳಿಂದ ನಾವು ಪಡೆಯುವ ತಿಳುವಳಿಕೆಯು ದೇವರ ರಾಜ್ಯದ ವ್ಯಾಪಕ ಸ್ವಭಾವದ ಕುರಿತಾಗಿದೆ. ದೇವರ ರಾಜ್ಯವು ಒಂದು ಸ್ಥಳವನ್ನು, ಪರಿಸರವನ್ನು ಅಥವಾ ಒಂದು ಸಣ್ಣದಾಗಿ ಪ್ರದೇಶವನ್ನು, ನಿರ್ಭಯ ರೀತಿಯಲ್ಲಿ ಪ್ರವೇಶಿಸಿದಾಗ ಇದರ ಸಂಪೂರ್ಣ ಪರಿಸರವನ್ನು ಹರಡುವ ಮತ್ತು ಪ್ರಭಾವ ಬೀರುವ ಪ್ರಬಲ ಶಕ್ತಿಯಾಗಿ ಕಂಡು ಬರುತ್ತದೆ. ದೇವರ ರಾಜ್ಯವು ನಿಮ್ಮಲ್ಲಿಯು ಮತ್ತು ನನ್ನಲ್ಲಿಯೂ ಇದೆ. ದೇವರ ರಾಜ್ಯವು ನಿಮ್ಮಲ್ಲಿಯು ಮತ್ತು ನನ್ನಲ್ಲಿಯೂ ಇದೆ. ದೇವರ ರಾಜ್ಯವು-ಸಾಸಿವೆ ಕಾಳು, ಹುಳಿಹಿಟ್ಟು-ನಮ್ಮೊಳಗೆ ಇದೆ. ವಾಸ್ತವವಾಗಿ ನಮ್ಮ ಪ್ರಸ್ತುತ ಪ್ರಪಂಚದಲ್ಲಿ ನಾವು ದೇವರ ರಾಜ್ಯವಾಗಿದ್ದೇವೆ. ನಾವು ಹೋಗುವಲೆಲ್ಲಾ ನಮ್ಮೊಳಗೆ ಮತ್ತು ನಮ್ಮ ಮೂಲಕವಾಗಿರುವ ದೇವರ ರಾಜ್ಯವು ನಮ್ಮ ಸುತ್ತಲಿನ ಪರಿಸರದಲ್ಲಿ ವ್ಯಾಪಕವಾದ ಶಕ್ತಿಯಾಗಿ ಕಂಡುಬರುತ್ತದೆ. ನಮ್ಮ ಮನೆಗಳಾಗಿರಬಹುದು, ನಾವು ವಾಸಿಸುವ ಸಮೂದಾಯ, ಶಾಲೆಗಳು,

ಕಾಲೇಜುಗಳು, ಕೆಲಸದ ಸ್ಥಳಗಳು, ನಗರಗಳು ಅಥವಾ ದೇಶಗಳು- ನಮ್ಮ ಪ್ರಪಂಚದಲ್ಲಿ ಆತನ ರಾಜ್ಯವು ನಮ್ಮ ಮೂಲಕವಾಗಿ ಬಿಡುಗಡೆಗೊಂಡು ವ್ಯಾಪಿಸುವ ಪ್ರಬಲ ಶಕ್ತಿಯಾಗಬೇಕೆಂಬುದು ದೇವರ ಯೋಜನೆಯಾಗಿದೆ. ವಿಶ್ವಾಸಿಗಳಾಗಿ, ಧೈರ್ಯವಾಗಿರೋಣ ಮತ್ತು ಸಮಾಜದ ಸಪ್ತಸ್ವರಗಳಾದ- ಕಲೆ ಮತ್ತು ಮನರಂಜನೆ, ಮಾಧ್ಯಮ, ಧರ್ಮ ಕುಟುಂಬ, ಸರ್ಕಾರ, ವ್ಯಾಪಾರ ಮತ್ತು ವಿದ್ಯಾಭ್ಯಾಸದ ಕ್ಷೇತ್ರಕ್ಕೆ ಹೆಜ್ಜೆಯನ್ನಿಡೋಣ ಮತ್ತು ನಮ್ಮಲ್ಲಿರುವ ದೇವರ ರಾಜ್ಯವು ಈ ಸ್ತರಗಳನ್ನು ಪ್ರವೇಶಿಸಲಿ ಮತ್ತು ಭೇದಿಸಲಿ!

## ದೇವರ ರಾಜ್ಯದ ಮೌಲ್ಯ

**ಮತ್ತಾಯ13:44-46**
**44 ಪರಲೋಕ ರಾಜ್ಯವು ಹೊಲದಲ್ಲಿ ಹೂಳಿಟ್ಟ ದ್ರವ್ಯಕ್ಕೆ ಹೋಲಿಕೆಯಾಗಿದೆ ಒಬ್ಬನು ಅದನ್ನು ಕಂಡುಕೊಂಡು ಮುಚ್ಚಿಬಿಟ್ಟು ಅದರಿಂದಾದ ಸಂತೋಷದಿಂದ ತನ್ನ ಬದುಕನ್ನೆಲ್ಲಾ ಮಾರಿ ಆ ಹೊಲವನ್ನು ಕೊಂಡುಕೊಂಡನು**
**45 ಮತ್ತು ಪರೋಕ ರಾಜ್ಯವು ಉತ್ತಮವಾದ ಮುತ್ತುಗಳನ್ನು ಹುಡುಕುವ ವ್ಯಾಪಾರಸ್ಥನಿಗೆ ಹೋಲಿಕೆಯಾಗಿದೆ**
**46 ಅವನು ಬಹು ಬೆಲೆಯುಳ್ಳ ಒಂದು ಮುತ್ತನ್ನು ಕಂಡು ತನ್ನ ಬದುಕನ್ನೆಲ್ಲಾ ಮಾರಿ ಬಂದು ಅದನ್ನು ಕೊಂಡುಕೊಂಡನು.**

ನಾವು ದೇವರ ರಾಜ್ಯವನ್ನು ಎಷ್ಟು ಮೌಲ್ಯದಿಂದ ನೋಡುತ್ತೇವೆ ? ದೇವರ ರಾಜ್ಯವು ನಮಗೆ ಹೇಗೆ ಪ್ರಾಮುಖ್ಯವಾಗಿದೆ? ಇದು ಬರೀ ದೈವಶಾಸ್ತ್ರದ ವಿಚಾರ, ಪ್ರಸಂಗಿಸಲೂ ಒಂದು ಉತ್ತಮವಾದ ಸಂದೇಶಗಳ ಒಂದು ಭಾಗ ಮತ್ತು ಇದರ ಕುರಿತು ಪುಸ್ತಕಗಳನ್ನು ಬರೆಯುದಾಗಿದೆಯಾ? ಬಹು ಬೆಲೆಯುಳ್ಳ ಸಾಮ್ಯ ಮತ್ತು ಹೊಲದಲ್ಲಿ ಹೂಳ್ಳಿಟ್ಟ ದ್ರವ್ಯದ ಸಾಮ್ಯಗಳನ್ನು ನಮಗೆ ಕೊಡುವುದರಿಂದ ದೇವರ ರಾಜ್ಯದ ಕಡೆಗೆ ನಮ್ಮಿಂದ ಆತನು ಅಪೇಕ್ಷಿಸುವ ನಮ್ಮ ವರ್ತನೆಗಳನ್ನು ಯೇಸು ವರ್ಣಿಸುತ್ತಾನೆ. ದೇವರ ರಾಜ್ಯವು ನಮ್ಮೆಲ್ಲರಲ್ಲೂ ಇರಬೇಕು-ನಾವು ಹೊಂದಿರುವ ಎಲ್ಲದರೊಂದಿಗೆ ನಾವು ಅನುಸರಿಸಿ ಹೋಗಬೇಕು, ಅದರ ಕುರಿತು ಎಲ್ಲಾವನ್ನು ಸತ್ಯವಾಗಿ ನಾವು ಅನುಭವಿಸುವಂತದ್ದು ಅಡಗಿರುವ ತತ್ವವಾಗಿದೆ. ಇದು ನಮ್ಮ "ಬಹು ಬೆಲೆಯುಳ್ಳ ಒಂದು ಮುತ್ತು" ಆಗಿದೆ. ಇದು "ಹೊಲದಲ್ಲಿ ಹೂಳಿಟ್ಟ ದ್ರವ್ಯವಾಗಿದೆ", ನಾವು ಹೊಂದಿರುವಂತದ್ದೆಲ್ಲರೊಡನೆ- ನಮ್ಮಲ್ಲಿ ನಮ್ಮ ಮೂಲಕವಾಗಿ ಆತನ ಆಳ್ವಿಕೆ ಮತ್ತು ರಾಜ್ಯಭಾರ- ದೇವರ ರಾಜ್ಯವನ್ನು ನಾವು ಅನುಸರಿಸಿ ಹೋಗುವವರಾಗಿದ್ದೇವೆ. ಕಡಿಮೆಯಾದದು, ಸ್ವೀಕಾರಾರ್ಥವಲ್ಲ.

## ದೇವರ ರಾಜ್ಯದ ಉಪದೇಶಗಳು

**ಮತ್ತಾಯ 13:51-53**
**51 ಈ ಎಲ್ಲಾ ಮಾತುಗಳ ಅರ್ಥವು ನಿಮಗೆ ತಿಳಿಯಿತೋ ಎಂದು ಕೇಳು ಅವರು ತಿಳಿಯಿತು ಅಂದರು**
**52 ಆಗ ಆತನು ಅವರಿಗೆ-ಹೀಗಿರಲಾಗಿ ಪರಲೋಕ ರಾಜ್ಯದ ವಿಷಯವಾಗಿ ಉಪದೇಶ ಹೊಂದಿ ಶಿಕ್ಷಿತನಾದ ಪ್ರತಿಯೊಬ್ಬ ಶಾಸ್ತ್ರೋಪದೇಶಕನು ಮನೆ ಯಜಮಾನನಿಗೆ ಹೋಲಿಕೆಯಾಗಿದ್ದಾನೆ. ಅವನು ತನ್ನ ಬೊಕ್ಕಸದೊಳಗಿಂದ ಹೊಸ ವಸ್ತುಗಳನ್ನೂ ಹಳೇ ವಸ್ತುಗಳನ್ನೂ ಹೊರಗೆ ತರುತ್ತಿರುವನು ಎಂದು ಹೇಳಿದನು**
**53 ಯೇಸು ಈ ಸಾಮ್ಯಗಳನ್ನು ಮುಗಿಸಿದ ಮೇಲೆ ಅಲ್ಲಿಂದ ಹೊರಟುಹೋದನು.**

ದೇವರ ರಾಜ್ಯದ ಉಪದೇಶಗಳು ಹೊಸ ಮತ್ತು ಹಳೇ ವಸ್ತುಗಳೆರಡನ್ನು ಹೊಂದಿವೆ. ಮಾತನಾಡಿದ ವಿಷಯಗಳು- "ಹಳೆಯ" ವಿಷಯಗಳು ಇವೆ. ದೇವರು ಈಗ ಮಾತನಾಡುತ್ತಿರುವ ವಿಷಯಗಳು- "ಹೊಸ" ವಿಷಯಗಳು ಇವೆ. ಇವೆರಡಕ್ಕೂ ಜಾಗರೂಕ ಗಮನವನ್ನು ಕೊಡುವಂತಹ ತೆರೆದ ಹೃದಯದೊಡನೆ ಹೊಸ ಮತ್ತು ಹಳೇ ವಸ್ತುಗಳೆರಡನ್ನು ಪಡೆದುಕೊಳ್ಳಲು ಕಲಿಯುವುದು ಬಹಳ ಪ್ರಾಮುಖ್ಯವಾಗಿದೆ. ನಮಗೆ

ಹಳೆಯದರ ಅವಶ್ಯವಿದೆ ಆದ್ದರಿಂದ ಹೊಸದನ್ನು ನಾವು ಸರಿಯಾಗಿ ಅರ್ಥ ವಿವರಣೆ ನೀಡಬೇಕು ಯಾಕೆಂದರೆ ಹೊಸದು ಹಳೇಯ ಸನ್ನಿವೇಶದಲ್ಲಿ ಕೊಡಲ್ಪಟ್ಟಿದೆ. ಬರೀ ಹಳೇಯದರಲ್ಲೇ ನಾವು ಜೀವಿಸಲು ಆಗುವುದಿಲ್ಲ. ಯಾಕೆಂದರೆ ಪ್ರಸ್ತುತದಲ್ಲಿ ದೇವರು ಮಾಡುತ್ತಿರುವವುಗಳನ್ನು ಸರಿಯಾಗಿ ನಮ್ಮನ್ನು ಸ್ಥಾನದಲ್ಲಿರಿಸಿಕೊಂಡು ಮತ್ತು ಆತನೊಡನೆ ಈಗ ಹೆಜ್ಜೆಯನ್ನಿಡಬಹುದು. ದೇವರ ರಾಜ್ಯದ ಉಪದೇಶಗಳನ್ನು ಪಡೆದುಕೊಳ್ಳುವ ಕ್ರಮದಲ್ಲಿ ನಾವು ಹಳೇ ಮತ್ತು ಹೊಸದೆರೆಡನ್ನು ಪಡೆಯಲು ಚಿತ್ತವುಳ್ಳವರಾಗಿರಬೇಕು.

## ಪ್ರಸ್ತುತ ಮನವಾರ್ತೆಯತನ ಮತ್ತು ಭವಿಷ್ಯ ಅಧಿಕಾರ

**ಲೂಕ 19:11-27**
**11 ಅವರು ಈ ಮಾತುಗಳನ್ನು ಕೇಳುತ್ತಿರಲಾಗಿ ಯೇಸು ತಾನು ಯೆರೂಸಲೇಮಿಗೆ ಸಮೀಪವಾಗಿದ್ದರಿಂದಲೂ ದೇವರ ರಾಜ್ಯವು ಕೂಡಲೇ ಪ್ರತ್ಯಕ್ಷವಾಗುವ ಹಾಗಿದೆ ಎಂದು ಅವರು ಭಾವಿಸಿದ್ದರಿಂದಲೂ ಇನ್ನೂ ಒಂದು ಸಾಮ್ಯವನ್ನೂ ಹೇಳಿದನು.**
**12 ಅದೇನಂದರೆ ಶ್ರೀಮಂತನಾದ ಒಬ್ಬನೊಬ್ಬ ಮನುಷ್ಯನು ರಾಜ್ಯಾಧಿಕಾರವನ್ನು ಪಡೆದುಕೊಂಡು ಹಿಂತಿರುಗಿ ಬರಬೇಕೆಂದು ದೂರದೇಶಕ್ಕೆ ಹೊರಟನು**
**13ಹೊರಡುವಾಗ ತನ್ನ ಆಳುಗಳಲ್ಲಿ ಹತ್ತು ಮಂದಿಯನ್ನು ಕರೆದು ಅವರಿಗೆ ಹತ್ತು ಮೊಹರಿಗಳನ್ನು ಕೊಟ್ಟು ನಾನು ಬರುವತನಕ ವ್ಯಾಪಾರಮಾಡಿಕೊಂಡಿರ್ರಿ ಎಂದು ಹೇಳಿ ಹೋದನು**
**14 ಆದರೆ ಅವನ ಪಟ್ಟಣದ ನಿವಾಸಿಗಳು ಅವನನ್ನು ದ್ವೇಷಿಸಿ ಅವನ ಹಿಂದೆ ರಾಯಭಾರಿಗಳನ್ನು ಕಳುಹಿಸಿ ಇವನು ನಮ್ಮ ಮೇಲೆ ದೊರತನಮಾಡುವದು ನಮಗೆ ಇಷ್ಟವಿಲ್ಲ ಎಂದು ಹೇಳಿಸಿದರು.**
**15 ಆ ಮೇಲೆ ಅವನು ರಾಜ್ಯಾಧಿಕಾರವನ್ನು ಪಡಕೊಂಡು ಹಿಂತಿರುಗಿ ಬಂದು ತಾನು ಹಣವನ್ನು ಕೊಟ್ಟಿದ್ದ ಆಳುಗಳು ವ್ಯಾಪಾರದಿಂದ ಎಷ್ಟೆಷ್ಟು ಲಾಭ ಸಂಪಾದಿಸಿಕೊಂಡಿದ್ದಾರೆಂದು ತಿಳುಕೊಳ್ಳುವುದಕ್ಕಾಗಿ ಅವರನ್ನು ತನ್ನ ಬಳಿಗೆ ಕರಿಸಿದನು.**
**16 ಮೊದಲನೆಯವನು ಆತನ ಮುಂದೆ ಬಂದು-ದೊರೆಯೇ ನೀನು ಕೊಟ್ಟ ಮೊಹರಿಯಿಂದ ಹತ್ತು ಮೊಹರಿಗಳು ಸಂಪಾದನೆಯಾದವು ಅನ್ನಲು**
**17 ಅವನು ಅವನಿಗೆ ಭಲಾ ನೀನು ಒಳ್ಳೇ ಆಳು ನೀನು ಬಹು ಸ್ವಲ್ಪವಾದದ್ದರಲ್ಲಿ ನಂಬಿಕೆಯುಳ್ಳವನಾಗಿದ್ದರಿಂದ ಹತ್ತು ಗ್ರಾಮಗಳ ಮೇಲೆ ಅಧಿಕಾರಿಯಾಗಿರು ಎಂದು ಹೇಳಿದನು.**
**18 ಎರಡನೆಯವನು ಬಂದು ದೊರೆಯೇ ನೀನು ಕೊಟ್ಟ ಮೊಹರಿಂದ ಐದು ಮೊಹರಿಗಳು ದೊರಕಿದವು ಅನ್ನಲು**
**19 ಅವನು ಇವನಿಗೆ ನೀನು ಸಹ ಐದು ಗ್ರಾಮಗಳ ಮೇಲಿರು ಎಂದು ಹೇಳಿದನು.**
**20 ಬಳಿಕೆ ಮತ್ತೊಬ್ಬನು ಬಂದು-ದೊರೆಯೇ ಇಗೋ ನೀನು ಕೊಟ್ಟ ಮೊಹರಿ**
**21 ನೀನು ಇಡದೆಯಿರುವದನ್ನು ಎತ್ತಿಕೊಂಡು ಹೋಗುವ ಬಿತ್ತದೆಯಿರುವದನ್ನು ಕೊಯ್ಯುವ ಕಠಿಣ ಮನುಷ್ಯನು ಎಂದು ನಿನಗೆ ಹೆದರಿಕೊಂಡು ಇದನ್ನು ವಸ್ತ್ರದಲ್ಲಿ ಕಟ್ಟಿ ಇಟ್ಟುಕೊಂಡೆನು ಅಂದನು.**
**22 ಅದಕ್ಕೆ ಅವನು- ನೀನು ಕೆಟ್ಟ ಆಳು, ನಿನ್ನ ಮಾತಿನ ಮೇಲೆಯೇ ನಿನಗೆ ತೀರ್ಪು ಮಾಡುತ್ತೇನೆ. ನಾನು ಇಡದೆಯಿರುವದನ್ನು ಎತ್ತಿಕೊಂಡು ಹೋಗುವ ಬಿತ್ತದೆಯಿರುವದನ್ನು ಕೊಯ್ಯುವ ಕಠಿಣ ಮನುಷ್ಯನು ಎಂದು ತಿಳಿದಿಯಾ?**
**23 ಹಾಗಾದರೆ ನೀನು ನನ್ನ ಹಣವನ್ನು ಸಾಹುಕಾರನ ಕೈಯಲ್ಲಿ ಯಾಕೆ ಕೊಡಲಿಲ್ಲ? ಆ ಮೇಲೆ ನಾನು ಬಂದು ಅದನ್ನು ಬಡ್ಡಿ ಸಹಿತ ತೆಗೆದುಕೊಳ್ಳುತ್ತಿದ್ದನು. ಎಂದು ಹೇಳಿ**
**24 ಹತ್ತಿರ ನಿಂತಿದ್ದವರಿಗೆ- ಆ ಮೊಹರಿಯನ್ನು ಇವನಿಂದ ತೆಗೆದುಕೊಂಡು ಹತ್ತು ಮೊಹರಿಗಳುಳ್ಳವನಿಗೆ ಕೊಡಿರಿ ಎಂದು ಹೇಳಿದನು.**
**25 ಅವರು ದೊರೆಯೇ ಹತ್ತು ಮೊಹರುಗಳು ಅವನಲ್ಲಿ ಅವೆಯಲ್ಲಾ ಎಂದು ಅವನಿಗೆ ಹೇಳಿದನು.**

**26 ಅದಕ್ಕವನು ಇದ್ದವರಿಗೆಲ್ಲಾ ಕೊಡಲ್ಪಡುವದು ಇಲ್ಲದವನ ಕಡೆಯಿಂದ ಇದ್ದದ್ದೂ ತೆಗೆಯಲ್ಪಡುವದು ಎಂದು ನಾನು ನಿಮಗೆ ಹೇಳುತ್ತೇನೆ.**
**27 ಮತ್ತು ತಮ್ಮ ಮೇಲೆ ನಾನು ದೊರೆತನ ಮಾಡುವದು ಇಷ್ಟವಿಲ್ಲವೆಂದು ಹೇಳಿದ ಆ ನನ್ನ ವೈರಿಗಳನ್ನು ಇಲ್ಲಿಗೆ ತಂದು ನನ್ನ ಮುಂದೆ ಪರಿಹಾರ ಮಾಡಬೇಕು ಅಂದನು.**

ಮತ್ತಾಯ 25ನೇ ಅಧ್ಯಾಯದಲ್ಲಿ ತಲ್ಲಾಂತುಗಳ ಸಾಮ್ಯವು ನಮ್ಮಲ್ಲಿ ಅನೇಕರಿಗೆ ಪರಿಚಿತವಿದೆ. ಆದರೂ ಲೂಕನ ಸುವಾರ್ತೆಯಲ್ಲಿ ಅದೇ ರೀತಿಯಾದ ಸಾಮ್ಯವು ದೇವರ ರಾಜ್ಯದ ಅನೇಕ ಹೆಚ್ಚುವರಿ ಒಳನೋಟಗಳನ್ನು ಪ್ರಕಟಿಸುತ್ತದೆ. ದೊಡ್ಡ ಮನೆತನದವನು ಯೇಸುವನ್ನು ಪ್ರತಿನಿಧಿಸುತ್ತಾನೆ. ಆತನು ಹಿಂತಿರುಗಿ ಬರುವ ತನಕ ನಾವು ವ್ಯಾಪಾರ ಮಾಡುತ್ತಿರಬೇಕೆಂದು ಯೇಸುವು ಸಂಕಲ್ಪ ಹೊಂದಿದ್ದಾನೆ (ವಚನ 13) ವ್ಯಾಪಾರ ಮಾಡುವುದೆಂದರೆ ಪ್ರಪಂಚದಲ್ಲಿ ತೊಡಗಿಸಿಕೊಳ್ಳುವುದು, ವ್ಯಾಪಾರದಲ್ಲಿ ತೊಡಗಿಸಿಕೊಳ್ಳಲು, ಮತ್ತು ಪ್ರಪಂಚದ ಕಾರ್ಯಚಟುವಟಿಕೆಗಳೊಡನೆ ಒಬ್ಬನು ಸ್ವತಃ ಕಾರ್ಯನಿರತವಾಗಿದ್ದಾರೆ. ಇದು ಒಂದು ಪರಕೀಯ ನಿಯೋಜನೆ. ನಾವುಗಳು ಲೋಕ "ದೊಳಗೆ" ಇರಬೇಕು, ಲೋಕವನ್ನು ತೊಡಗಿಸಬೇಕು ಮತ್ತು ಪ್ರಪಂಚ"ದಿಂದ" ಒಂದು ಭಾಗವಾಗಿ ತುಂಬಾ ಕಂಡು ಬರುವುದರೊಂದರೊಂದಿಗೆ ಪ್ರಪಂಚದೊಡನೆ ಸಿಕ್ಕಿಹಾಕಿಕೊಳ್ಳುವುದಿಲ್ಲ. ಇದು ತಕ್ಷಣವಾಗಿ ಅನೇಕ ವಿಶ್ವಾಸಿಗಳು ತಮ್ಮ ನಂಬಿಕೆಯಲ್ಲಿ ಸನ್ಯಾಸಿಗಳಾಗುವ ಪ್ರವೃತ್ತಿಯನ್ನು ಉರುಳಿಸುತ್ತದೆ, ಪ್ರಪಂಚವು ಕಲುಷಿತವಾಗಬಹುದೆಂಬ ಭಯದಿಂದ ಜಗತ್ತನ್ನು ತೊಡಗಿಸಿಕೊಳ್ಳುವುದನ್ನು ತಡೆಯುತ್ತದೆ. ವ್ಯತಿರಕ್ತವಾಗಿ ವಿಶ್ವಾಸಿಗಳು ಆತನು ಬರುವ ತನಕ "ವ್ಯಾಪಾರ ಮಾಡುತ್ತೀರಿ" ಎಂಬುದಾಗಿ ಕರ್ತನಾದ ಯೇಸುವಿನಿಂದ ಆದೇಶಾಧಿಕಾರ ಪಡೆದಿರುವುದನ್ನು ತಿಳಿದವರಾಗಿ ಸಮಾಜದ ಪ್ರತಿಯೊಂದು ಗೋಳಗಳಿಗೂ ಪ್ರವೇಶಿಸಲು ಪ್ರೋತ್ಸಾಹಿಸಲ್ಪಡಬೇಕು.

ಕರ್ತನಾದ ಯೇಸುವು ನಮ್ಮಿಂದ ಎದುರುನೋಡುವ ಎರಡನೇ ಒಳನೋಟವು ಲಾಭಕರವಾಗಿರುವವರಾಗಿರಬೇಕು ಯಾಕೆಂದರೆ ಪ್ರತಿಯೊಬ್ಬನು. ವ್ಯಾಪಾರದಿಂದ ಎಷ್ಟುಗಳಿಸಿದ್ದಾನೆಂಬುದನ್ನು ನೋಡಲು ಆತನು ಹಿಂತಿರುಗಿ ಬರುತ್ತಾನೆ.(ವಚನ 15).. ಆದ್ದರಿಂದ ಪ್ರಪಂಚದಲ್ಲಿ ನಮ್ಮ ತೊಡಗಿಸಿಕೊಳ್ಳುವಿಕೆಯು ಉದ್ದೇಶಪೂರ್ವಕವಾಗಿರಬೇಕು, ಕಾರ್ಯತಂತ್ರದಿಂದಿರಬೇಕು, ಜ್ಞಾನ ಮತ್ತು ಲಾಭವನ್ನು ಸಂಪಾದಿಸುವಂತಹ ಉದ್ದೇಶಗಳನ್ನು ಹೊಂದಿರಬೇಕು, ದೇವರ ರಾಜ್ಯದ ಜನರಾಗಿ, ನಾವುಗಳು ಈಲೋಕದಲ್ಲಿ ದೇವರ ರಾಜ್ಯಕ್ಕಾಗಿ ಫಲಭರಿತರಾಗಿರಲೂ, ಮತ್ತು ಉಪಯುಕ್ತ, ಲಾಭದಾಯಕವಾಗಿರಲು ವ್ಯಾಪಾರದಿಂದ ಸಂಪಾದಿಸುವಂತದ್ದು ಒಂದು ಗಂಭೀರವಾದ ದೇವರ ರಾಜ್ಯದ ಆದೇಶವಾಗಿರಬೇಕು. ಇದನ್ನು ಸಾಧಿಸಲು ನಮಗೆ ಸಹಾಯ ಮಾಡಲೂ, ಜ್ಞಾನ, ತಿಳುವಳಿಕೆ ಮತ್ತು ಪರಿಜ್ಞಾನಗಳನ್ನು ಕೊಡಲು ಪವಿತ್ರಾತ್ಮನು ನಮ್ಮೊಂದಿಗಿದ್ದಾನೆ.

ಈ ಸಾಮ್ಯದಿಂದ ನಾವು ನೋಡುವ ಮುಂದಿನ ಆಸಕ್ತಿಕರ ಕಲಿಯುವಿಕೆ ಎಂದರೆ ಒಮ್ಮೆ ಕರ್ತನಾದ ಯೇಸುವು ನಾವು ಲಾಭದಾಯಕವಾದವರು ಎಂಬುದಾಗಿ ನೋಡಿದಾಗ, ಪ್ರತಿಯೋಬ್ಬರನ್ನು ಈ ಪ್ರಪಂಚದ ಅವರ ಮನೆವಾರ್ತೆಯತನದ

ಪ್ರಮಾಣಾನುಗುಣವಾಗಿ “ನಗರಗಳ ಮೇಲೆ ಅಧಿಕಾರದೊಡನೆ” ಬಹುಮಾನ ನೀಡುತ್ತಾನೆ. ಅಕ್ಷರಶಃ ಭವಿಷ್ಯತ್ತಿನ ದೇವರ ರಾಜ್ಯದಲ್ಲಿ ವಿಶ್ವಾಸಿಗಳು ಆಡಳಿತ ನಡೆಸುತ್ತಾರೆ ಅಥವಾ ಅಕ್ಷರಶಃ ದೇವರ ರಾಜ್ಯದಲ್ಲಿ ದೇಶಗಳನ್ನು ಆಳುತ್ತಾರೆ ಎಂಬುದು ನಮಗೆ ಗೊತ್ತಿದೆ. ಆದ್ದರಿಂದ ಆ ಬೆಳಕಿನಿಂದ ನಗರಗಳ ಮೇಲಿನ ಅಧಿಕಾರವನ್ನು ಅರ್ಥಮಾಡಿಕೊಳ್ಳಬಹುದು ನಮ್ಮ ಪ್ರಸ್ತುತ ಮನವಾರ್ತೆಯತನವು ಮುಂಬರುವ ಪ್ರಪಂಚದಲ್ಲಿನ ನಮ್ಮ ಭವಿಷ್ಯದ ಅಧಿಕಾರದ ಪಾತ್ರದ ಮೇಲೆ ಪರಿಣಾಮ ಬೀರುತ್ತದೆಂಬುದಾಗಿ ಮುಕ್ತಾಯಮಾಡುವುದು ಆಸಕ್ತಿಕರವಾಗಿದೆ. ಗಂಭೀರತೆಯುಳ್ಳವರಾಗಿ ಕಂಡು ಬರುವುದು ಮತ್ತು ಇಲ್ಲಿಯೇ ಮತ್ತು ಈಗ ಕರ್ತನು ನಮಗೆ ಒಪ್ಪಿಸಿಕೊಟ್ಟಲ್ಪಟ್ಟವುಗಳಿಗೆ ಒಳ್ಳೆಯ ಮನೆವಾರ್ತೆಯವರಾಗಿಬೇಕು ಎಂಬುವ ಸಮಯವು ಇದಾಗಿದೆ.

# 8 ದೇವರ ರಾಜ್ಯದ ಅಧಿಕಾರ

## ದೇವರ ರಾಜ್ಯವು ಬಲದೊಡನೆ ಬರುತ್ತದೆ

ಕರ್ತನಾದ ಯೇಸುವು ದೇವರ ರಾಜ್ಯದಲ್ಲಿ ದಾರಿ ತೋರಿಸಿದಾಗ, ಅತನು ಅದನ್ನು ಬಲ, ಅಧಿಕಾರ ಮತ್ತು ದೊರೆತನ ತೋರ್ಪಡಿಸುವುದರೊಂದಿಗೆ ಮಾಡಿದನು. ನಾವು ಇದನ್ನು ಹಿಂದಿನ ಅಧ್ಯಾಯಗಳಲ್ಲಿ ನೋಡಿದ್ದೇವೆ ಆದರೆ ಇದನ್ನು ಪುನರುಚ್ಚರಿಸುವುದು ಒಳ್ಳೆಯದಾಗಿದೆ. ಮತ್ತಾಯನು ಈ ಕೆಳಗಿನಂತೆ  ಹೇಳುತ್ತಾನೆ. "ಬಳಿಕ ಯೇಸು ಗಲಿಲಾಯದಲ್ಲೆಲ್ಲಾ ತಿರುಗಾಡಿ ಅಲ್ಲಿಯವರ ಸಭಾಮಂದಿರಗಳಲ್ಲಿ ಉಪದೇಶಮಾಡುತ್ತಾ ಪರಲೋಕ ರಾಜ್ಯದ ಸುವಾರ್ತೆಯನ್ನು ಸಾರಿ ಹೇಳುತ್ತಾ ಜನರ ಎಲ್ಲಾ ತರದ ರೋಗಗಳನ್ನೂ ಎಲ್ಲ ತರದ ಬೇನೆಗಳನ್ನೂ ವಾಸಿ ಮಾಡುತ್ತಾ ಬಂದನು. ಆತನ ಸುದ್ದಿಯು ಸಿರಿಯ ದೇಶದಲ್ಲೆಲ್ಲಾ  ಹಬ್ಬಿದ್ದರಿಂದ ಮೈಯಲ್ಲಿ ನೆಟ್ಟಗಿಲ್ಲದವರನ್ನು ಅಂದರೆ ತರತರದ ರೋಗಬಾಧೆಗಳಿಂದ ಕಷ್ಟ ಪಡುವವರನ್ನೂ ದೆವ್ವ ಹಿಡಿದವರನ್ನೂ ಮೂರ್ಛಾರೋಗಿಗಳನ್ನೂ ಪಾರ್ಶ್ವವಾಯುವಿನವರನ್ನೂ ಆತನ ಬಳಿಗೆ ಕರತಂದರು ಆತನು ಅವರನ್ನು ಸ್ವಸ್ಥ ಮಾಡಿದನು" (ಮತ್ತಾಯ 4:23,24) ಯೇಸುವು ದೇವರ ರಾಜ್ಯದ ಆಗಮನದ ಬಗ್ಗೆ ಸಾರಿ ಹೇಳುತ್ತಾ ಹೋದಾಗ, ಆತನು ರೋಗಿಗಳನ್ನು ವಾಸಿಮಾಡಿದನು, ದೆವ್ವಗಳನ್ನು ಬಿಡಿಸಿದನು ಮತ್ತು ಮಹತ್ತಾದ ಅದ್ಭುತ ಕಾರ್ಯಗಳನ್ನು ಮಾಡಿದನು.

ಸತ್ಯಕರವಾಗಿ  ಕರ್ತನಾದ ಯೇಸುವು, ದೇವರ ಆತ್ಮಿಕ ರಾಜ್ಯದ ಪ್ರಸನ್ನತೆ ಮತ್ತು ಆಗಮನದ ಒಂದು ಸೂಚನೆಯಾಗಿ ದುರಾತ್ಮಗಳ ಶಕ್ತಿಗಳನ್ನು ಹೊರಹಾಕುವುದನ್ನು ತೋರಿಸಿದನು. ಆತನು ಹೀಗೆ ಹೇಳಿದನು " ನಾನು ದೇವರ ಆತ್ಮನ ಬಲದಿಂದಲೇ ದೆವ್ವಗಳನ್ನು ಬಿಡಿಸುವದಾದರೆ ದೇವರ ರಾಜ್ಯವು ನಿಮ್ಮ ಹತ್ತಿರಕ್ಕೆ ಬಂತಲ್ಲಾ" (ಮತ್ತಾಯ 12:28 ) ಯೇಸುವು, ರೋಗಗಳು, ಅಸ್ವಸ್ಥತೆ, ದೆವ್ವಗಳು, ಪರಿಸ್ಥಿತಿಗಳು ಮತ್ತು ಸಂದರ್ಭಗಳನ್ನು ಅಧೀನದಲ್ಲಿಟ್ಟುಕೊಂಡನು ಮತ್ತು ಇವುಗಳನ್ನು ನಮ್ಮ ಪ್ರಪಂಚವನ್ನು ಆಕ್ರಮಣ ಮಾಡುವ ದೇವರ ಆತ್ಮಿಕ ರಾಜ್ಯದ ಅಭಿವ್ಯಕ್ತತೆಯಾಗಿ ತೋರಿಸಿದನು. ದೇವರ ರಾಜ್ಯವು ಅದರ ಬಲ ಅಥವಾ ಅದ್ಭುತಕರ ಮೂಲಾಅಂಶಗಳನ್ನು ಕಳೆದುಕೊಂಡಿಲ್ಲ. ಇಂದಿನ ನಮ್ಮ ಪ್ರಪಂಚದಲ್ಲಿ, ಸತ್ಯವಾದ ದೇವರ ಆತ್ಮಿಕ ರಾಜ್ಯದ ಒಂದು ಯಥಾರ್ಥ ಆಕ್ರಮಣವಿರುವಾಗ ಅಲ್ಲಿ ಸ್ವಸ್ಥತೆಗಳ ತೋರಿಸುವಿಕೆ,  ದುರಾತ್ಮನ ಬಲಗಳನ್ನು ಉರುಳಿಸುವಂತಹ ಮತ್ತು ಅದ್ಭುತ ಕಾರ್ಯಗಳು  ಇರುತ್ತವೆ ಬಹುಶಃ ನಮ್ಮ ಸಭೆಯಲ್ಲಿ ಹೊಂದಿರುವಂತಹ ಬಹಳವಾದವು ದೇವರ ರಾಜ್ಯದ ಒಂದು ನಿಜವಾದ ಆಕ್ರಮಣದ ಸ್ಥಳದಲ್ಲಿ ಉತ್ತಮವಾಗಿ ಬದಲಿಗಳಾಗಿ ಸಂಘಟಿತಗೊಂಡಿವೆ.

ಕರ್ತನಾದ ಯೇಸು ಈ ರೀತಿಯಾದಂತಹ ಸೇವೆಯನ್ನು ಅಪೊಸ್ತಲರ ಮೇಲೆಯು ಹಸ್ತಾಂತರಿಸಿದನು.

**ಮತ್ತಾಯ 10:1,7,8.**
**1 ಮತ್ತು ಆತನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಹತ್ತಿರಕ್ಕೆ ಕರೆದು ದೆವ್ವಗಳನ್ನು ಬಿಡಿಸುವುದಕ್ಕೂ ಎಲ್ಲಾ ತರದ ರೋಗಗಳನ್ನೂ ಎಲ್ಲಾ ತರದ ಬೇನೆಗಳನ್ನೂ ವಾಸಿಮಾಡುವದಕ್ಕೂ ಅವರಿಗೆ ಅಧಿಕಾರಕೊಟ್ಟನು.**
**7 ಪರಲೋಕ ರಾಜ್ಯವು ಸಮೀಪವಾಯಿತೆಂದು ಸಾರಿ ಹೇಳುತ್ತಾ ಹೋಗಿರಿ,**
**8 ರೋಗಿಗಳನ್ನು ಸ್ವಸ್ಥಮಾಡಿರಿ ಸತ್ತವರನ್ನು ಬದುಕಿಸಿರಿ ಕುಷ್ಟ ಹತ್ತಿದವರನ್ನು ಶುದ್ಧಮಾಡಿರಿ, ದೆವ್ವಗಳನ್ನು ಬಿಡಿಸಿರ; ಉಚಿತವಾಗಿ ಹೊಂದಿದ್ದೀರಿ ಉಚಿತವಾಗಿ ಕೊಂಡಿರಿ.**

ಪರಲೋಕರಾಜ್ಯವು ಬಂದಿದೆ ಎಂಬುದನ್ನು ಸಾರಿಹೇಳುತ್ತಾ ಅವರು ಹೋದಾಗ ಅವರು ಅಶುದ್ಧ ಆತ್ಮಗಳ ಮೇಲೆ ಬಲವನ್ನು, ಎಲ್ಲಾ ತರದ ರೋಗಗಳು ಮತ್ತು ಬೇನೆಗಳನ್ನು ವಾಸಿಮಾಡುವುದನ್ನು, ಸತ್ತವರನ್ನು ಬದುಕಿಸುವುದನ್ನು ಇವೆಲ್ಲವನ್ನೂ ಉಚಿತವಾಗಿ ಮಾಡಿ ತೋರ್ಪಡಿಸಿದರು.

ಮಹಾಆದೇಶಾಧಿಕಾರದಲ್ಲಿ, ಯೇಸು 12 ಶಿಷ್ಯರುಗಳಿಗೆ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಲು ಅವರಿಗೆ ಆತನು ಉಪದೇಶಿಸಿದ್ದಂತಹ ಎಲ್ಲವನ್ನು ಅವರಿಗೆ ಬೋಧಿಸುವಂತೆ ಮತ್ತಾಯ 10:1,7.8 ನ್ನು ಸೇರಿದಂತೆ ಆದೇಶಿಸಿದನು. ಎಲ್ಲಾ ದೇಶಗಳ, ಶಿಷ್ಯರುಗಳು, ಎಲ್ಲಾ ಸಮಯಗಳಲ್ಲಿ ಬಲವನ್ನು ಅಧಿಕಾರದ ಅನುಸರಣೆಯನ್ನು ತೋರ್ಪಡಿಸುವುದರೊಡನೆ ದೇವರ ರಾಜ್ಯವನ್ನು ಸಾರಬೇಕಿತ್ತು.

ಅಧಿಸಭೆಯು ಈ ಅಧಿಕಾರ ಮತ್ತು ಬಲದಲ್ಲಿ ನಡೆಯಿತು ಎಂಬುದಾಗಿ ಅಪೊಸ್ತಲರ ಕೃತ್ಯಗಳು ಪುಸ್ತಕದಿಂದ ನಮಗೆ ತಿಳಿದಿದೆ. ಅವರು ಮಾಡಬೇಕೆಂಬುದಾಗಿ ಯೇಸುವು ಅವರಿಗೆ ಉಪದೇಶಿಸಿದಂತೆ ಅವರು ಮಾಡಿದರು. ಪೌಲನು ಸಹ ದೇವರ ರಾಜ್ಯದ ಕುರಿತು ಬಲದಲ್ಲಿ ಸಾರಿ ಹೇಳುತ್ತಾ ಹೋದನು. ಇದನ್ನು ಪೌಲನು ಸಹ ದೇವರ ರಾಜ್ಯದ ಕುರಿತು ಬಲದಲ್ಲಿ ಸಾರಿ ಹೇಳುತ್ತಾ ಹೋದನು ಇದನ್ನು ಪೌಲನು ಹೀಗೆ ಬರೆದಿದ್ದಾನೆ " ದೇವರ ರಾಜ್ಯವು ಮಾತಿನಲ್ಲಿ ಇಲ್ಲ ಶಕ್ತಿಯಲ್ಲಿಯೇ ಆಧಾರಗೊಂಡದೆ." (1ಕೊರಿಂಥದವರಿಗೆ 4:20)

## ಆತನ ಜನರಿಗೆ ಅಧಿಕಾರ

ನಾವು ಹಿಂದೆಯೇ ನೋಡಿದಂತೆ, ಕರ್ತನಾದ ಯೇಸುವು ದೇವರ ರಾಜ್ಯದ ಅಧಿಕಾರವನ್ನು ಸಭೆಯಲ್ಲಿ ಪಟ್ಟ ಭದ್ರವಾಗಿರಿಸಿದ್ದಾನೆ. ಭೂಲೋಕದಲ್ಲಿ ಕಟ್ಟಿರುವುದು ಪರಲೋಕ ರಾಜ್ಯದಲ್ಲಿಯು ಕಟ್ಟಿರುವುದು ಭೂಲೋಕದಲ್ಲಿ ಬಿಚ್ಚಿರುವುದು ಪರಲೋಕದಲ್ಲಿ

ಬಿಟ್ಟಿರುವುದು ಎಂಬುದಾಗಿ ಘೋಷಿಸುವ ಅಧಿಕಾರ (ಬೀಗದ ಕೈಗಳು) ಸಭೆಗೆ ಕೊಡಲ್ಪಟ್ಟಿದೆ (ಮತ್ತಾಯ 16:19). ಅರಸನು ಅಧಿಕಾರವನ್ನು ಆತನ ಜನರಲ್ಲಿ ಭದ್ರವಾಗಿ ಇಟ್ಟಾಗ- ಅವರು ಹೋಗುವಲೆಲ್ಲಾ ಅದನ್ನು ಕೊಂಡೊಯ್ಯುತ್ತಾರೆ.

ಸತ್ಯಕರವಾಗಿ, ನಾವು ಅಧಿಕಾರ ಹೊಂದಿದ್ದೇವೆ ಯಾಕೆಂದರೆ ನಾವು ದೇವರ ರಾಜ್ಯದ ವಾರಾಸುದಾರರಾಗಿದ್ದೇವೆ. ದೇವರ ಮೂಲ ಯೋಜನೆಯು ದೇವರ ರಾಜ್ಯದಲ್ಲಿ ಜನರು ವಾರಸುದಾರರಾಗಿರುವುದು- ಇದನ್ನು ವಾರಸುದಾರರಾಗಿ ಹೊಂದುವಂತಹ ಒಂದು ರಾಜ್ಯವನ್ನು ಹೊಂದಿರುವುದು ಆಗಿತ್ತು ಎಂಬುದನ್ನು ನೆನಸಿಕೊಳ್ಳಬೇಕು( ಮತ್ತಾಯ 25:34) ದೇವರ ಮಕ್ಕಳಾಗಿ ನಾವು ದೇವರ ಬಾಧ್ಯಸ್ಥರು ಮತ್ತು ಕ್ರಿಸ್ತನೊಡನೆ ಜೊತೆ-ಬಾಧ್ಯಸ್ಥರೆಂಬುದನ್ನು ಹೊಸ ಒಡಂಬಡಿಕೆಯು ನಮಗೆ ಬೋಧಿಸುತ್ತದೆ (ರೋಮಾಪುರದವರಿಗೆ 8:16:17) ನಾವುಗಳು (ವರ್ತಮಾನ ಕಾಲದಲ್ಲಿ) ಮಕ್ಕಳು ಮತ್ತು ಈಗಿನಿಂದ ನಾವುಗಳು (ವರ್ತಮಾನಕಾಲದಲ್ಲಿ) ವಾರಸುದಾರರು, ಮತ್ತು ಕ್ರಿಸ್ತನೊಡನೆ ಜೊತೆ ವಾರಸುದಾರರಾಗಿದ್ದೇವೆ. ವಾರಸುದಾರರು ದೇವರ ರಾಜ್ಯದ ಅಧಿಕಾರವನ್ನು ಒಯ್ಯುತ್ತಾರೆ. ನಮ್ಮ ಅಧಿಕಾರವು ಆತ್ಮನ ಕ್ಷೇತ್ರದಿಂದ ಗುರುತಿಸಲ್ಪಟ್ಟಿದೆ.

ನಾವು ದೇವರ ರಾಜ್ಯದ ಅಧಿಕಾರ ಹೊಂದಿದ್ದೇವೆ ಯಾಕೆಂದರೆ ನಾವು ಅಧಿಕಾರದ ಒಂದು ಸ್ಥಳದಲ್ಲಿ ಸ್ಥಾನದಲ್ಲಿದ್ದೇವೆ.

**ಎಫೆಸದವರಿಗೆ 2:4-6**
**4 ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು**
**5 ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. (ಕೃಪೆಯಿಂದಲೇ ರಕ್ಷಣೆ ಹೊಂದಿದ್ದವರಾಗಿದ್ದೀರಿ).**
**6 ಬದುಕಿಸಿದ್ದಲ್ಲದೆ. ತಾನು ಕ್ರಿಸ್ತ ಯೇಸುವಿನಲ್ಲಿ ರಕ್ಷಣೆ ಹೊಂದಿದವರಾಗಿದ್ದೀರಿ) ಬದುಕಿಸಿದ್ದಲ್ಲದೆ ತಾನು ಕ್ರಿಸ್ತ ಯೇಸುವಿನಲ್ಲಿ ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಿಯವನ್ನು ಮುಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿನ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ.**

ದೇವರು ಆತನ ಮಹಾ ಪ್ರೀತಿಯಲ್ಲಿ ಕ್ರಿಸ್ತನಲ್ಲಿ ಆತನ ಬಲಗೈ ಭಾಗದಲ್ಲಿ ನಮ್ಮನ್ನು ಕೂಡ್ರಿಸಿರುವುದು- ಅದ್ಭುತಕರವಾದುದಾಗಿದೆ. ಗ್ರಾಮ ಒಂದು ಮಹಾ ಅಧಿಕಾರದ ಸ್ಥಳ ಮತ್ತು ಸ್ಥಾನವಾಗಿದೆ. ನಾವು ಪುಸ್ತಕವಾಗಿ ಕ್ರಿಸ್ತನೊಡನೆ ಕೂಡ್ರಿಸಲ್ಪಟ್ಟಿದ್ದೇವೆ.

ನಾನು ಮತ್ತು ನೀವುಗಳು ದೇವರ ರಾಜ್ಯದ ಅಧಿಕಾರವನ್ನು ಭದ್ರವಾಗಿ ಪಡೆದಿದ್ದೇವೆ. ನಾವು ಎಲ್ಲೆಲ್ಲಿ ಹೋಗುತ್ತೇವೋ ಅಲ್ಲೆಲ್ಲಾ ದೇವರ ರಾಜ್ಯದ ಅಧಿಕಾರ ಕೊಂಡ್ಯುತ್ತೇವೆ. ದೇವರ ರಾಜ್ಯದ ನಮ್ಮ ಅಧಿಕಾರವನ್ನು ಪ್ರಯೋಗಿಸುವುದು ನಮ್ಮ ಮೇಲೆ ಬಿಟ್ಟಿದೆ. ಮತ್ತು ನಾವು ದೇವರ ರಾಜ್ಯವನ್ನು ಪರಿಚಯಿಸುವಾಗ ಯೇಸುವು ಹೇಳಿದ್ದನ್ನು ನಾವು ಮಾಡಬೇಕು.

## ಎರಡು ಪ್ರಪಂಚಗಳಲ್ಲಿ ಕಾರ್ಯನಿರ್ವಹಿಸುವುದು.

ಎರಡು ಪ್ರಪಂಚಗಳಲ್ಲಿ ಹೇಗೆ ಕಾರ್ಯನಡೆಸುವುದು ಎಂಬುದನ್ನು ಕಲಿಯುವುದು ನಮಗೆ ಸವಾಲು ಆಗಿದೆ. ನಾವು ಕ್ರಿಸ್ತನ ರಾಯಭಾರಿಗಳು ದುಷ್ಟತನ, ಪಾಪ, ಅನಾರೋಗ್ಯ ಮತ್ತು ದೆವ್ವಗಳಿಂದ ಅಧೀನಕ್ಕೊಳಗಾದ ಪ್ರಪಂಚದಲ್ಲಿ ನಾವು ಪ್ರಸಕ್ತವಾಗಿ ಇದ್ದರೂ ನಮ್ಮ ಅಧಿಕಾರವನ್ನು ಇನ್ನೊಂದು ಪ್ರಪಂಚದಿಂದ (ದೇವರ ರಾಜ್ಯ) ಹೊಂದಿರುತ್ತೆವೆ. ಆಗಾಗ್ಗೆ ಅನೇಕ ಪರಿಸ್ಥಿತಿಗಳಲ್ಲಿ ನಮ್ಮ ಸ್ವಂತ ಮನಸ್ಸು ಮತ್ತು ಶರೀರದೊಡನೆ ಹೋರಾಡುತ್ತೇವೆ. ಕಠಿಣ ಪರಿಸ್ಥಿತಿಗಳು, ದುರಾತ್ಮನ ಕಾರ್ಯಗಳು ಮುಂತಾದವುಗಳನ್ನು ತರ್ಕಬದ್ಧಗೊಳಿಸುತ್ತೆವೆ ಮತ್ತು ದೂರವಿರಿಸಲು ಪ್ರಯತ್ನಿಸುತ್ತೇವೆ. ಅಥವಾ ನಮ್ಮ ತರ್ಕದಿಂದ ಅವುಗಳನ್ನು ಬಗೆಹರಿಸಲು ಪ್ರಯತ್ನಿಸುತ್ತೇವೆ. ಅನೇಕ ಸಮಯಗಳಲ್ಲಿ ಅಂತಹ ವಿಷಯಗಳು ನಾವು ಹೊಂದಿರುವ ಅಧಿಕಾರ, ಬಲ ಮತ್ತು ದೊರೆತನವನ್ನು ಚಲಾಯಿಸುವುದನ್ನು ಮಿತಿ, ಅಥವಾ ಅಡ್ಡಿ ಪಡಿಸುತ್ತವೆ. ನಮ್ಮ ವಿಚಾರಶಕ್ತಿಯನ್ನು ಉಪಯೋಗಿಸಿ ನೈಸರ್ಗಿಕದಲ್ಲಿ ಕಾರ್ಯಗಳನ್ನು ಮಾಡುವುದರಲ್ಲಿ ತಪ್ಪಿಲ್ಲದಿದ್ದಾಗಲೂ ಯೇಸುವು ದೇವರ ರಾಜ್ಯದ ಅಧಿಕಾರ ಮತ್ತು ಬಲದೊಡನೆ ಸೇವೆಸಲ್ಲಿಸಿದ ಹಾಗೆ ನಾವು ಹೇಗೆ ಮಾಡಬೇಕೆಂಬುದನ್ನು ಮೊದಲು ನೋಡಬೇಕು. ಹೆಜ್ಜೆಯನ್ನಿಡಿರಿ ಮತ್ತು ದೇವರ ರಾಜ್ಯದ ಅಧಿಕಾರ ಚಲಾಯಿಸಿರ. ದೇವರ ರಾಜ್ಯವು ಒಂದು ಕಠಿಣ ಪರಿಸ್ಥಿತಿಯನ್ನು ಅಕ್ರಮಿಸುವಾಗ ಏನು ಜರುಗುತ್ತದೆಂಬುದನ್ನು ನೋಡಿರಿ. ನಾವು ಜಾಗ್ರತರಾಗಿರುವುದನ್ನು ಕಲಿಯಬೇಕು ಮತ್ತು ಎಲ್ಲಾ ಸಮಯದಲ್ಲಿ ಅರಸನು ಭದ್ರವಾಗಿ ನೀಡಿದಂತಹ ದೊರೆತನ, ಬಲ ಮತ್ತು ಅಧಿಕಾರ ಮತ್ತು ದೇವರರಾಜ್ಯದೊಳಗೆ ಜೀವಿಸಬೇಕು.

ಸಂಚಾರಿ ಪೋಲಿಸ್ ಪೇದೆಯು ಚಲಿಸುತ್ತಿರುವ ವಾಹನಗಳನ್ನು ನಿಲ್ಲಿಸಲು ಸಾಮರ್ಥ್ಯವನ್ನು ತನ್ನಲ್ಲಿಯೇ ಹೊಂದಿಲ್ಲ. ಅವನು ಸುಲಭವಾಗಿ ಓಡಿಹೋಗಬಹುದು. ಆದಾಗ್ಯೂ ಸರ್ಕಾರದಿಂದ ಅವನಿಗೆ  ವಹಿಸಿಕೊಟ್ಟಂತಹ ಅಧಿಕಾರದ ನಿಮಿತ್ತದಿಂದ ಮತ್ತು ಅವನ ಸಮವಸ್ತ್ರದ ನಿಮಿತ್ತದಿಂದ ವಾಹನಗಳನ್ನು ನಿಲ್ಲಿಸಲು ಅವನ ಕೈಗಳನ್ನು ಎತ್ತುವುದರಿಂದ ಅವರ ಅಧಿಕಾರವನ್ನು ಚಲಾಯಿಸುವಾಗೆ, ಎಲ್ಲಾ ವಾಹನಗಳು- ದೊಡ್ಡದು ಅಥವಾ ಚಿಕ್ಕದು- ನಿಲ್ಲಬೇಕು, ಅದೇ ರೀತಿಯಾಗಿ, ವಿಶ್ವಾಸಿಗಳಾಗಿ ನಮ್ಮಲ್ಲಿ ದೇವರ ರಾಜ್ಯದ ಅಧಿಕಾರವು ವಹಿಸಲ್ಪಟ್ಟಿದೆ ಮತ್ತು ಭೂಮಿಯ ಮೇಲೆ ಆ ಅಧಿಕಾರವನ್ನು ನಾವು ಚಲಾಯಿಸಬೇಕು.

## ಅಧಿಕಾರದ ಕ್ಷೇತ್ರಗಳು

ಭೂಮಿಯ ಮೇಲೆ ಪರಿಸ್ಥಿತಿಗಳು, ಸಂದರ್ಭಗಳು ಸೈತಾನ ಮತ್ತು ಅವನ ಕಾರ್ಯಗಳ ಮೇಲೆ ಅಧಿಕಾರವನ್ನು ವಿಸ್ತರಿಸುವಾಗ ಅದು ದೇವರ ಚಿತ್ತ ಮತ್ತು ಉದ್ದೇಶವನ್ನು

ವಿರೋಧಿಸುತ್ತದೆ ರೋಗಗಳು ಮತ್ತು ಬೇನೆಗಳು ದುರಾತ್ಮನ ಕಾರ್ಯಗಳಾಗಿವೆ.(ಅಪೊಸ್ತಲರ ಕೃತ್ಯಗಳು 10:38 ). ಪ್ರಾಕೃತಿಕ ಅಂಶಗಳು, ಪರಿಸ್ಥಿತಿಗಳು ಅಥವಾ ಸಂದರ್ಭಗಳು ದೇವರ ಚಿತ್ತ ಮತ್ತು ಉದ್ದೇಶವನ್ನು ಅಡ್ಡಿ ಪಡಿಸಲು ನಮ್ಮ ಜೀವಿತಗಳ ಮೇಲೆ ವಿರೋಧವಾಗಿ ಬರುವಂತಹವುಗಳನ್ನು ದೇವರ ರಾಜ್ಯದ ಅಧಿಕಾರದೊಡನೆ ಅಧೀನಪಡಿಸಿಕೊಳ್ಳಬಹುದು. ಯಾವುದಾದರು ಕಾರ್ಯ ನಡೆಯಬೇಕೆಂದು ದೇವರ ಘೋಷಿಸಿದರೆ, ಆಮೇಲೆ ಅದಕ್ಕೆ ವಿರೋಧವಾಗಿ ಏನೇ ಬಂದರೂ ನಮಗೆ ವಹಿಸಿರುವ ಆತನ ಅಧಿಕಾರದೊಡನೆ ಉರುಳಿಸಬಹುದು.

ಹೇಗಾದರೂ, ಜನರುಗಳ ಚಿತ್ತದ ಮೇಲೆ ನಮಗೆ ಅಧಿಕಾರವಿಲ್ಲ ಸಂಚಾರ ಪೋಲಿಸ್ ಪೇದೆಯು ನಿಮ್ಮ ಗ್ಯಾರೆಜ್‌ಗೆ ಬಂದು ನಿಮ್ಮ ಕಾರನ್ನು ಅಲ್ಲಿ ನಿಲ್ಲಿಸಿರಿ ಎಂದು ಹೇಳಲಾಗುವುದಿಲ್ಲ, ಅದರಂತೆ ನಾವು ಇನ್ನೊಬ್ಬ ವ್ಯಕ್ತಿಯ ಚಿತ್ತಕ್ಕೆ ಹೆಜ್ಜೆಯಿಡುವುದಿಲ್ಲ. ದೇವರು ನಮಗೆ ನೀಡಿದ ಅಧಿಕಾರದ ಹೊರಗಿನ ಕ್ಷೇತ್ರ ಇದಾಗಿದೆ. ನಾವು ಇತರರನ್ನು ನಿಯಂತ್ರಿಸಲು ಅಥವಾ ಯುಕ್ತಿಯಿಂದ ಬಳಸಲು ಸಾಧ್ಯವಿಲ್ಲ. ಅವರ ಜೀವಿತಗಳಿಗೆ ಪ್ರವೇಶಿಸುವುದರಿಂದ ಆತ್ಮಿಕ ಪ್ರಭಾವಗಳ ಮೇಲೆ ಪರಿಣಾಮ ಬೀರಲು ನಿಶ್ಚಯವಾಗಿ ನಮ್ಮ ಅಧಿಕಾರ ಚಲಾಯಿಸಬಹುದು ಆದರೆ ಅವರ ವೈಯಕ್ತಿಕ ಚಿತ್ತ ಹತೋಟಿಯಲ್ಲಿಡಲು ನಮಗೆ ಸಾಧ್ಯವಿಲ್ಲ.

## ನಮ್ಮ ಅಧಿಕಾರ ಚಲಾಯಿಸಬಹುದು.

ಭೂಮಿಯ ಮೇಲೆ ನಮ್ಮ ಅಧಿಕಾರವನ್ನು ಅನೇಕ ಮಾರ್ಗಗಳ ಮೂಲಕವಾಗಿ ಜಾರಿಗೊಳಿಸಲು ಅರಸನು ನಮಗೆ ವಹಿಸಿಕೊಟ್ಟಿದ್ದಾನೆ.

## ಯೇಸುವಿನ ಹೆಸರಿನಲ್ಲಿ ಅಧಿಕೃತ ಆಜ್ಞೆ ನೀಡುವುದು.

ಕರ್ತನಾದ ಯೇಸುವು ಆತನ ಹೆಸರನ್ನು ಉಪಯೋಗಿಸುವ ಹಕ್ಕನ್ನು ನಮಗೆ ಕೊಟ್ಟಿದ್ದಾನೆ. ಕಾನೂನಿನ ಪದದಲ್ಲಿ “ವಕಾಲತ್ತು ನಾಮೆ ಅಧಿಕಾರ” (ಅಧಿಕಾರ ಪತ್ರ). ಎಂಬುದಾಗಿ ಇದನ್ನು ಕರೆಯುತ್ತಾರೆ. ಆತನ ಹೆಸರಿನಲ್ಲಿ ದೆವ್ವಗಳನ್ನು ಬಿಡಿಸಬಹುದು, ಅದ್ಭುತ ಕಾರ್ಯಗಳನ್ನು ಮಾಡುವುದು ಮತ್ತು ರೋಗಿಗಳ ಮೇಲೆ ಸ್ವಸ್ಥತೆ ಮಾಡಲು ಕೈಗಳನ್ನು ಇಡಿರಿ ಎಂಬುದಾಗಿ ಆತನು ಹೇಳಿದ್ದಾನೆ. (ಮಾರ್ಕ 16:17,18) ಆತನ ಹೆಸರು ಪರಲೋಕವಲ್ಲ, ಭೂಲೋಕದಲ್ಲಿ ಮತ್ತು ನರಕದಲ್ಲಿಯು ಅತ್ಯುನ್ನತ ಅಧಿಕಾರದ ಹೆಸರಾಗಿದೆ( ಫಿಲಿಪ್ಪಿಯವರಿಗೆ 2:9-11). ನಾವು ಆತನ ಹೆಸರನ್ನು ಹೇಳುವಾಗ ಆತನು ಏನನ್ನು ಮಾಡುತ್ತಿದ್ದನೋ ಅದನ್ನು ಮಾಡಲು ಆತನಿಂದ ಕಳುಹಿಸಲ್ಪಟ್ಟಿದ್ದೇವೆ ಎಂಬುದನ್ನು ಸೂಕ್ತಪಡಿಸುತ್ತೇವೆ.

## ಆತ್ಮನ ಬಲ

ಅಭಿಷೇಕವು ನೊಗಗಳನ್ನು ಮುರಿಯುತ್ತದೆ ಮತ್ತು ಭಾರಗಳನ್ನು ತೊಲಗಿಸಿಬಿಡುತ್ತದೆ. (ಯೆಶಾಯ 10:27 ) ಅಭಿಷೇಕವು ಸೆರೆಯೊಳುವನ್ನು ಸ್ವತಂತ್ರಗೊಳಿಸುತ್ತದೆ. ನಮ್ಮಲ್ಲಿ ಮತ್ತು ನಮ್ಮ ಮೂಲಕವಾಗಿ ಕಾರ್ಯ ಮಾಡುವ ಪವಿತ್ರಾತ್ಮನ ಬಲವು ಪ್ರಸನ್ನತೆಯು ಅಭಿಷೇಕವಾಗಿದೆ. ನಮ್ಮ ಜೀವಿತದಲ್ಲಿ ಉನ್ನತವಾದ ಅಭಿಷೇಕಕ್ಕಾಗಿ ದೇವರನ್ನು ಹಿಂಬಾಲಕಬೇಕು ಆದ್ದರಿಂದ ವಿಭಿನ್ನತೆಯನ್ನು ಉಂಟುಮಾಡಲು ಸನ್ನಿವೇಶಗಳು ಮತ್ತು ಸಂದರ್ಭಗಳಿಗೆ ಆತನ ಪ್ರಸನ್ನತೆ ಮತ್ತು ಬಲವನ್ನು ನಾವು ಕೊಂಡೊಯ್ಯಬಹುದು.

## ಪ್ರಾರ್ಥನೆ

ಯಾವುದೇ ಪರಿಸ್ಥಿತಿಯಲ್ಲಿ ಆತನ ಚಿತ್ತವೇ ನೆರವೇರಲಿ ಮತ್ತು ಆತನ ರಾಜ್ಯವು ಬರಲಿ ಎಂಬುದಾಗಿ ನಾವು ಪ್ರಾರ್ಥಿಸುವ ನಮ್ಮ ದೇವರ ರಾಜ್ಯ ಅಧಿಕಾರವನ್ನು ಅಭ್ಯಾಸಿಸುವುದರಿಂದ ಬದಲಾವಣೆಗಳ ಮೇಲೆ ಪರಿಣಾಮ ಬೀರಲು ನಮಗಾಗಿರುವ ಮಹತ್ತಾದ ಮಾಧ್ಯಮವು ಪ್ರಾರ್ಥನೆಯಾಗಿದೆ.

## ದೊರೆತನದ ಚಿಂತನೆ

ನೀವು ಎದುರಿಸುತ್ತಿರುವ ಪರಿಸ್ಥಿತಿಗಳು ಮತ್ತು ಸಂದಿಗ್ನ ಸಂದರ್ಭಗಳನ್ನು ದೇವರ ರಾಜ್ಯವು ನಿಮ್ಮೊಳಗೆ ಇದೆ ಮತ್ತು ಅರಸನು ಬಲ, ಅಧಿಕಾರ ಮತ್ತು ದೊರೆತನವನ್ನು ಇಟ್ಟಿದ್ದಾನೆ ಎಂಬ ತಿಳುವಳಿಕೆಯೊಡನೆ ನೋಡುವುದನ್ನು ಕಲಿಯಿರಿ. ನಿಮ್ಮ ಅಧಿಕಾರದ ಕ್ಷೇತ್ರವನ್ನು ಉಲ್ಲಂಘಿಸದೇ, ದೆವ್ವಗಳ ಮೇಲೆ ಅವರ ಕಾರ್ಯಗಳು ಮತ್ತು ಪರಿಸ್ಥಿತಿಗಳು ಮತ್ತು ಸಂದರ್ಭಗಳ ಮೇಲೆ ದೊರೆತನವನ್ನು ಚಲಾಯಿಸಿರಿ.

# 9.ದೇವರ ರಾಜ್ಯದ ಸರ್ಕಾರ

ನಮ್ಮ ದೇವರು ಅರಸನಾಗಿದ್ದಾನೆ. ಸತ್ಯವೇದವು ಹೀಗೆ ಹೇಳುತ್ತದೆ. “ರಾಜ್ಯವು ಯೆಹೋವನದೇ ಎಲ್ಲಾ ಜನಾಂಗಗಳಿಗೂ ಆತನೇ ಒಡೆಯನು (ಕೀರ್ತನೆಗಳು 22:28) “ಯೆಹೋವನು ಮೇಲಣ ಲೋಕದಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆ ಆತನು ಸಮಸ್ತವನ್ನೂ ಆಳುತ್ತಾನೆ” (ಕೀರ್ತನೆಗಳು 103:19) ಎಂಬುದಾಗಿ ವಚನಭಾಗವು ನಮಗೆ ಬೋಧಿಸುತ್ತದೆ. ಇಂದು, ದೇಶಗಳ ಮೇಲೆ ಆತನ ಸರ್ಕಾರ ಅಥವಾ ಆಳ್ವಿಕೆಯನ್ನು ದೇವರು ವಿಸ್ತರಿಸಿದ್ದಾನೆ. ಆತನ ಸರ್ಕಾರವು ವ್ಯಾಪಿಸಬೇಕೆಂಬುದರ ಮೂಲಕವಾಗಿ ಅಧಿಕಾರವನ್ನು ದೇವರು ಇರಿಸಿದ್ದಾನೆ. ಬಿದ್ದು ಹೋದಂತಹ ಲೋಕದಲ್ಲಿಯು ಆತನು ವ್ಯವಸ್ಥಿತಗೊಳಿಸಬೇಕು ಸರ್ಕಾರ ಅಥವಾ ಅಧಿಕಾರದ ದೇವರ ಪ್ರಭಾವವನ್ನು ನಾವು ಗುರುತಿಸಬೇಕು ಸ್ಥಳೀಯ ಸಭೆಗಾಗಿ, ಕ್ರಿಸ್ತನ ಅಂಗಕ್ಕಾಗಿ ಕೆಲಸದ ಸ್ಥಳಕ್ಕಾಗಿ ಮತ್ತು ನಾಗರೀಕ ಸರ್ಕಾರಕ್ಕಾಗಿ ಅಧಿಕಾರದ ರಚನೆಗಳನ್ನು ಇರಿಸಿದ್ದಾನೆ. ಆತನು ಇರಿಸಿರುವಂತಹ ದೇವರ ಸರ್ಕಾರಿ ಅಧಿಕಾರಕ್ಕೆ ಸರಿಯಾಗಿ ಸಂಬಂಧಿಸಿಕೊಳ್ಳಬೇಕು ಮತ್ತು ಪ್ರತಿಕ್ರಿಯಿಸಬೇಕು ಮತ್ತು ಸರಿಯಾಗಿ ಗುರುತಿಸುವುದನ್ನು ಕಲಿಯಬೇಕು ಅದನ್ನು ಮಾಡುವಾಗ ನಮ್ಮ ಜೀವಿತದಲ್ಲಿ ದೇವರ ಸರ್ಕಾರಕ್ಕೆ(ಆಳ್ವಿಕೆಗೆ) ನಮ್ಮನ್ನು ಸಮರ್ಪಿಸುತ್ತೇವೆ. ದೇವರ ಅಧಿಕಾರದ ರಚನೆಗಳಲ್ಲಿ ನಮಗೆ ವಹಿಸಿಕೊಟ್ಟಿರುವ ಪಾತ್ರಗಳು ಮತ್ತು ಜವಬ್ದಾರಿಗಳನ್ನು ನಾಯಕತ್ವದಲ್ಲಿನ ಸ್ಥಾನಮಾನಗಳಲ್ಲಿ ನಾವು ಗುರುತಿಸಬೇಕು ಮತ್ತು ಶ್ರೇಷ್ಟತೆಯ ಸ್ಥಾನಮಾನವಿರಬಾರದು.

## ದೇವರ ಅಧಿಕಾರದ ರಚನೆ

**1ಕೊರಿಂಥದವರಿಗೆ 11:3:11:13**
**3 ಆದರೂ ಒಂದು ಸಂಗತಿಯನ್ನು ನೀವು ತಿಳಿಯಬೇಕೆಂದು ನನ್ನ ಇಷ್ಟ ಅದೇನಂದರೆ ಪ್ರತಿ ಪುರುಷನಿಗೂ ಕ್ರಿಸ್ತನು ತಲೆ, ಸ್ತ್ರೀಗೆ, ಪುರುಷನು ತಲೆ, ಕ್ರಿಸ್ತನಿಗೆ ದೇವರು ತಲೆಯಾಗಿದ್ದಾನೆ. “**
**11 ಆದರೂ ಕರ್ತನ ಸಂಬಂಧದಲ್ಲಿ ಪುರುಷರಿಲ್ಲದೆ ಸ್ತ್ರೀಯರೂ ಸ್ತ್ರೀಯರಿಲ್ಲದೆ ಪುರುಷರೂ ಸಂಪೂರ್ಣರಲ್ಲ ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು**
**13 ನಿಮ್ಮೊಳಗೆ ನೀವೇ ಯೋಚಿಸಿ ತೀರ್ಮಾನಿಸಿಕೊಳ್ಳಿರಿ ಸ್ತ್ರೀಯು ಮುಸುಕು ಹಾಕಿಕೊಳ್ಳವೆ ದೇವರಿಗೆ ಪ್ರಾರ್ಥನೆ ಮಾಡುವದು ಯುಕ್ತವೋ?**

ದೇವರ ಅಧಿಕಾರ ರಚನೆಯಲ್ಲಿ, ಸ್ತ್ರೀಗೆ ಪುರುಷನು “ ತಲೆಯಾಗಿದ್ದಾನೆ” ಪುರುಷನಿಗೆ ಕ್ರಿಸ್ತನು ತಲೆಯಾಗಿದ್ದಾನೆ ಮತ್ತು ಕ್ರಿಸ್ತನಿಗೆ ದೇವರು ತಲೆಯಾಗಿದ್ದಾನೆ. ತಲೆ ಎಂಬುದರ ಅರ್ಥವು ಅಧಿಕಾರದಲ್ಲಿರುವವನು ನಿರ್ದೇಶಕನು ಕ್ರಿಸ್ತನು ದೇವರೊಂದಿಗೆ ಸರಿಸಮಾನನಾಗಿದ್ದಾನೆಂಬುದು ನಮಗೆ ಗೊತ್ತಿದೆ ಆದಾಗ್ಯೂ ಭೂಮಿಯ ಮೇಲಿನ ಆತನ ಜೀವಿತದಲ್ಲಿ ವಿಮೋಚನೆಯ ಸಲುವಾಗಿ, ತನ್ನನ್ನು ತಂದೆ ನಿರ್ದೇಶನ ಮತ್ತು ತಂದೆಯ ಸಮರ್ಪಿಸಿದನು. ಅದೇ ರೀತಿಯಾಗಿ ಪುರುಷ ಮತ್ತು ಸ್ತ್ರೀಯರು ಪರಸ್ಪರ ಅವಲಂಬಿಗಳು ಮತ್ತು ದೇವರ ರಾಜ್ಯದ ಅವಕಾಶಗಳು ಮತ್ತು ಆಶೀರ್ವಾದಗಳನ್ನು ಪಡೆಯುವಾಗ ಅವರು

ಸರಿಸಮಾನರಾಗಿದ್ದಾರೆ. ಆದಾಗ್ಯೂ ದೇವರ ಅಧಿಕಾರ ರಚನೆಯಲ್ಲಿ ಪುರುಷನು ನಾಯಕನಾಗಿದ್ದಾನೆ ಮತ್ತು ದೇವರ ಸರ್ಕಾರವು ಹರಿಯುವ ಚಿಲುಮೆಯಾಗಿದ್ದಾನೆ.

## ಕುಟುಂಬಕ್ಕಾಗಿ ದೇವರ ಅಧಿಕಾರದ ರಚನೆ

**ಎಫೆಸವರಿಗೆ 5:22:23**
**22 ಸ್ತ್ರೀಯರೇ ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮ ನಿಮ್ಮ ಗಂಡಂದಿರಿಗೆ ಅಧೀನರಾಗಿರಿ**
**23 ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ ಕ್ರಿಸ್ತನೋ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ.**

ಮನೆಗೆ ಗಂಡನು ತಲೆಯಾಗಿದ್ದಾನೆ. ದೇವರ ರಾಜ್ಯದ ಸರ್ಕಾರವು ಗಂಡನ ನಾಯಕತ್ವದ ಮೂಲಕವಾಗಿ ಮನೆಗೆ ವಿಸ್ತರಿಸಲ್ಪಡಬೇಕು ಮನೆಯು ಗಂಡನ ನ್ಯಾಯವ್ಯಾಪ್ತಿಯ ಅಧೀನದಲ್ಲಿ ಬರುತ್ತದೆ. ಮನೆಯ ನ್ಯಾಯಡಳಿತದ ಒಳಗೆ ನಡೆಯುವಂತದಕ್ಕೆ ಅವನೇ ಜವಬ್ದಾರನಾಗಿದ್ದಾನೆ. ಅವನು ದೇವರ ಮುಂದೆ ನಿಂತುಕೊಳ್ಳಬೇಕು ಮತ್ತು ಅವನ ಕುಟುಂಬದ ಮುಂದೆ ಅರಸನಾಗಿ, ಯಜಮಾನನಾಗಿ, ನಾಯಕನಂತೆ ಮಧ್ಯಸ್ಥಿಕನಂತೆ, ಮಾರ್ಗದರ್ಶಕ ಮತ್ತು ಶಿಕ್ಷಕನಾಗಿ ನಿಂತುಕೊಳ್ಳಬೇಕು. ಮನೆಗೆ ಗಂಡನು ದೇವರ ಸರ್ಕಾರದ ಹೆಬ್ಬಾಗಿಲು ಆಗಿದ್ದಾನೆ. ಮನೆಯ ತಲೆಯಾಗಿ ಕುಟುಂಬ ಅವನ ಹೆಂಡತಿಯ ಒಂದು ಆತ್ಮಿಕ ಆವರಿಸುವಿಕೆ ಸಂರಕ್ಷಣೆಯ ಸ್ಥಾನದ ಸಾಮರ್ಥ್ಯವನ್ನು ಗಂಡನು ಹೊಂದಿದ್ದಾನೆ ಕರ್ತನಿಗೆ ಎಂಬಂತೆ ಹೆಂಡತಿಯು ಗಂಡನನ್ನು ಗೌರವಿಸಬೇಕು. ಮತ್ತು ಸಮರ್ಪಿಸಬೇಕು. ಹೆಂಡತಿಯ ಶರಣಾಗತಿಯು, ಕ್ರಿಸ್ತನಿಗಾಗಿ ಮಾಡುವಂತೆ ಅವಳ ಗಂಡನಿಗೆ ಸಮರ್ಪಿಸುವಿಕೆ ಮತ್ತು ಪೂಜ್ಯತೆಯನ್ನು ತೋರಿಸುತ್ತದೆ. ಗಂಡನು ತಲೆಯಾಗಿರುವಾಗಿ , ಮನೆಯಲ್ಲಿ ಅವನು " ದೊಡ್ಡ ಯಜಮಾನನಂತೆ" ವರ್ತಿಸಬಾರದು. ಪ್ರಜ್ಞೆಯುಳ್ಳ ರೀತಿಯಲ್ಲಿ ಅವನು ಜೀವಿಸಬೇಕು, ಅವನ ಹೆಂಡತಿಗೆ ಗೌರವಕೊಡಬೇಕು ಯಾಕೆಂದರೆ ದೇವರ ರಾಜ್ಯದಲ್ಲಿ ಇಬ್ಬರು ಸರಿಸಮಾನರು ಮತ್ತು ಜೊತೆ ವಾರಸುದಾರರು ಆಗಿದ್ದಾರೆ.ಗಂಡನು ಹೆಂಡತಿಗೆ ಈ ಜವಬ್ದಾರಿಯನ್ನು ನೆರವೇರಿಸದೆ ಹೊಂದದೆ ಅವನ ಪ್ರಾರ್ಥನೆಗೆ ಅಡ್ಡಿಯುಂಟಾಗುತ್ತದೆ (1ಪೇತ್ರ 3:7).

ಗಂಡನು ತನಗೆ ಕೊಡಲ್ಪಟ್ಟ ಜವಾಬ್ದಾರಿಯನ್ನು ದೇವರ ಅಧಿಕಾರದ ರಚನೆಯಲ್ಲಿ ಸರಿಯಾಗಿ ವಿಸರ್ಜಿಸಬೇಕು. ಇದರಲ್ಲಿ ಸೋತರೆ ಅವನ ತಲೆಯ ( ಅಂದರೆ ಪ್ರಾರ್ಥನೆಗಳ) ಅವನ ಸಂಬಂಧದಲ್ಲಿ ಹಾನಿಯಾಗುತ್ತದೆ. ಅದೇ ರೀತಿಯಾಗಿ ಹೆಂಡತಿಯು ತನ್ನ ಗಂಡನ ಕಡೆಗೆ ದೇವರು ಮನೆಯಲ್ಲಿ ಇರಿಸಲಾದ ಅಧಿಕಾರಕ್ಕೆ ಸರಿಯಾಗಿ ಸಂಬಂಧಿಸಿಕೊಳ್ಳಬೇಕು. ಇದನ್ನು ಮಾಡಲು ಸೋತರೆ ಕರ್ತನಿಗಾಗಿ ಎಂದು ಇದನ್ನು ಮಾಡುವುದಲ್ಲಿ ಮೂಲಭೂತವಾಗಿ ವಿಫಲರಾಗುತ್ತಾರೆ.

ಅದೇ ರೀತಿಯಾಗಿ, ಕರ್ತನಲ್ಲಿ ಮಕ್ಕಳು ಅವರ ತಂದೆ ತಾಯಿಗೆ ವಿಧೇಯರಾಗುವುದು ಮಾಡಬೇಕಾದಂತಹ ಸರಿಯಾದ ವಿಷಯ ಎಂಬುದಾಗಿ ತಿಳಿಯಬೇಕೆಂದು

ಉಪದೇಶಿಸಲ್ಪಟ್ಟಿದ್ದಾರೆ. ಮಕ್ಕಳು ಅವರ ತಂದೆ ಮತ್ತು ತಾಯಿಗೆ ಗೌರವಿಸಬೇಕು, ಅದು ಒಳ್ಳೆಯ ಜೀವಿತದ, ಯೋಗಕ್ಷಮ ಮತ್ತು ದೀರ್ಘಾಯುಷ್ಯದ ಆಶೀರ್ವಾದಗಳನ್ನು ತರುತ್ತದೆ. (ಎಫೆಸದವರಿಗೆ 6:1-3) ಮಕ್ಕಳು ಅವರ ತಂದೆ ತಾಯಿಯಲ್ಲಿ ಇರಿಸಿದ ಅಧಿಕಾರದ ರಚನೆಯನ್ನು ಸರಿಯಾಗಿ ಮನೆಯಲ್ಲಿ ಸಂಬಂಧಿಸಿಕೊಳ್ಳುವುದನ್ನು ಕಲಿಯಬೇಕು. ಸಮಯವು ಕಳೆದಂತೆ ಮಕ್ಕಳ ವಿದ್ಯಾಭ್ಯಾಸ, ತರಬೇತಿ, ಮತ್ತು ತೆರೆದಿರುವಿಕೆಯ ನಿರ್ಧಿಷ್ಟ ವಿಷಯಗಳಲ್ಲಿ ಅವರ ತಂದೆತಾಯಿಗಿಂತ ಅಧಿಕವಾಗಿ ತಿಳಿದುಕೊಳ್ಳುತ್ತಾರೆ. ಆದಾಗ್ಯೂ ಎಷ್ಟು ವಿದ್ಯಾರ್ಹತೆ ಹೊಂದಿದ್ದೀರ ಅಥವಾ ಯಶಸ್ವಿಯಾದ ಯೌವ್ವನಸ್ಥ ಪುರುಷ ಅಥವಾ ಸ್ತ್ರೀಯಾಗಿ ಕಂಡು ಬರಬಹುದು ತಮ್ಮ ತಂದೆತಾಯಿಯ ಕಡೆಗೆ ಗೌರವ, ಪೂಜ್ಯತೆ, ಘನತೆ ಮತ್ತು ಅತ್ಯುನ್ನತ ಅಭಿನಂದನೆಗಳನ್ನು ತೋರಿಸಬೇಕೆಂದು ಸತ್ಯವೇದವು ಉಪದೇಶಿಸುತ್ತದೆ. ಮಕ್ಕಳು ಇದನ್ನು ಮಾಡುವಾಗ, ಅವರು ವಾಗ್ದಾನದ ಆಶೀರ್ವಾದಗಳನ್ನು ಪಡೆದುಕೊಳ್ಳುತ್ತಾರೆ.

ತಂದೆ ತಾಯಂದಿರು, ಅಧಿಕಾರದ ಸ್ಥಾನಮಾನವುಳ್ಳವರಾಗಿ, ದೇವರ ರಾಜ್ಯದ ಸರ್ಕಾರದ ಭಾಗವಾಗಿ, ನಿಮ್ಮ ಮನೆಯ ವಿಷಯಕ್ಕೆ ಬರುವಾಗ ನಿಮ್ಮ ಮಕ್ಕಳನ್ನು ಕರ್ತನ ಮಾರ್ಗದಲ್ಲಿ ಅವರಿಗೆ, ನೋವುಂಟುಮಾಡದೆ ಮತ್ತು ಅವರನ್ನು ನಾಶಮಾಡದೇ ಪೋಷಣೆಯನ್ನು, ಶಿಸ್ತು ಮತ್ತು ತರಬೇತಿಗೊಳಿಸುವ ಜವಬ್ದಾರಿ ಹೊಂದಿರಬೇಕು.

ಕರ್ತನ ದಿನಕ್ಕೆ ಮೊದಲು ತಂದೆಗಳ ಮನಸ್ಸನ್ನು ಮಕ್ಕಳ ಕಡೆಗೂ ಮಕ್ಕಳ ಮನಸ್ಸನ್ನು ತಂದೆಗಳ ಕಡೆಗೂ ತಿರುಗಿಸುವಂತಹ ಸಮಯದಲ್ಲಿ ನಾವು ಜೀವಿಸುತ್ತಿದ್ದೇವೆ. ದೇವರು ಸಂಕಲ್ಪಿಸಿದ್ದಂತೆ ತಂದೆತಾಯಂದಿರು ಮತ್ತು ಮಕ್ಕಳು ಒಬ್ಬರಿಗೊಬ್ಬರು ಸಂಬಂಧಿಸಿಕೊಳ್ಳುವಂತೆ, ಕುಟುಂಬಗಳಲ್ಲಿ ಮತ್ತು ಮನೆಯಲ್ಲಿ ಆತನ ಸರ್ಕಾರದ ಪುನರ್ ಸ್ಥಾಪನೆಯನ್ನು ದೇವರು ತರುತ್ತಿದ್ದಾನೆ. ಇದು ಜರುಗಿಸಲು ವಿಫಲವಾದರೆ, ಪ್ರಪಂಚವನ್ನು ಶಾಪದಿಂದ ಹತ ಮಾಡುತ್ತೇನೆಂಬುದಾಗಿ ವಾಕ್ಯವು ಘೋಷಿಸುತ್ತದೆ (ಮಲಾಕಿಯ 4:6) ಹೇಗಾದರೂ, ಇದು ಜರುಗುವಾಗ, ತಂದೆತಾಯಂದಿರು ಮತ್ತು ಮಕ್ಕಳು ದೇವರು ಸಂಕಲ್ಪಸಿದ ಆಶೀರ್ವಾದಗಳಿಗೆ ಅರ್ಹರಾಗಿ ಕಂಡು ಬರುತ್ತಾರೆ.

## ಸ್ಥಳೀಯ ಸಭೆಗಾಗಿ ದೇವರ ಅಧಿಕಾರದ ರಚನೆ

**ಅಪೊಸ್ತಲರ ಕೃತ್ಯಗಳು 20:28-30.**
**28 ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ**
**29 ನಾನು ಹೋದ ಮೇಲೆ ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವವೆಂದು ನಾನು ಬಲ್ಲೆನು; ಅವು ಹಿಂಡನ್ನು ಕನಿಕರಿಸುವದಿಲ್ಲ.**
**30 ಇದಲ್ಲದೆ ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು**

ಅಪೊಸ್ತಲನಾದ ಪೌಲನು ಎಫೆಸದಲ್ಲಿನ ಹಿರಿಯರಿಗೆ ಮಾತನಾಡುವಾಗ ಅವರ ಸಭಿಕರ ಮೇಲೆ ಮತ್ತು ಅವರ ಸ್ವಂತ ಜೀವಿತಗಳ ಮೇಲೆ ಜಾಗರೂಕತೆಯಿಂದ ನೋಡಿಕೊಳ್ಳಿರಿ ಎಂಬುದಾಗಿ ಉಪದೇಶಿಸಿದನು. ಯೇಸು ಕ್ರಿಸ್ತನ ರಕ್ತದಿಂದ ಖರೀದಿಸಲ್ಪಟ್ಟಂತಹ ದೇವ ಜನರುಗಳನ್ನು ಕಾವಲುಕಾಯಲೂ ಪವಿತ್ರಾತ್ಮನು ಸ್ವತಃ ಅವರನ್ನು ಮೇಲ್ವಿಚಾರಕರಂತೆ (ಎಪಿಸ್ಕೊಪೋಸ್, ಬಿಷಪ್ ) ಸ್ಥಾನಮಾನದಲ್ಲಿರಿಸಿದ ಅವರ ಜವಬ್ದಾರಿಯ ಕುರಿತು ಅವನು ಜ್ಞಾಪಿಸುತ್ತಾನೆ. ಇದನ್ನು "ಘೋರ ತೋಳಗಳಂತೆ" ದೇವರ ಕುರಿಗಳನ್ನು ಸುಲಿಗೆ ಮಾಡುವ ಮತ್ತು ಅವುಗಳನ್ನು ದಾರಿತಪ್ಪಿಸುವುದನ್ನು ಮಾಡುವ ಅಗತ್ಯತೆಯಿದೆ. ಪ್ರತಿಕ್ರಿಯೆಯಾಗಿ ಒಂದು ಸ್ಥಳಿಯ ಸಭಿಕರಲ್ಲಿನ ದೇವರ ಕುರಿಗಳಾದ- ವಿಶ್ವಾಸಿಗಳಿಗೆ ಹೀಗೆ ಉಪದೇಶ ಕೊಡಲ್ಪಟ್ಟಿದೆ. "ನಿಮ್ಮ ಸಭಾನಾಯಕರ ಮಾತನ್ನು ಕೇಳಿರಿ ಅವರಿಗೆ ಅಧೀನರಾಗಿರಿ ಅವರು ಲೆಕ್ಕ ಒಪ್ಪಿಸಬೇಕಾದವರಿಗೆ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ ಅವರು ವ್ಯಸನಪಡದೆ ಸಂತೋಷದಿಂದ ಇದನ್ನು ಮಾಡುವಂತೆ ನೋಡಿರಿ. ಅವರು ವ್ಯಸನದಿಂದಿರುವದು ನಿಮಗೆ ಪ್ರಯೋಜನಕರವಾದದ್ದಲ್ಲ" (ಇಬ್ರಿಯರಿಗೆ 13: 17).

ಸ್ಥಳೀಯ ಸಭೆಯಲ್ಲಿ, ದೇವರ ರಾಜ್ಯದ ಸರ್ಕಾರವು ಸ್ಥಳೀಯ ಸಭೆಯ ಸಭಾಪಾಲರು, ಆತ್ಮಿಕ ಹಿರಿಯರುಗಳ ಮೂಲಕವಾಗಿ ಸಭಿಕರುಗಳ ಮೇಲೆ ಹರಿಯುತ್ತದೆ. ದೇವರ ಜನರು ಅವರ ಸಭಾಪಾಲಕರು ಮತ್ತು ಆತ್ಮಿಕ ನಾಯಕರುಗಳಿಗೆ ಸಮರ್ಪಿಸಿಕೊಳ್ಳುವುದರಿಂದ ಮತ್ತು ಅವರಿಗೆ ಗೌರವ ನೀಡುವುದರಿಂದ ಸರಿಯಾಗಿ ಸಂಬಂಧಿಸಿಕೊಳ್ಳುವುದನ್ನು ಕಲಿಯಬೇಕು( 1ಥೆಸಲೋನಿಕದವರಿಗೆ 5:12:13) ಜನರು ಯಾವಾಗ ಅವರ ನಾಯಕತ್ವದಲ್ಲಿರುವವರೊಂದಿಗೆ ಸರಿಯಾಗಿ ಸಂಬಂಧಿಸಿಕೊಳ್ಳುತ್ತಾರೋ ಅವರು ಆತ್ಮಿಕ ತರಬೇತಿ ಮತ್ತು ಪಾಲುಗಾರಿಕೆಯನ್ನು ಪಡೆದುಕೊಳ್ಳುವುದು ಮಾತ್ರವಲ್ಲದೆ ಅವರ ಜೀವಿತದ ಎಲ್ಲಾ ಕ್ಷೇತ್ರಗಳಲ್ಲಿ ದೇವರ ತೋರ್ಪಡಿಸಲ್ಪಟ್ಟ ಆಶೀರ್ವಾದಗಳನ್ನು ಸಹ ಹೊಂದುವ ಸ್ಥಾನದಲ್ಲಿರಿಸಿಕೊಳ್ಳುತ್ತಾರೆ.

ಅದೇ ನಾಡಿಯಲ್ಲಿ ಸಭಾಪಾಲಕರು ಮತ್ತು ಆತ್ಮಿಕ ನಾಯಕರುಗಳು ಸ್ಥಳಿಯ ಸಭೆಯಲ್ಲಿ ಸಭಿಕರುಗಳಲ್ಲಿ ಆತನ ರಾಜ್ಯದ ಸರ್ಕಾರದ ಆತ್ಮಿಕ ಅಧಿಕಾರ ಸ್ಥಾನಮಾನದಲ್ಲಿ ಅವರನ್ನು ಇರಿಸಿದ್ದರಿಂದ ಅವರಿಂದ ದೇವರು ಏನನ್ನು ಅಪೇಕ್ಷಿಸುತ್ತಾನೆಂಬ ಸ್ಪಷ್ಟವಾದ ನಿರ್ದೇಶನಗಳನ್ನು ಕೊಟ್ಟಿದ್ದಾನೆ. ಹಿರಿಯರು ಕುರುಬರಂತೆ ದೇವರ ಜನರನ್ನು ನೋಡಿಕೊಳ್ಳಬೇಕು, ಅದನ್ನು ಬಲವಂತವಾಗಿ ಮಾಡದೇ ಚಿತ್ತ ಪೂರ್ವಕವಾಗಿ ಮಾಡಬೇಕೆಂದು ಪೌಲನು ಬರೆಯುತ್ತಾನೆ. ಅಪ್ರಾಮಾಣಿಕ ಲಾಭಕ್ಕಾಗಿ ಅಲ್ಲ ಅಥವಾ ಹಣದಾಸೆಯ ಲಾಭಗಳಿಗಾಗಿ ಅಲ್ಲ ಅಥವಾ ದೇವರ ಜನರ ಮೇಲೆ ದೊಡ್ಡ ಯಜಮಾನನಂತೆ ಅಲ್ಲ ಬದಲಿಗೆ ದೇವರ ಜನರಿಗೆ ಮಾದರಿಯಾಗಿರುವಂತೆ ಮಾಡಿರಿ. (1ಪೇತ್ರನು 5:1-4). ಕಿರಿಯವರು ಹಿರಿಯ ಮಂದೆಗೆ ಅಧೀನರಾಗಿ ನಡೆಯಬೇಕು ಮತ್ತು ಪ್ರತಿಯೊಬ್ಬರು ದೀನತೆಯಿಂದ ನಡೆಯಬೇಕು. ಮತ್ತು ಒಬ್ಬರಿಗೊಬ್ಬರು ಅಧೀನರಾಗಿ ನಡೆಯಬೇಕು (1 ಪೇತ್ರನು 5:5).

ಸ್ಥಳೀಯ ಸಭೆಯಲ್ಲಿ ಅಧಿಕಾರದ ರಚನೆಯು ಸರಿಯಾಗಿರುವಾಗ ಮತ್ತು ದೇವರ ವಿನ್ಯಾಸದ ಪ್ರಕಾರವಾಗಿ ಕಾರ್ಯನಿರ್ವಹಿಸುವಾಗ ಮತ್ತು ಸಂಕಲ್ಪಿತ ಕ್ರಮದಲ್ಲಿರುವಾಗಿ ಅಂತಹ ಜನರ ಮಧ್ಯದಲ್ಲಿ ದೇವರ ರಾಜ್ಯದ ಸರ್ಕಾರವು ಹೆಚ್ಚಳವಾಗುತ್ತದೆ ಮತ್ತು ಏಳಿಗೆ ಹೊಂದುತ್ತದೆ. ಅಲ್ಲಿ ಐಕ್ಯತೆಯಿರುತ್ತದೆ. ಒಗಟ್ಟು ಮತ್ತು ಯಾವುದು ಮುರಿಯಲಾಗದ ಒಂದು ಬಲಿಷ್ಟವಾದ ಆತ್ಮನಲ್ಲಿ ಅನ್ಯೋನ್ಯತೆಯಿರುತ್ತದೆ. ಪ್ರತಿಯೊಬ್ಬರು ಅವರ ಸ್ವಂತ ಶ್ರೇಯಾಂಕಗಳು, ಸ್ಥಾನ ಮತ್ತು ಕ್ರಮದಲ್ಲಿ ಕಾರ್ಯನಿರ್ವಹಿಸುತ್ತಾರೆ. ದೇವರ ಅಭಿಷೇಕವು ಉಚಿತವಾಗಿ ತಲೆಯಿಂದ ಆ ಸ್ಥಳೀಯ ಸಭೆಯಲ್ಲಿ ಉಳಿದ ದೇಹದ ಭಾಗಗಳ ಮೇಲೆ ಹರಿಯುತ್ತದೆ. ಸ್ಥಳೀಯ ಸಭೆಯು ಉಜ್ಜೀವನದ, ಆಶೀರ್ವಾದದ ಮತ್ತು ಹರ್ಷದಾಯಕ ಸ್ಥಳವಾಗಿ ಕಂಡು ಬರುತ್ತದೆ. (ಕೀರ್ತನೆಗಳು 133).

## ಕ್ರಿಸ್ತನ ಅಂಗಕ್ಕಾಗಿ ದೇವರ ಅಧಿಕಾರದ ರಚನೆ

**1ಕೊರಿಂಥದವರಿಗೆ 12:28**
**ದೇವರು ತನ್ನ ಸಭೆಯಲ್ಲಿ ಮೊದಲನೇದಾಗಿ ಅಪೊಸ್ತಲರನ್ನು, ಎರಡನೇದಾಗಿ ಪ್ರವಾದಿಗಳನ್ನು, ಮೂರನೇದಾಗಿ ಉಪದೇಶಕರನ್ನು ಇಟ್ಟಿದ್ದಾನೆ. ಆ ಮೇಲೆ ಮಹತ್ಕಾರ್ಯಮಾಡುವ ಶಕ್ತಿಯನ್ನೂ ನಾನಾ ರೋಗಗಳನ್ನು ವಾಸಿಮಾಡುವ ವರವನ್ನೂ ಪರಸಹಾಯ ಮಾಡುವ ಗುಣವನ್ನೂ ಕಾರ್ಯಗಳನ್ನು ನಿರ್ವಹಿಸುವ ಜ್ಞಾನವನ್ನೂ ವಿವಿಧ ವಾಣಿಗಳನ್ನಾಡುವ ವರವನ್ನೂ ಅವರವರಿಗೆ ಕೊಟ್ಟಿದ್ದಾನೆ.**

ದೊಡ್ಡ ಕ್ರಿಸ್ತನ ಅಂಗಕ್ಕಾಗಿ, ಸರ್ಕಾರಿ ವರಗಳನ್ನು ಕ್ರಿಸ್ತನು ಇರಿಸಿದ್ದಾನೆ ಎಂಬುದಾಗಿ ಸತ್ಯವೇದವು ವರ್ಣಿಸುತ್ತದೆ. " ಮೊದಲನೇ" ಎಂಬ ಪದಕ್ಕೆ ಗ್ರೀಕನಲ್ಲಿ "ಪ್ರೋಟೋನ್"( proton)-ಅಂದರೆ ಸಮಯದಲ್ಲಿ ಕ್ರಮ, ಶ್ರೇಯಾಂಕ, ಪ್ರಾಮುಖ್ಯತೆಯಲ್ಲಿ ಮೊದಲನೇಯದು ಎಂಬುದಾಗಿ ಅರ್ಥ, ಅಪೊಸ್ತಲರು, ಗುಣಮಟ್ಟದಲ್ಲಿ, ಆಶೀರ್ವಾದದಲ್ಲಿ ಅಭಿಷೇಕದಲ್ಲಿ, ಸಾಮರ್ಥ್ಯದಲ್ಲಿ ವೈಯಕ್ತಿಕವಾಗಿ "ಮೇಲಣದರ್ಜೆಯವರು" ಎಂಬುದಾಗಿ ಅರ್ಥವಲ್ಲ. ಆ ನಿರ್ಧಿಷ್ಟ ಅಪೊಸ್ತಲರ ಮೂಲಕವಾಗಿ, ಕ್ರಿಸ್ತನ ಅಂಗದಲ್ಲಿನ ದೇವರ ರಾಜ್ಯದ ಸರ್ಕಾರದಲ್ಲಿ ದೇವರ ಸರ್ಕಾರವು ತಲೆಯಾದ ಕ್ರಿಸ್ತನಿಂದ ಉಳಿದ ಅಂಗಗಳಿಗೆ ಆ ಕ್ಷಣದಲ್ಲಿ ಕ್ರಿಸ್ತನು ಸೇವೆ ಸಲ್ಲಿಸುವಂತಹ ಒಂದು ಸ್ಥಾನವನ್ನು ಅವರು ಹೊಂದಿದ್ದಾರೆ ಎಂಬುದು ಇದರ ಅರ್ಥವಾಗಿದೆ. ವಿಶ್ವಾಸಿಗಳಾಗಿ ಎಲ್ಲರೂ ಸರಿ ಸಮಾನರು ಮತ್ತು ಎಲ್ಲಾ ವರಗಳು ಮತ್ತು ಪ್ರಪಂಚಕ್ಕೆ ಅದೇ ಕರ್ತನಾದ ಯೇಸುವನ್ನು ಅವರು ತೋರಿಸುವಂತಹ ಸೇವಾ ಅಭಿಷೇಕವು ಪ್ರಾಮುಖ್ಯವಾಗಿದೆ. ಎಂಬುದಾಗಿ ಅರ್ಥಮಾಡಿಕೊಳ್ಳಬೇಕು. ಆದಾಗ್ಯೂ, ಆತನು ರಚಿಸಿದ ಅಧಿಕಾರದ ರಚನೆಯ ಮೂಲಕವಾಗಿ ಕ್ರಿಸ್ತನ ಅಂಗದಲ್ಲಿ ಕ್ರಿಸ್ತನ ಸರ್ಕಾರವನ್ನು ಸ್ವೀಕರಿಸಬೇಕು ಮತ್ತು ನಾವು ಗುರುತಿಸಬೇಕು.

ಅಂಗದಲ್ಲಿ ದೇವರ ಸರ್ಕಾರದ ಅಧಿಕಾರದ ಸ್ಥಾನವನ್ನು ಹೊಂದಿರುವವರು ಅದರ ಕುರಿತು ಬಡಾಯಿಕೊಚ್ಚಿಕೊಳ್ಳಲು ಶೀರ್ಷಿಕೆಯ ಸ್ಥಾನಮಾನವನ್ನು ಅಥವಾ ಉಳಿದ ದೇವರ ಜನರ ಮೇಲೆ ಹೆಚ್ಚುಗಾರಿಕೆ ಸ್ಥಳದಲ್ಲಿ ಅವರನ್ನು ಇರಿಸಿಕೊಳ್ಳಬಾರದು. ಯಾವಾಗಲು ದೇವರು ಜನರನ್ನು ಅಂತಹ ಪಾರ್ತಗಳಲ್ಲಿ ಇರಿಸುವುದು ಯಾಕೆಂದರೆ ಉಳಿದ ಅಂಗದ ಕಡೆಗೆ ಅವರ ಜವಬ್ದಾರಿಯನ್ನು ನಿರ್ವಹಿಸಬೇಕು ಎಂಬುದಾಗಿ ಇರಿಸುವುದಾಗಿದೆ. ಎಫೆಸದವರಿಗೆ 4-11,12 ರಲ್ಲಿ ಈ ಜವಬ್ದಾರಿಯನ್ನು ವರ್ಣಿಸುತ್ತದೆ. "ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನೂ ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. ನಾವೆಲ್ಲರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವತನಕ ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು,"ಅಪೋಸ್ತಲರು, ಪ್ರವಾದಿಗಳು, ಸಭಾಪಾಲಕರು, ಉಪದೇಶಕರು ಮತ್ತು ಸುವಾರ್ತಿಕರ ಸರ್ಕಾರಿ ಪಾತ್ರಗಳು ಸೇವೆಗಾಗಿ ವಿಶ್ವಾಸಿಗಳನ್ನು ಸಜ್ಜುಗೊಳಿಸುವುದಾಗಿದೆ. ಆದ್ದರಿಂದ ಕ್ರಿಸ್ತ ಅಂಗವು ಆತ್ಮಿಕವಾಗಿ ಮತ್ತು ಅಸಂಖ್ಯಾತವಾಗಿ ಕಟ್ಟಲ್ಪಡಬಹುದು.

ದೇವರ ಜನರು ದೇವರ ಅಧಿಕಾರದ ರಚನೆಗೆ ಸರಿಯಾಗಿ ಸಂಬಂಧಿಸಿಕೊಳ್ಳುವಾಗ ಅವರು ಬಹುಮಾನ ಪಡೆಯುತ್ತಾರೆ. ಯಾರಾದರೂ ಒಬ್ಬ ಪ್ರವಾದಿಯನ್ನು ಅವನು ಒಬ್ಬ ಪ್ರವಾದಿಯಾಗಿರುವುದರಿಂದ ಗೌರವಿಸಿದರೆ ಪ್ರವಾದಿಯ ಬಹುಮಾನವನ್ನು ಪಡೆಯುತ್ತಾರೆ.

## ಕೆಲಸದ ಸ್ಥಳಕ್ಕಾಗಿ ದೇವರ ಅಧಿಕಾರದ ರಚನೆ.

**ಎಫೆಸದವರಿಗೆ 6:5-9**
**5 ದಾಸತ್ವದಲ್ಲಿರುವವರೇ, ಈ ಲೋಕದಲ್ಲಿ ನಿಮಗೆ ಯಜಮಾನರಾಗಿರುವವರಿಗೆ ಕ್ರಿಸ್ತನಿಗೆಂದು ಮನೋಭೀತಿಯಿಂದ ನಡುಗುವವರಾಗಿಯೂ ಸರಳ ಹೃದಯವರಾಗಿಯೂ ವಿಧೇಯರಾಗಿರ್ರಿ**
**6 ಮನುಷ್ಯರನ್ನು ಮೆಚ್ಚಿಸುವವರು ಮಾಡುವ ಪ್ರಕಾರ ಯಜಮಾನರು ನೋಡುತ್ತಿರುವಾಗ ಮಾತ್ರ ಸೇವೆ ಮಾಡದೆ ಕ್ರಿಸ್ತನ ದಾಸರಿಗೆ ತಕ್ಕ ಹಾಗೆ ದೇವರ ಚಿತ್ತವನ್ನು ಮನಃ ಪೂರ್ವಕವಾಗಿ ನಡಿಸಿರಿ.**
**7 ಮನುಷ್ಯರಿಗೋಸ್ಕರವಲ್ಲ ಕರ್ತನಿಗೋಸ್ಕರ ಸೇವೆ ಮಾಡುತ್ತೇವೆಂದು ಚಿತ್ತಪೂರ್ವಕವಾಗಿ ಸೇವೆ ಮಾಡಿರಿ**
**8 ಯಾಕೆಂದರೆ ಒಬ್ಬನು ದಾಸನಾಗಲಿ ಸ್ವತಂತ್ರನಾಗಲಿ ತಾನು ಯಾವ ಸತ್ಕಾರ್ಯವನ್ನು ಮಾಡುತ್ತಾನೋ ಅದರ ಪ್ರತಿಫಲವನ್ನು ಕರ್ತನಿಂದ ಹೊಂದುವನೆಂಬದನ್ನು ನೀವು ತಿಳಿದವರಾಗಿಯೇ ಇದ್ದೀರಿ**

**9 ಯಜಮಾನರೇ ನಿಮ್ಮ ಕೈ ಕೆಳಗಿರುವ ದಾಸರ ವಿಷಯದಲ್ಲಿ ಅದೇ ರೀತಿಯಾಗಿ ನಡೆಯಿರಿ ಪರಲೋಕದಲ್ಲಿ ನಿಮಗೂ ಅವರಿಗೂ ಯಜಮಾನನಾಗಿರುವಾತನು ಇದ್ದಾನೆಂತಲೂ ಆತನಲ್ಲಿ ಪಕ್ಷಪಾತವಿಲ್ಲವೆಂತಲೂ ತಿಳಿದು ನಿಮ್ಮ ದಾಸರನ್ನು ಬೆದರಿಸುವ ಪದ್ಧತಿಯನ್ನು ಬಿಟ್ಟುಬಿಡಿರಿ.**

ದೇವರ ರಾಜ್ಯದ ಸರ್ಕಾರವು ಕೆಲಸದಸ್ಥಳದಲ್ಲಿ ಚಾಲ್ತಿಯಲ್ಲಿರುವ ಅಧಿಕಾರ ರಚನೆಗಳು ಮೂಲಕ ಹರಿಯುತ್ತದೆ. ಕೆಲಸಗಾರರಾಗಿರುವ ನಾವು, ಕಾರ್ಯಗಳನ್ನು ಯಥಾರ್ಥವಾಗಿ, ಕರ್ತನಿಗಾಗಿ ಕರುಣೆಯಿಂದಲೋ ಎಂಬಂತೆ ಇರಬೇಕು, ಯಾರನ್ನೋ ಮೆಚ್ಚಿಸುವ ರೀತಿಯಲ್ಲಿರಬಾರದು, ನಮಗೆ ತಿಳಿದದೆ ಏನೆಂದರೆ ಪ್ರತಿಫಲವು ನಮಗೆ ದೇವರಿಂದಲೇ ದೊರೆಯುತ್ತದೆಂದು. ಒಬ್ಬ ಯಜಮಾನನು ತಾನೇ ಯಾರೇ ಇದ್ದರೂ , ಅವರು ಅನ್ಯಾಯಗರರೋ ನ್ಯಾಯವಂತರೋ, ಅಥವಾ ನಮ್ಮ ಕಾರ್ಯಾಲಯದಲ್ಲಿ ಯಾವುದೇ ಕೆಟ್ಟ ರೀತಿಯ ಕಾರ್ಯಗಳನ್ನು ಮಾಡುವವರಾಗಿದ್ದರೂ, ನಾವು “ಕ್ರಿಸ್ತನ ಕೆಲಸಗಾರ”ರಾಗಿ ಇರುವಲ್ಲಿ ಮತ್ತು ಉನ್ನತ ಸ್ಥಾನದಲ್ಲಿ ಇದ್ದು, ದೇವರು ನಮಗೆ ಆ ದುಷ್ಟ ಕೆಲಸದ ಬಾಸ್‌ಮುಂದಾಗಲೀ ಅನ್ಯಾದಮುಂದಾಗಲೀ ನಮಗೆ ಜಯವನ್ನು ಕೊಡುವನು. ಯೋಸೆಫನ ವಿಷಯದಲ್ಲಿ ಆಲೋಚಿಸಿರಿ, ಆತನು ದೋಷಾರೋಪಣೆಮಾಡಲ್ಪಟ್ಟನು ಮತ್ತು ಕೆಳದರ್ಜೆಗೂ ಇಳಿಸಲ್ಪಟ್ಟನು (ಆದಿಕಾಂಡ39).ಯೋಸೆಫನು ಕೆಳಮಟ್ಟದಲ್ಲಿರುವಾÀಗ ಮಾತ್ರವೇ ಅನುಗ್ರಹವನ್ನು ಹೊಂದಿಕೊಳ್ಳದೇ ದೇವರು ಶೀಘ್ರವಾಗಿ ಮಧ್ಯಪ್ರವೇಶಿಸಿದನು ಮತ್ತು ಯೋಸೆಫನು ಸಂಸ್ಥೆಯ ಏಣಿಯನ್ನು ಹಲವಾರು ರಂಗಗಳನ್ನು ದಾಟಿ ನೇರವಾಗಿ ಉಪಾಧ್ಯಕ್ಷ ಹುದ್ದೆಗೆ ಸೇರಿಸಲ್ಪಟ್ಟನು, ದೇವರು ಮಾತ್ರ ಇಂತಹ ಕೆಲಸವನ್ನು ಮಾಡಲು ಸಾಧ್ಯ. ದಾವಿದನ ಜೀವಿತದಲ್ಲೂ ಹಾಗೆ ಆಯಿತು, ಆತನು ಅನೇಕ ಕಷ್ಟ-ನಷ್ಟಗಳನ್ನು ಸೌಲನಿಂದ ಎದುರಿಸಲ್ಪಟ್ಟನು ಆದರೂ ಸೌಲನಿಗೆ ನಂಬಿಗಸ್ತನಾಗಿಯೇ ಇದ್ದನು. ಇಸ್ರಾಯೇಲ್ ಎಂದೂ ಕೇಳರಿಯದ ಇರುವ ರೀತಿಯ ಶ್ರೇಷ್ಠ ರಾಜನಾದನು.

ನಮಲ್ಲಿಯೂ ಅನೇಕರು ಕೆಲಸದ ಸ್ಥಳಗಳಲ್ಲಿ ಅಧೀಕಾರದ ಸ್ಥಾನಗಳಲ್ಲಿದ್ದೇವೆ ನಮಗೆ ವರದಿ ಮಾಡುವ ಅಧೀನ ಅಧಿಕಾರಿಗಳು ಇರುತ್ತಾರೆ.ದೇವರರಾಜ್ಯ ಸರ್ಕಾರದ ಅಭಿವ್ಯಕ್ತಿಯಲ್ಲಿ ನಾವೂ ಒಬ್ಬರೆಂದು ಅರ್ಥಮಾಡಿಕೊಳ್ಳಬೇಕು.ಮತ್ತು ದೇವರನ್ನು ಪ್ರತಿನಿಧಿಸುವ ಕಾರ್ಯಗಳನ್ನು ನಾವು ಮಾಡಬೇಕು, ಯಾವುದೇ ಪಕ್ಷಪಾತವಿಲ್ಲದೇ, ಕರುಣೆಯಿಂದ, ನ್ಯಾಯದಿಂದ ಮತ್ತು ಬೆದರಿಕೆಎಲ್ಲದೇ ಮಾಡಬೇಕು.

## ನಾಗರಿಕ ಸರ್ಕಾರಕ್ಕಾಗಿ ದೇವರ ಪ್ರಾಧಿಕಾರ ರಚನೆ.

ಎರಡು ಸರ್ಕಾರಗಳಲ್ಲಿ ನಾವು ಇದ್ದೇವೆ- ದೇವರರಾಜ್ಯದ ಸರ್ಕಾರ ಮತ್ತು ಭೂಮಿಯಲ್ಲಿರುವ ನಮ್ಮ ದೇಶ ಮತ್ತು ರಾಜ್ಯದ ನಾಗರಿಕ ಸರ್ಕಾರ. ಜಾರಿಯಲ್ಲಿರುವ ನಾಗರಿಕ ಸರ್ಕಾರದ ಮೂಲಕ ನಮ್ಮ ಲೋಕದಲ್ಲಿ ವ್ಯಕ್ತಪಡಿಸಲಾಗಿರುವ ದೇವರರಾಜ್ಯ ಸರ್ಕಾರ ಎಂದು ನಾವು ಅರ್ಥಮಾಡಿಕೊಳ್ಳಬೇಕು.

ಕರ್ತನಾದ ಯೇಸುವನ್ನು ತಪ್ಪಿನಲ್ಲಿ ಸಿಕ್ಕಿಸಲು ಫರಿಸಾಯರು ಪ್ರಯತ್ನಪಟ್ಟ ವಿಷಯವನ್ನು ನಾವು ಸತ್ಯವೇದದಲ್ಲಿ ನೋಡಬಹುದು. ಆತನ ಬಳಿಗೆ ಬಂದು ಆತನು ಸತ್ಯವನ್ನೇ ಮಾತನಾಡುವುದರಿಂದ ಮತ್ತು ಮನುಷ್ಯರಿಗೆ ಭಯಪಡದೇ ಇರುವುದನ್ನು ಅರಿತ ಆ ಫರಿಸಾಯರುಗಳು ಈ ಪ್ರಶ್ನೆಯೊಂದಿಗೆ ಬರುತ್ತಾರೆ, "ಕೈಸರನಿಗೆ ಕಂದಾಯ ಕೊಡುವುದು ಸರಿಯೋ ಅಲ್ಲವೋ?" ಇದುವೇ ಒಂದು ಕುತಂತ್ರದ ಉಪಾಯದ ಪ್ರಶ್ನೆಯಾಗಿತ್ತು. ಒಂದುವೇಳೆ ಯೇಸುವು 'ಹೌದು' ಎಂದು ಹೇಳಿದ್ದರೆ, ಯೇಸುವು ರೋಮನ್ನರ ಪರವಾಗಿ ಮಾತನಾಡುತ್ತಾನೆಂದು ಹೇಳಿ ಆತನನ್ನು ದೋಷಿಯನ್ನಾಗಿ ಮಾಡುತ್ತಿದ್ದರು. 'ಇಲ್ಲ' ಎಂದು ಹೇಳಿದ್ದರೆ, ಫರಿಸಾಯರು ರೋಮನ್ನರ ಸರ್ಕಾರದ ವಿರುದ್ಧ ಹೇಳಿಕೆ ನೀಡುತ್ತಾನೆಂದು ರೋಮನ್ನರಿಗೆ ವಿರುದ್ಧವಾಗಿ ಎತ್ತಿ ಕಟ್ಟುತ್ತಿದ್ದರು ಮತ್ತು ರೋಮ್ ಸೈನಿಕರಿಗೆ ಒಪ್ಪಿಸಿಬಿಡುತ್ತಿದ್ದರು. ಆದರೆ ಯೇಸುವು ಎರಡು ರೀತಿಯಲ್ಲೂ ಹೇಳದೇ ಸಿಕ್ಕಿಕೊಳ್ಳಲಿಲ್ಲ, ಮುಂದಿನ ಎಲ್ಲಾ ವಿವರಣೆಯು ಹೀಗೆ ಹೇಳುತ್ತದೆ: "ಯೇಸು ಅವರ ಕೆಡುಕನ್ನು ಅರಿತುಕೊಂಡವನಾಗಿ- ಕಪಟಿಗಳೇ ನನ್ನನ್ನು ಯಾಕೆ ಪರೀಕ್ಷೆಮಾಡುತ್ತೀರಿ? ತೆರಿಗೆಗೆ ಕೊಡುವ ನಾಣ್ಯವನ್ನು ನನಗೆ ತೋರಿಸಿರಿ ಅನ್ನಲು ಅವರು ಆತನಿಗೆ ಒಂದು ಹಣವನ್ನು ತಂದುಕೊಟ್ಟರು. ಆತನು-ಈ ತಲೆಯೂ ಈ ಮುದ್ರೆಯೂ ಯಾರದು ಎಂದು ಕೇಳಿದ್ದಕ್ಕೆ ಅವರು- ಕೈಸರನದ್ದು ಅಂದರು. ಆಗ ಆತನು ಅವರಿಗೆ- ಹಾಗಾದರೆ ಕ್ಯಸರನದನ್ನು ಕ್ಯಸರನಿಗೆ ಕೊಡಿರಿ; ದೇವರದನ್ನು ದೇವರಿಗೆ ಕೊಡಿರಿ ಎಂದು ಹೇಳಿದನು. ಅವರು ಈ ಮಾತನ್ನು ಕೇಳಿ ಆಶ್ಚರ್ಯಪಟ್ಟು ಆತನನು ಬಿಟ್ಟುಹೋದರು"(ಮತ್ತಾಯ. 22:15–22). ಮೂಲಭೂತವಾಗಿ, ಯೇಸುವು ನಮಗೆ ಇಲ್ಲಿನ ಸರ್ಕಾರಕ್ಕೆ ಕಂದಾಯವನ್ನು ಮತ್ತು ಯಾವುದೇ ಸರ್ಕಾರ ಅಥವಾ ಆಡಳಿತವಿದ್ದರೂ ಅದಕ್ಕೆ ಸಲ್ಲತಕ್ಕದ್ದನ್ನು ಸಲ್ಲಿಸಲು ಹೇಳುತ್ತಿದ್ದಾರೆ ಪೌಲನು ಹೀಗೆ ವಿವರಿಸುತ್ತಾನೆ, "ಪ್ರತಿ ಮನುಷ್ಯನು ತನ್ನ ಮೇಲಿರುವ ಅಧಿಕಾರಿಗಳಿಗೆ ಅಧೀನರಾಗಿರಲಿ; ಯಾಕಂದರೆ ದೇವರಿಂದ ಹೊರತು ಒಬ್ಬರಿಗೂ ಅಧಿಕಾರವಿರುವುದಿಲ್ಲ; ಇರುವ ಅಧಿಕಾರಿಗಳು ದೇವರಿಂದ ನೇಮಿಸಲ್ಪಟ್ಟರು" (ರೋಮಾ.13:1)

ವಿಶ್ವಾಸಿಗಳಾದ ನಾವು ಸರ್ಕಾರದ ಅಧಿಕಾರಿಗಳನ್ನು ದೇವರಿಂದ ನೇಮಿಸಲ್ಪಟ್ಟವರೆಂದು ಗಮನಿಸಬೇಕು. ಪೌಲನು ಮುಂದೆ ಹೀಗೆ ವಿವರಿಸುತ್ತಾನೆ, "ಆದದರಿಂದ ಅಧಿಕಾರಕ್ಕೆ ಎದುರುಬೀಳುವವನು ದೇವರ ನೇಮಕವನ್ನು ಎದುರಿಸುತ್ತಾನೆ; ಎದುರಿಸುವವರು ಶಿಕ್ಷೆಗೊಳಗಾಗುವರು. ಕೆಟ್ಟಕೆಲಸ ಮಾಡುವವನಿಗೆ ಅಧಿಪತಿಯಿಂದ ಭಯವಿರುವುದೇ ಹೊರತು ಒಳ್ಳೇ ಕೆಲಸ ಮಾಡುವವನಿಗೆ ಭಯವೇನೂ ಇಲ್ಲ. ನೀನು ಅಧಿಕಾರಿಗೆ ಭಯಪಡದೇ ಇರಬೇಕೆಂದು ಅಪೇಕ್ಷಿಸುತ್ತೀಯೋ? ಒಳ್ಳೇದನ್ನು ಮಾಡು; ಆಗ ಆ ಅಧಿಕಾರಿಯಿಂದಲೇ ನಿನಗೆ ಹೊಗಳಿಕೆಯುಂಟಾಗುವುದು

(ರೋಮಾ.13:2–7). ಯಾರಾರು ನಾಗರಿಕ ಸರ್ಕಾರದಲ್ಲಿದ್ದರೋ ಅವರುಗಳನ್ನು "ದೇವರ ಸೇವಕರು" ಎಂದು ಸೂಚಿಸಲಾಗುತ್ತದೆ. ಪೌಲನು ರೋಮನ್ ಸರ್ಕಾರದಲ್ಲಿದ್ದ ವಿಶ್ವಾಸಿಗಳಿಗೆ ಬರೆಯುತ್ತಾನೆ, ಅಲ್ಲಿದ್ದ ಅನೇಕ ಅಧಿಕಾರಿಗಳು ನಾಯಕರುಗಳು ವಿಗ್ರಹಾರಾಧಕರು, ದಬ್ಬಾಳಿಕೆಮಾಡುವವರು, ಕೊಲೆಗಾರರು, ದಂಗೆಕೋರರು ಆಗಿದ್ದರು.

ಆದಾಗ್ಯೂ ಪೌಲನು ರೋಮ್‌ನ ವಿಶ್ವಾಸಿಗಳಿಗೆ, ಅವರಿರುವ ದುಷ್ಟ ಆಡಳಿತ ಸರ್ಕಾರದಲ್ಲಿಯೂ ದೇವರ ರಾಜ್ಯವನ್ನು ಹೇಗೆ ನೋಡಬೇಕೆಂದು ಕರೆಯುತ್ತಾನೆ.

ಯಾವುದೇ ಸರ್ಕಾರ, ಯಾವುದೇ ಸರ್ಕಾರದ ವ್ಯವಸ್ಥೆ, ಅಧಿಕಾರದಲ್ಲಿದ್ದು, ಅನೇಕ ನಿಬಂಧನೆಗಳನ್ನು ಮಾಡಿ, ಅನೇಕ ರೀತಿಯ ಕೆಟ್ಟ ಕಾರ್ಯಗಳನ್ನೆಸಗುತ್ತಾ ಇರುವವರಿದ್ದಾಗ್ಯೂ ವಿಶ್ವಾಸಿಗಳಾದ ನಾವು ನಾಗರಿಕ ಸರ್ಕಾರದ ಅಧಿಕಾರಿಗಳಿಗೆ ಸಲ್ಲಿಸತಕ್ಕ ಗೌರವವನ್ನು ಸಲ್ಲಿಸಬೇಕು.

ನಾವು ಒಂದನ್ನು ತಿಳಿದಿರಬೇಕು, ದೇಶವು ಅರ್ಹತೆಯುಳ್ಳ ಸರ್ಕಾರವನ್ನು ಸ್ವೀಕರಿಸುತ್ತದೆ. ದೇಶದಲ್ಲಿ ಭ್ರಷ್ಟರಾದವನ್ನು ಹೊಂದಿಕೊಂಡಿದ್ದು, ಅವರಿಗೆ ನೈತಿಕತೆಯ ಯಾವುದೇ ಬೆಲೆತಿಳಿದಿರದೇ ಇರುವಂತಹದ್ದಾಗಿದ್ದರೆ ಅದರಂತೆಯೇ ನಾಯಕರುಗಳೂ ಕೂಡ ಅದರಂತೆಯೇ ಮಾಡುವವರಾಗಿರುತ್ತಾರೆ ಯಾಕೆಂದರೆ ಅವರ ಮಧ್ಯದಿಂದಲೇ ನಾಯಕರುಗಳು ಬೆಳೆದವರಾಗಿರುತ್ತಾರಾದ್ದರಿಂದಲೇ. ಹೇಗೂ ಪ್ರಜೆಗಳು ಬದಲಾವಣೆಹೊಂದಿದರೆ, ಸರ್ಕಾರವೂ ಬದಲಾವಣೆಗೊಳ್ಳುತ್ತದೆ. ಸರ್ಕಾರವು ಅದು ತಾನು ಪ್ರತಿನಿಧಿಸುವ ಜನರ ಅಭಿವ್ಯಕ್ತಿಯಾಗಿದೆ. ವಿಶ್ವಾಸಿಗಳಾಗಿರುವ ನಾವು, ನಮ್ಮ ಭೂಮಿಯ ನಿಯಮಗಳನ್ನು ಪಾಲನೆಮಾಡಬೇಕು, ಕಂದಾಯ ಕಟ್ಟಬೇಕು, ಪ್ರಸ್ತುತ ಅಧಿಕಾರದಲ್ಲಿರುವ ಅಧಿಕಾರಿಗಳನ್ನು ಗೌರವಿಸಬೇಕು. ಅದಕ್ಕನ್ನುಸಾರವಾಗಿಯೇ ನಾವು ಸರ್ಕಾರಕ್ಕಾಗಿಯೂ ಪ್ರಾರ್ಥಿಸಬೇಕು (1ತಿಮೊಥೆಯನಿಗೆ 2:1–3). ಸರ್ಕಾರದಲ್ಲಿ ಪ್ರಭಾವಬೀರುವ ಕಾನೂನುಗಳ ಅಡಿಯಲ್ಲಿ ನಮ್ಮ ಮತ ಚಲಾಯಿಸಲು ಮತ್ತು ಸ್ಥಾನಗಳನ್ನು ಆಕ್ರಮಿಸಲು ನಮ್ಮ ಅಧಿಕಾರವನ್ನು ಚಲಾಯಿಸಬೇಕು, ಅದರಿಂದ ನಮ್ಮಲ್ಲಿ ನ್ಯಾಯಯುತ ಸರ್ಕಾರವು ಇರುತ್ತದೆ.

“ಶಿಷ್ಟರ ವೃದ್ಧಿ ಜನರಿಗೆ ಉಲ್ಲಾಸ; ದುಷ್ಟನ ಆಳಿಕೆ ಜನರಿಗೆ ನರಳಾಟ”(ಜ್ಞಾನೋಕ್ತಿ. 29:2). ಇಲ್ಲಿ ಸ್ವಲ್ಪ ಮಟ್ಟಿಗೆ ವ್ಯತಿರಿಕ್ತಗೊಳಿಸುವ ಮೂಲಕ ನಾವು ಅದನ್ನು ಇಷ್ಟಪಡಬಾರದು ಎಂದು ಅರ್ಥಮಾಡಿಕೊಳ್ಳಬೇಕು, ಐಹಿಕ ಸರ್ಕಾರದಂತೆಯೇ ದೇವರ ರಾಜ್ಯದ (ದೇವಸರ್ಕಾರ) ಆಡಳಿತವು ಇರುತ್ತದೆ. ಅನೇಕರು ನಾವು ನಮ್ಮ ದೇಶದ ಪ್ರಜಾಪ್ರಭುತ್ವದ ವ್ಯವಸ್ಥೆ ಕೈಗೆಳಗೆ ಇರುವ ನಾವು ಅದೇ ರೀತಿಯಲ್ಲೇ ದೇವರ ರಾಜ್ಯದ ಆಡಳಿತದಲ್ಲಿಯೂ ನಮ್ಮ ಮನಸ್ಥಿತಿಗಳನ್ನು ಹೊಂದಿಸಿಕೊಳ್ಳಬೇಕು. ಇದು ಯಾವಾಗಲೂ ಒಳ್ಳೆಯದ್ದಲ್ಲ. ದೇವರು ಹೇಳಿದ್ದನ್ನು ಮಾಡಬೇಕೇ ಅಥವಾ ಬೇರೆ ಏನಾದರೂ ಮಾಡಬೇಕೇ ಎಂದು ಯಾರೂ ಮತ ಚಲಾಯಿಸುವುದಿಲ್ಲ. ದೇವರು ಯೆಹೂಶುವನಿಗೆ, ಯೆರಿಕೋ ಕೋಟೆಯನ್ನು ಸ್ವಾಧೀನಪಡಿಸಲು ಒಬ್ಬೊಬ್ಬ ಇಸ್ರಾಯೇಲನು ಏಳು ದಿನದಂತೆ ಏಳು ಸಾರಿಯಂತೆ ಪ್ರತಿದಿನವೂ ಸುತ್ತುಹಾಕಬೇಕೆಂದು ಸೇನಾ ವಿಧಿವಿಧಾನವನ್ನು ನೇಮಿಸಿದಾಗ ಯಾರೂ ಕೂಡಾ ಇದು ಸರಿಯಾದ ನಿರ್ಣಯವೋ ಏನೋ ಎಂದು ಮತ ಚಲಾಯಿಸಲಿಲ್ಲ. ದೇವರು ನುಡಿದಿದ್ದಾನೆ ಈಗ ಪ್ರತಿಯೊಬ್ಬನು ವಿಧೇಯನಾಗಲೇಬೇಕು. ಹಾಗೆಯೇ ನಮ್ಮ ಈ ದಿನಗಳಲ್ಲಿಯೂ ದೇವರಿಂದ ಸರಿಯಾದ ಆಜ್ಞೆಹೊರಡುವಾಗ, ನಾವು ಅನುಸರಿಸಬೇಕು, ಜನಪ್ರಿಯತೆಯನ್ನು ಲೆಕ್ಕಿಸದೇ ಅಭಿಪ್ರಾಯ, ಅಥವಾ ಸಮುದಾಯ ಆದ್ಯತೆಗಳು ಅಥವಾ ಸಾಮೂಹಿಕ ಮನಸ್ಸುಗಳು ಇವುಗಳನ್ನೂ ಲೆಕ್ಕಿಸದೇ ಆತನ ಆಜ್ಞೆಗಳನ್ನು

ಅನುಸರಿಸಬೇಕು. ನಾಯಕತ್ವದಲ್ಲಿರುವವರ ಮೇಲೆ ದೊಡ್ಡ ಜವಾಬ್ದಾರಿಯನ್ನು ಇರಿಸಿ ಅವರು ಸರಿಯಾಗಿ ಕೇಳುವಂತೆ ಖಚಿತಪಡಿಸಿಕೊಳ್ಳಲು ಇದು ಸಹಾಯಕಾರಿಯಾಗಿದೆ.

ದೇವರಿಂದ, ಆತನ ಮಾರ್ಗದರ್ಶನಗಳನ್ನು ಹೊಂದಿಕೊಂಡು ಆತನ ಜನರಿಗೆ ಸರಿಯಾಗಿ ತಲುಪಿಸಲು ಆತನೊಂದಿಗೆ ವ್ಯವಹರಿಸಿರಿ. ಹೇಗೋ ಈ ಘಳಿಗೆ ಮತ್ತು ದಿನದಲ್ಲಿ ಆತನ ನಾಯಕತ್ವ ಕ್ರಿಸ್ತನ ದೇಹದಲ್ಲಿದೆ!

ಕೆಲವೊಮ್ಮೆ ಸನ್ನಿವೇಶಗಳು ಎದುರಾಗುತ್ತವೆ ಏನೆಂದರೆ ಈ ಐಹಿಕ ಸರ್ಕಾರ ದೇವರ ಸರ್ಕಾರದೊಂದಿಗೆ ಘರ್ಷಣೆಯಾಗುವುದು. ಅಂತಹ ಸಂದರ್ಭಗಳಲ್ಲಿ, ನಾವು ಜ್ಞಾನದಿಂದ ಮಾತನಾಡಿ ದೇವರ ಸರ್ಕಾರದಪರವಾದ ನಮ್ಮ ನಿಲುವನ್ನು ಬಿಟ್ಟುಕೊಡಬಾರದು. ಪೇತ್ರ ಯೋಹಾನರು ಮಹಾಯಾಜಕರ ಮುಂದೆ ನಿಂತಾಗ ಯೇಸುವಿನ ವಿಷಯವಾಗಿ ಬೋಧಿಸಲೂಬಾರದು ಮತ್ತು ಸಾರಲೂಬಾರದೆಂದು ಖಡಾಖಂಡಿತವಾಗಿ ಹೇಳಲ್ಪಟ್ಟರು. ಆದರೆ ಅವರು, "ದೇವರ ಮಾತನ್ನು ಕೇಳುವುದಕ್ಕಿಂತಲೂ ನಿಮ್ಮ ಮಾತನ್ನು ಕೇಳುವುದು ದೇವರ ಮುಂದೆ ನ್ಯಾಯವೋ ಏನು? ನೀವೇ ತೀರ್ಪುಮಾಡಿಕೊಳ್ಳಿರಿ" (ಅಪೊಸ್ತಲರಕೃತ್ಯಗಳು 4:19). ತದನಂತರದಲ್ಲಿ ತಿರುಗಿ ಮತ್ತೊಮ್ಮೆ ಪೇತ್ರ-ಯೋಹಾನರು ಮಹಾಸಭೆಯ ಮುಂದೆ ಕರೆಯಲ್ಪಟ್ಟು ತಾವು ಎಸಗಿದ ಉಲ್ಲಂಘನೆಯನ್ನು ವಿಚಾರಿಸುವಾಗ, "ಮನುಷ್ಯರಿಗಿಂತಲೂ ದೇವರಿಗೆ ಹೆಚ್ಚಾಗಿ ವಿಧೇಯರಾಗಬೇಕಲ್ಲಾ" (ಅಪೊಸ್ತಲರಕೃತ್ಯಗಳು. 5:29).

ಕರ್ತನಾದ ಯೇಸು ತಾನು ಶಿಲುಬೆಗೆ ಹಾಕುವುದಕ್ಕೂ ಮುನ್ನ ಪಿಲಾತನ ಮುಂದೆ ಕರೆಯಲ್ಪಟ್ಟಾಗ, ಪಿಲಾತನು, "ನಿನ್ನನ್ನು ಶಿಲುಬೆಗೆ ಹಾಕುವುದಕ್ಕೂ ಅದರಿಂದ ಬಿಡಿಸಲಿಕ್ಕೂ ನನಗೆ ಅಧಿಕಾರ ಉಂಟೆಂದು ನಿನಗೆ ತಿಳಿಯದೋ?" ಅನ್ನಲು ಯೇಸು, ಮೇಲಣಿಂದ ನಿನಗೆ ಕೊಡಲ್ಪಡದಿದ್ದರೆ ನ್ನನ ಮೇಲೆ ನಿನಗೆ ಯಾವ ಅಧಿಕಾರವೂ ಇರುತ್ತಿರಲಿಲ್ಲ. ಆದಕಾರಣ ನನ್ನನ್ನು ನಿನಗೆ ಒಪ್ಪಿಸಿದವನಿಗೆ ಹೆಚ್ಚಿನ ಪಾಪವುಂಟು ಅಂದನು"(ಯೋಹಾನ. 19:10,11).

ಪಿಲಾತನು ತನು ಇರುವ ಸ್ಥಾನದಲ್ಲಿದ್ದಾನೆಂದು ಯೇಸು ಒಪ್ಪಿಕೊಂಡನು, ಯಾಕೆಂದರೆ ದೇವರು ಅದನ್ನು ಹಾಗೆ ಅನುಮತಿಸಿದ್ದಾನೆ. ಪಿಲಾತನು ಏನೇ ಇರಲಿ ನಿರ್ಧಾರವು ನಡೆಯುತ್ತಿದೆ, ಪಿಲಾತನ ಕಡೆಯಿಂದ ಯಾವುದೇ ಪಾಪವಿಲ್ಲ ಎಂದು ಯೇಸು ಗುರುತಿಸಿದನು. ಆದರೆ ಪಿಲಾತನು ತನ್ನ ಗದ್ದುಗೆಯ ದೆಸೆಯಿಂದಾಗಿ ನಿರ್ಧರಿಸಬೇಕಾಯಿತು. ಹೇಗೂ ಯೇಸುವನ್ನು ಪಿಲಾತನಿಗೊಪ್ಪಿಸಿಕೊಟ್ಟ ಯೂದನು, ಮಹಾಯಾಜಕರು ಮತ್ತು ಜನಸಮೂಹಗಳಿಗೆ ಹೆಚ್ಚಿನಪಾಪವಿದ್ದದ್ದು. ಅದ್ಭುತ ಸಂಗತಿಏನೆಂದರೆ, ಪಿಲಾತನ ಸ್ಥಾನ ಮೇಲಿನಿಂದ ನೀಡಲಾಗಿದೆ ಮತ್ತು ದೇವರಿಂದ ಅನುಮತಿಸಲಾಗಿದೆ ಎಂದು ಯೇಸು ಅಂಗೀಕರಿಸಿದರು. ಯೇಸು ಪಿಲಾತನು ಯಾರೆಂಬುದನ್ನು ಅಥವಾ ಅವನು ರೋಮನ್ ಸರ್ಕಾರದ ರಚನೆಯಲ್ಲಿ ಹೊಂದಿದ್ದ ಸ್ಥಾನವನ್ನು ಯಾವುದೇ ರೀತಿಯಲ್ಲಿ ಅಪಮೌಲ್ಯಗೊಳಿಸಲಿಲ್ಲ. ನಮಗಿದು ಪಾಠವಾಗಿದೆ, ಸರ್ಕಾರದ ಅಧಿಕಾರದಲ್ಲಿರುವವರು ದೇವರಿಂದ ಆರಿಸಲ್ಪಟ್ಟು ಅಲ್ಲಿದ್ದಾರೆ ಎಂದು.

ಸರ್ಕಾರದ ವ್ಯವಸ್ಥೆಯ ರೂಪದಲ್ಲಿದ್ದು ಅಧಿಕಾರದಲ್ಲಿರುವವರ ವಿಷಯದಲ್ಲಿ ದೇವರು ಲೆಕ್ಕಿಸದೇ ಕೆಲಸ ಮಾಡುತ್ತಾನೆ. ಜ್ಞಾನೋಕ್ತಿ ಹೇಳುವುದನ್ನು ನಾವು ಅರಿಯಬೇಕು: ರಾಜನ ಸಂಕಲ್ಪಗಳು ಯೆಹೋವನ ಕೈಯಲ್ಲಿ ನೀರಿನ ಕಾಲುವೆಗಳಂತೆ ಇವೆ; ತನಗೆ ಬೇಕಾದ ಕಡೆಗೆ ತಿರುಗಿಸುತ್ತಾನೆ. (ಜ್ಞಾನೋಕ್ತಿ. 21:1). ದೇವರು ತನ್ನ ಅತ್ಯಧಿಕವಾದ ಶಕ್ತಿಯಿಂದ ಪ್ರಭಾವದಿಂದ ಒಬ್ಬ ನಾಯಕನ ಹೃದಯವನ್ನು ಬದಲಾಯಿಸುತ್ತಾನೆ. ದೇವರು ಫರೋಹನ ಹೃದಯವನ್ನು ಕಲ್ಲಾಗಿ ಮಾಡಿದನು ಅದರ ಮೂಲಕ ತನ್ನ ಪ್ರಭಾವದ ಶಕ್ತಿಯನ್ನು ಮೋಶೆಯ ಮೂಲಕ ತೋರ್ಪಡಿಸಿದನು. ದೇವರು ತನ್ನ ಜನರಿಗೆ ನಿಮ್ಮ ಗಂಟುಮೂಟೆಗಳನ್ನು ಕಟ್ಟಿಕೊಂಡು ಹೊರಡಿರಿ ಎಂದು ಹೇಳಿದಾಗ ಒಂದೇ ರಾತ್ರಿಯಲ್ಲಿ ಹೊರಟರು, ಯಾವ ಪ್ರಶ್ನೆಯನ್ನೂ ಮಾಡಲಿಲ್ಲ ಯಾಕೆಂದರೆ ಅವರು ದೇವರ ಶಕ್ತಿಯನ್ನು ನೋಡಿದ್ದರು. ನೆಹೆಮಿಯನು ಯೆರೂಸಲೇಮಿನ ಪೌಳಿಗೋಡೆಗಳನ್ನು ತಿರುಗಿ ಕಟ್ಟಬೇಕೇಂದು ಆಲೋಚಿಸಿದಾಗ ದೇವರು ಅರಸನಾದ ಅರ್ತಷಸ್ತನ ಮೂಲಕ ಕಾರ್ಯಮಾಡಿದನು. ಈ ಅರಸನು ಪರ್ಸಿಯಾ ದೇಶದವನಾಗಿದ್ದನು. ಈತನು ನೆಹೆಮಿಯನಿಗೆ ಕೇವಲ ಪೌಳಿಗೋಡೆಗಳನ್ನು ಕಟ್ಟಲು ಮಾತ್ರವಲ್ಲದೆ, ನೆಹೆಮಿಯನೊಂದಿಗೆ ತನ್ನ ಸೇನೆಯನ್ನೂ ಕಳುಹಿಸಿದನು. ದೇವರು ತಿರುಗಿ ಪರ್ಸಿಯಾ ದೇಶದ ಅರಸನಾದ ಕೋರೆಷನ ಮೂಲಕ ಕಾರ್ಯಮಾಡಿದನು ಏನೆಂದರೆ ಇಸ್ರಾಯೇಲ್ಯರು ಒತ್ತೇಯಾಳಾಗಿದ್ದರು ಆದರೆ, ಕೋರೆಷ ರಾಜನು ಅವರುಗಳನ್ನು ಯೆರೂಸೇಮಿಗೆ ಕಳುಹಿಸಿದನು. ದೇವರು ತನ್ನ ಚಿತ್ತವನ್ನು ನೆರವೇರಿಸಲು ನಾಯಕರುಗಳ ಮೂಲಕ ಕಾರ್ಯಮಾಡುತ್ತಾನೆ. (ಪ್ರಕಟನೆ. 17:17). ನಮಗಾದರೋ ನಮ್ಮ ಅರಸನ ಮೇಲೆ ಸಂಪೂರ್ಣ ಭರವಸೆ ಇರಬೇಕಷ್ಟೆ.

## ಸರಿಯಾಗಿ ಸಂಬಂಧಹೊಂದಲು ಆಶೀರ್ವಾದಗಳು

ಕುಟುಂಬದಿಂದ ಮೊದಲುಗೊಂಡು ಸ್ಥಳೀಯ ಸಭೆಯಲ್ಲಿ, ಕ್ರಿಸ್ತನ ದೇಹದಲ್ಲಿ, ಕೆಲಸದ ಸ್ಥಳದಲ್ಲಿ ಮತ್ತು ನಾಗರಿಕ ಸರ್ಕಾರದಲ್ಲಿ ದೇವರ ರಾಜ್ಯದ ಸರ್ಕಾರವು ನಮ್ಮಲ್ಲಿ ಬಿಡುಗಡೆಯಾಗಿದೆ ಎಂದು ನಾವು ಅರ್ಥಮಾಡಿಕೊಳ್ಳಬೇಕು. ನಾವು ಈ ಅಧಿಕಾರದ ರಚನೆಗಳಿಗೆ ಸರಿಯಾಗಿ ಸಂಬಂಧಹೊಂದಿಕೊಂಡು ಜೀವಿಸಲು ಕಲಿಯಬೇಕು, ಯಾಕೆಂದರೆ ಅದರಲ್ಲಿ ಆಶೀರ್ವಾದವಿದೆ. ಅದಕ್ಕಾಗಿ ಕಾದಾಡುವದಕ್ಕಿಂತಲೂ ಮತ್ತು ದಬ್ಬಾಳಿಕೆಯ ಹೊರೆಗಳ ರೀತಿಯಲ್ಲಿ ಅವುಗಳನ್ನು ನೋಡುವುದಕ್ಕಿಂತಲೂ ನಮ್ಮ ಸ್ವಾತಂತ್ರವನ್ನು ಕಸಕೊಳ್ಳುವ ಅವುಗಳ ವ್ಯವಸ್ಥೆಯನ್ನು ನೋಡುವುದಕ್ಕಿಂತಲೂ, ಈ ರಚನೆಗಳ ಮೂಲಕ ದೇವರ ರಾಜ್ಯವು ನಮ್ಮ ಬಳಿಗೆ ಬರುವುದನ್ನು ನಾವು ನೋಡಬೇಕು. ನಮ್ಮಲ್ಲಿರುವ ಅಧಿಕಾರವರ್ಗದವರು, ಈ ಅಧಿಕಾರದ ರಚನೆಗಳಲ್ಲಿ ನಾವು ಒಂದನ್ನು ಅರ್ಥ ಮಾಡಿಕೊಳ್ಳಬೆಕು ಏನೆಂದರೆ, ದೇವರ ಕುರಿತಾಗಿ ನಮ್ಮ ಜವಾಬ್ದಾರಿ, ನಮ್ಮ ಅಧಿಕಾರದ ಕೆಳಗಿರುವವರ ಜವಾಬ್ದಾರಿ, ಈ ವಿಷಯಗಳಲ್ಲಿ ಸರಿಯಾಗಿ ನ್ಯಾಯನಿರ್ಣಯಗಳನ್ನು ಮಾಡಬೇಕು.

# 10.ಅಕ್ಷರಶಃ ದೇವರ ರಾಜ್ಯ

ಇತರೆ ಎಲ್ಲಾ ಅಧ್ಯಾಯಗಳಲ್ಲಿ ನೋಡಿದಂತೆ ನಾವು ದೇವರ ಆತ್ಮೀಕ ರಾಜ್ಯದ ಕುರಿತಾಗಿ ಪ್ರಸ್ತಾಪಿಸುತ್ತಿದ್ದೇವೆ. ನಮ್ಮ ಅಧ್ಯಯನದ ಕೇಂದ್ರ ಅಭ್ಯಾಸವೇನೆಂದರೆ ದೇವರ ಆತ್ಮೀಕ ರಾಜ್ಯದ ಕುರಿತಾಗಿದೆ ಮತ್ತು ಇಲ್ಲಿ ಮತ್ತು ಈಗ ನಮ್ಮ ಪ್ರಸ್ತುತ ಪ್ರಯಾಣದಲ್ಲಿ ಜೀವನದ ಮೂಲಕ ಅದಕ್ಕೆ ನಾವು ಹೇಗೆ ಸಂಬಂಧಿತರಾಗುತ್ತೇವೆ ಎಂಬದಾಗಿದೆ. ಹೇಗೂ, ನಮ್ಮ ಕರ್ತನಾದ ಯೇಸುವು ತನ್ನ sಸಹಸ್ರ ವರ್ಷದ ಆರಂಭದಲ್ಲಿ- ಭೂಮಿಯ ಮೇಲೆ ಆತನ ಸಾವಿರ ವರ್ಷ ಆಳ್ವಿಕೆಯಲ್ಲಿ ಅಕ್ಷರಶಃ ದೇವರ ರಾಜ್ಯವನ್ನು ಸ್ಥಾಪಿಸುವ ಬಗ್ಗೆ ನಮ್ಮ ಗಮನ ಮತ್ತು ಕೆಲವು ಮುಖ್ಯಾಂಶಗಳನ್ನು ಅನ್ವೇಷಿಸಬೇಕು.

## ದೇವರ ಮೂಲ ಯೋಜನೆ

**ಮತ್ತಾಯ. 25:34**
**ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ - ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ಪಡೆಯಿರಿ**.

ಆ ಭೂಮಿಯ ಮೇಲೆ ಸ್ಥಾಪಿಸಲ್ಪಡುವ ದೇವರ ರಾಜ್ಯದೊಂದಿಗೆ ನಾವು ಆತನೊಂದಿಗೆ ಉತ್ತರಾಧಿಕಾರಿಗಳಾಗಿರಲು ದೇವರ ಮೂಲ ಯೋಜನೆಯಾಗಿದೆ.

ಇದು ಅಂತ್ಯಕ್ಕೆ ಕ್ರಿಸ್ತನು ತನ್ನ ಪ್ರಾಕೃತಿಕ ದೇವರ ರಾಜ್ಯವನ್ನು ಸ್ಥಾಪಿಸುವಾಗ ಅಕ್ಷರಶಃ ನೆರವೇರುವುದು.

## ಯಾಕೋಬನ ಪ್ರವಾದನೆ.

**ಆದಿಕಾಂಡ. 49:10**
**ರಾಜದಂಡವನ್ನು ಹಿಡಿಯತಕ್ಕವನು ಬರುವ ತನಕ ಆ ದಂಡವು ಯೆಹೂದನ ಕೈಯಿಂದ ತಪ್ಪುವುದಿಲ್ಲ; ಮುದ್ರೆಕೋಲು ಅವನ ಪಾದಗಳ ಬಳಿಯಿಂದ ಕದಲುವುದಿಲ್ಲ; ಅವನಿಗೆ ಅನ್ಯಜನಗಳೂವಿಧೇಯರಾಗಿರುವರು.**

ಆದಿಕಾಂಡ ಪುಸ್ತಕದಲ್ಲೇ ಕರ್ತನಾದ ಯೇಸುವಿನ ಪೂರ್ವ ಪ್ರವಾದನೆ ಪ್ರಸ್ತಾಪಿಸಿದೆ, ಆತನು ನಾಯಕನೂ, ನ್ಯಾಯಸ್ಥಾಪಕನೂ, ಮತ್ತು ಶಿಲೋಹ್ (ಅಂದರೆ ಸಮಾಧಾನ ಪಡಿಸುವವ ಅಥವಾ ಸಮಾಧಾನದ ರಾಜಕುಮಾರ) ಯೆಹೂದ ಕುಲದವ.

# ಅಕ್ಷರಶಃ ದೇವರ ರಾಜ್ಯದ ಭವಿಷ್ಯವಾಣಿ

# ದಾವೀದನ ಒಡಂಬಡಿಕೆಯಂತೆ

**2ಸಮುವೇಲ.7:12,13,16**
**12.ನಿನ್ನ ಆಯುಷ್ಕಾಲವು ಮುಗಿದು ನೀನು ಪಿತೃಗಳ ಬಳಿಗೆ ಸೇರಿದ ಮೇಲೆ ನಿನ್ನಿಂದ ಹುಟ್ಟುವವನನ್ನು ನೆಲೆಗೊಳಿಸಿ ಅವನ ರಾಜ್ಯವನ್ನು ಸ್ಥಿರಪಡಿಸುವೆನು.**
**13.ಅವನು ನನ್ನ ಹೆಸರಿಗಾಗಿ ಒಂದು ಮನೆಯನ್ನು ಕಟ್ಟುವನು; ನಾನು ಅವನ ರಾಜ್ಯಸಿಂಹಾಸನವನ್ನು ನಿರಂತರವಾಗಿ ಸ್ಥಿರಪಡಿಸುವೆನು.**
**16.ನಿನ್ನ ಮನೆಯೂ ಅರಸುತನವೂ ಸದಾಕಾಲ ಸ್ಥಿರವಾಗಿರುವವು; ನಿನ್ನ ಸಿಂಹಾಸನವು ಶಾಶ್ವತವಾಗಿರುವುದು ಎಂಬದೇ.**

**ಕೀರ್ತನೆ. 132:11**
**ಯೆಹೋವನು ದಾವಿದನಿಗೆ ಮಾಡಿದ ಪ್ರಮಾಣವು ಸ್ಥಿರವಾಗಿದೆ; ಆತನು ಅದನ್ನು ಬದಲಿಸುವುದಿಲ್ಲ- ನಿನ್ನ ಸಂತಾನದವರನ್ನು ನಿನ್ನ ಸಿಂಹಾಸನದ ಮೇಲೆ ಕುಳ್ಳಿರಿಸುವೆನು.**

**ಯೆಶಾಯ. 16:5**
**ಇದಲ್ಲದೆ ಸಿಂಹಾಸನವು ಕೃಪಾಧಾರದ ಮೇಲೆ ಸ್ಥಾಪಿತವಾಗಿದೆ; ರಾಜ್ಯಭಾರಪ್ರವೀಣನೂ ಧರ್ಮಾಸಕ್ತನೂ ನ್ಯಾಯನಿಪುಣನೂ ಆದವನು ದಾವೀದನ ಗುಡಾರದಲ್ಲಿನ ಆ ಸಿಂಹಾಸನದ ಮೇಲೆ ಸತ್ಯಪರನಾಗಿ ಕುಳಿತಿದ್ದಾನೆ.**

**ಯೆರೆಮಿಯಾ. 33:14–18**
**14. ಯೆಹೋವನು ಇಂತೆನ್ನನುತ್ತಾನೆ-ಆಹಾ, ನಾನು ಇಸ್ರಾಯೇಲ್ ಯೆಹೂದ ವಂಶಗಳ ವಿಷಯವಾಗಿ ನುಡಿದಿರುವ ಶುಭವಾಕ್ಯವನ್ನು ನೆರವೇರಿಸುವ ದಿನಗಳು ಬರುವವು.**
**15. ಆ ದಿನಗಳಲ್ಲಿ, ಆ ಕಾಲದಲ್ಲಿ, ದಾವೀದನೆಂಬ ಮೂಲದಿಂದ ಸದ್ಧರ್ಮಿಯಾದ ಮೊಳಿಕೆಯನ್ನು ಚಿಗುರಿಸುವೆನು; ಅವನು ದೇಶದಲ್ಲಿ ನೀತಿನ್ಯಾಯಗಳನ್ನು ನಿರ್ವಹಿಸುವನು.**
**16.ಆಗ ಯೆಹೂದ್ಯರು ಸುರಕ್ಷಿತರಾಗಿರುವರು, ಯೆರೂಸಲೇಮಿನವರು ನೆಮ್ಮದಿಯಾಗಿ ವಾಸಿಸುವರು; ಯೆಹೋವ ಚಿದ್ಕೇನು (ಅಂದರೆ ಯೆಹೋವನೇ ನಮ್ಮ ಸದ್ಧರ್ಮ) ಎಂಬ ಹೆಸರು ಈ ಪಟ್ಟಣಕ್ಕೆ ಸಲ್ಲುವುದು.**
**17. ಯೆಹೋವನು ಇಂತೆನ್ನುತ್ತಾನೆ- ದಾವೀದನ ವಂಶವು ನಿಂತುಹೋಗದೆ ಆ ಸಂತಾನದವರು ಇಸ್ರಾಯೇಲ್ಯರ ಸಿಂಹಾಸನದಲ್ಲಿ ತಪ್ಪದೇ ಆಸೀನರಾಗುತ್ತಾಬರುವರು;**
**18.ನನ್ನ ಸನ್ನಿಧಿಯಲ್ಲಿ ನಿರಂತರವಾಗಿ ಸರ್ವಾಂಗಹೋಮ, ನೈವೇದ್ಯ, ಯಜ್ಞ ಇವುಗಳನ್ನು ಮಾಡಲು ಲೇವಿಯರಾದ ಯಾಜಕರು ಇದ್ದೇ ಇರುವರು.**

ದೇವರು ದಾವಿದನೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿದ್ದಾನೆ ಅದು ಆತನ ಸಂತಾನದವರಲ್ಲಿ ಒಬ್ಬನು ನಿತ್ಯವಾದ ರಾಜ್ಯವನ್ನು ಹೊಂದಿರುವನು.

## ಯೆಶಾಯನ ಪ್ರವಾದನೆಯಂತೆ,

**ಯೆಶಾಯ. 9:6,7**
**6. ಒಂದು ಮಗು ಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನನು; ಆಡಳಿತವು ಆತನಬಾಹುವಿನ ಮೇಲಿರುವುದು; ಅದ್ಭುತಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬುವು ಆತನ ಹೆಸರು.**
**7.ಅವನ ಮುಖಾಂತರ ದಾವಿದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವುದು, ದಾವೀದನ ರಾಜ್ಯದಲ್ಲಿ ನಿತ್ಯ ಸಮಾಧಾನವಿರುವುದು, ಆ ರಾಜ್ಯವು ಇಂದಿನಿಂದ ಯಾವಾಗಲೂ ನೀತಿನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವುದು; ಸೇನಾಧೀಶ್ವರನಾದ ಯೆಹೋವನ ಆಗ್ರಹವು ಇದನ್ನು ನೆರವೇರಿಸುವುದು.**

## ದಾನಿಯೇಲನಿಂದ ಮೊದಲೇ ಹೇಳಿದಂತೆ

**ದಾನಿಯೇಲ.2:44**
**ಆ ರಾಜರ ಕಾಲದಲ್ಲಿ ಪರಲೋಕ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದು; ಆದರೆ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿಹೋಗದು, ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮ ಮಾಡಿ ಶಾಶ್ವತವಾಗಿ ನಿಲ್ಲುವುದು.**

## ತಾತ್ಕಾಲಿಕ ವಿರಾಮ

**ಯೆರೆಮಿಯ. 36:30**
**ಆದಕಾರಣ ಯೆಹೂದದ ಅರಸನಾದ ಯೆಹೋಯಾಕೀಮನ ವಿಷಯದಲ್ಲಿ ಯೆಹೋವನು ಇಂತೆನ್ನುತ್ತಾನೆ- ಇವನ ಸಂತಾನದಲ್ಲಿ ಯಾವನೂ ದಾವೀದನ ಸಿಂಹಾಸನರೂಢನಾಗನು; ಇವನ ಹೆಣವು ಬಿಸಾಡಲ್ಪಟ್ಟು ಹೆಗಲಿನ ತಾಪಕ್ಕೂ ರಾತ್ರಿಯ ಚಳಿಗೂ ಈಡಾಗುವುದು.**

ಯೆಹೂದ ರಾಜರುಗಳ ಆಳ್ವಿಕೆಯಲ್ಲಿ, ತಾತ್ಕಾಲಿಕ ವಿರಾಮವಾಗಿತ್ತು, ಆ ಸಮಯದಲ್ಲಿ ಇಸ್ರಾಯೇಲ್ ಬಾಬೇಲಿನವರ ಸೆರೆಯಲ್ಲಿದ್ದರು.

## ದೇವದೂತರ ಪ್ರಕಟನೆ

**ಲೂಕ. 1:30–33**
**30. ಆ ದೂತನು ಆಕೆಗೆ- ಮರಿಯಳೇ, ಹೆದರಬೇಡ; ನಿನಗೆ ದೇವರ ದಯೆ ದೊರಕಿತು.**
**31. ಇಗೋ, ನೀನು ಗರ್ಭಿನಿಯಾಗಿ ಒಬ್ಬ ಮಗನನ್ನು ಹೆರುವಿ; ಆತನಿಗೆ ಯೇಸುವೆಂದು ಹೆಸರಿಡಬೇಕು.**
**32. ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವ ನ್ನು ಆತನಿಗೆ ಕೊಡುವನು.**
**33. ಆತನು ಯಾಕೋಬನ ವಂಶವನ್ನು ಸದಾಕಾಲ ಆಳುವನು; ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ ಎಂದು ಹೇಳಿದನು**.

ನಿತ್ಯನಿರಂತರವಾದ ರಾಜ್ಯದಲ್ಲಿ ಯೇಸುವು ದಾವೀದನ ಸಿಂಹಾಸನದಲ್ಲಿ ಕುಳಿತು ಆಳ್ವಿಕೆಮಾಡುವುದಾಗಿ ದೇವದೂತರ ಪ್ರಕಟಣೆವುಂಟಾಯಿತು. ಆತನು ಆತ್ಮೀಕ

ಅಳತೆಯಲ್ಲಿ ಆ ದೇವರ ರಾಜ್ಯವು ಆತನ ಮೊದಲ ಬರೋಣದಲ್ಲಿ ಆಗುವುದು ಎಂದು ಸಾರೋಣವಾಯಿತು. ಆತನು ಹಿಂತಿರುಗಿ ಬರುವಾಗ, ಅದನ್ನು ಭೌತಿಕ ಅಳತೆಯಲ್ಲಿ ದೇವರ ರಾಜ್ಯವನ್ನು ಮರು ಸ್ಥಾಪಿಸುವನು.

## ಅಕ್ಷರಶಃ ರಾಜ್ಯದ ವಿಷಯದಲ್ಲಿ ಯೇಸುವಿನ ಬೋಧನೆ

**ಮತ್ತಾಯ. 8:11,12**
**11. ಇದಲ್ಲದೆ ನಿಮಗೆ ಹೇಳುವುದೇನೆಂದರೆ ಮೂಡಣ ಪಡುವಣ ದಿಕ್ಕುಗಳಿಳಂದ ಬಹಳ ಜನ ಬಂದು ಪರಲೋಕ ರಾಜ್ಯದಲ್ಲಿ ಅಬ್ರಹಾಮ್ ಇಸಾಕ್ ಯಾಕೋಬ್ ಎಂಬವರ ಸಂಗಡ ಊಟಕ್ಕೆ ಕೂಡ್ರುವರು;**
**12.ಆದರೆ, ಆ ರಾಜ್ಯದ ಬಾಧ್ಯಸ್ಥರು ಹೊರಗೆ ಕತ್ತಲೆಗೆ ಹಾಕಲ್ಪಡುವರು; ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು ಎಂದು ಹೇಳಿದನು.**

**ಮತ್ತಾಯ. 22:1–15**
**1. ಯೇಸು ಬೋಧನೆ ಮಾಡುತ್ತಾ ಇನ್ನೂ ಸಾಮ್ಯರೂಪವಾಗಿ ಅವರಿಗೆ ಹೇಳಿದ್ದೇನೆಂದರೆ**
**2. ಪರಲೋಕ ರಾಜ್ಯವು ಮಗನಿಗೆ ಮದುವೆಮಾಡಿದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ**
**3. ಅವನು ಮದುವೆಗೆ ಹೇಳಿಸಿಕೊಂಡವರನ್ನು ಕರೆಯುವುದಕ್ಕೆ ತನ್ನ ಆಳುಗಳನ್ನು ಕಳುಹಿಸಲು ಬರುವುದಕ್ಕೆ ಅವರಿಗೆ ಮನಸ್ಸಿರಲಿಲ್ಲ**
**4. ತಿರುಗಿ ಬೇರೆ ಆಳುಗಳನ್ನು ಕರೆದು- ನೀವು ಊಟಕ್ಕೆ ಹೇಳಿಸಿಕೊಂಡವರ ಬಳಿಗೆ ಹೋಗಿ- ಇಗೋ, ಅಡಿಗೆ ಸಿದ್ದವಾಗಿದೆ; ನನ್ನ ಹೋರಿಗಳನ್ನೂ ಕೊಬ್ಬಿದ ಪಶು ಗಳನ್ನೂ ಕೋಯಿಸಿದ್ದೇನೆ; ಎಲ್ಲಾ ಸಿದ್ದವಾಗಿದೆ ಮದುವೆಯ**
**5. ಆದರೆ ಅವರು ಅಲಕ್ಷ್ಯಮಾಡಿ ಒಬ್ಬನು ತನ್ನ ಹೊಲಕ್ಕೆ ಒಬ್ಬನು ತನ್ನ ವ್ಯಾಪಾರಕ್ಕೆ ಹೋಗಿಬಿಟ್ಟರು,**
**6. ಉಳಿದವರು ಅವನ ಆಳುಗಳನ್ನು ಹಿಡಿದು ಬೈದುಕೊಂದುಹಾಕಿದರು.**
**7. ಅರಸನು ಸಿಟ್ಟುಗೊಂಡು ತನ್ನ ದಂಡುಗಳನ್ನು ಕಳುಹಿಸಿ ಆ ಕೊಲೆಗಾರರನ್ನು ನಾಶಮಾಡಿ ಅವರ ಪಟ್ಟಣವನ್ನು ಸುಟ್ಟುಬಿಟ್ಟನು;**
**8. ಆಗ ತನ್ನ ಆಳುಗಳಿಗೆ – ಮದುವೆಗೆ ಸಿದ್ದವಾಗಿದೆ ಸರಿ, ಆದರೆ ಕರೆಯಲ್ಪಟ್ಟವರು ಯೋಗ್ಯರಾಗಿರಲಿಲ್ಲ.**
**9. ನೀವು ಈಗ ನಾಲ್ಕು ಹಾದಿ ಕೂಡುವ ಸ್ಥಳಗಳಿಗೆ ಹೋಗಿ ಕಂಡವರನ್ನೆಲ್ಲಾ ಮದುವೆಯ ಊಟಕ್ಕೆ ಕರೆಯಿರಿ ಎಂದು ಹೇಳಿದನು.**
**10. ಆ ಆಳುಗಳ ಹಾದಿಗಳಿಗೆ ಹೋಗಿ ಕೆಟ್ಟವರು ಒಳ್ಳೆಯವರು ಅನ್ನದೆ ಕಂಡವರನ್ನೆಲ್ಲಾ ಕೂಡಿಸಿ ಕರಕೊಂಡು ಬಂದರು.**
**11. ಹೀಗೆ ಮನೆತುಂಬಾ ಊಟಕ್ಕೆ ಕೂತರು, ಆಮೇಲೆ ಅರಸನು ಕೂತವರನ್ನು ನೋಡುವುದಕ್ಕೆ ಒಳಕ್ಕೆ ಬರಲಾಗಿ ಮದುವೆ ಬಟ್ಟೆಯನ್ನು ಹಾಕಿಕೊಳ್ಳದ ಒಬ್ಬನನ್ನು ಕಂಡು**
**12. ಅವನನ್ನು- ಏನಪ್ಪಾ, ಮದುವೆಯ ಬಟ್ಟೆ ಇಲ್ಲದೆ ನೀನಿಲ್ಲಿ ಹೇಗೆ ಒಳಗೆ ಬಂದಿ ಎಂದು ಕೇಳಲು ಅವನು ಸುಮ್ಮನಿದ್ದನು.**
**13. ಆಮೇಲೆ ಅರಸನು ಸೇವಕರಿಗೆ- ಅವನ ಕೈಕಾಲು ಕಟ್ಟಿ ಅವನನ್ನು ಹೊರಗೆ ಕತ್ತಲೆಗೆ ನೂಕಿರಿ ಎಂದು ಹೇಳಿದನು. ಅಲ್ಲಿ ಗೋಳಾಟವೂ ಕಟಕಟನೆ ಹಲ್ಲುಕಡ ಯೋಣವೂ ಇರುವವು.**
**14. ಹೀಗೆ ಕರೆಯಲ್ಪಟ್ಟವರು ಬಹು ಜನ, ಆಯಲ್ಪಟ್ಟವರು ಸ್ವಲ್ಪ ಜನ ಅಂದನು.**

ಅಕ್ಷರಶಃ ದೇವರ ರಾಜ್ಯದ ಬೋಧನೆಯಲ್ಲಿ, ಕರ್ತನಾದ ಯೇಸುವು ತನ್ನ ನಿತ್ಯತ್ವದ ರಾಜ್ಯದಲ್ಲಿ ಯೆಹೂದ್ಯರಲ್ಲದ ಇತರರೂ ಇರುತ್ತಾರೆಂದು ಸೂಚಿಸುತ್ತಾನೆ. ಯಾರಾರು ಆತನನ್ನು ನಿರಾಕರಿಸಿದ ಪ್ರತಿಯೊಬ್ಬರೂ ಆ ರಾಜ್ಯದಿಂದ ಹೊರಗೆ ಬೀಸಾಡಲ್ಪಡುವರು

## ಮುಂಬರುವ ರಾಜ್ಯದ ಮುನ್ನೋಟ

**ಮತ್ತಾಯ. 16:28**
**ನಿಮಗೆ ನಿಜನಿಜವಾಗಿ ಹೇಳುತ್ತೇನೆ; ಇಲ್ಲಿ ನಿಂತವರೊಳಗೆ ಕೆಲವರು, ಮನುಷ್ಯಕುಮಾರನು ತನ್ನ ರಾಜ್ಯದಲ್ಲಿ ಬರುವುದನ್ನು ನೋಡುವ ತನಕ ಮರಣಹೊಂದುವುದಿಲ್ಲ ಅಂದನು.**

**ಮಾರ್ಕ. 9:1**
**ಮತ್ತು ಅವರಿಗೆ- ನಿಮಗೆ ನಿಜವಾಗಿ ಹೇಳುತ್ತೇನೆ, ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವು ಪ್ರಬಲವಾಗಿ ಬಂದಿರುವುದನ್ನು ನೋಡುವ ತನಕ ಮರಣಹೊಂದುವುದಿಲ್ಲವೆಂದು ಹೇಳಿದನು.**

**ಲೂಕ. 9:27**
**ನಿಮಗೆ ಸತ್ಯವಾಫಿ ಹೇಳುತ್ತೇನೆ, ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವನ್ನು ನೋಡುವ ತನಕ ಮರಣ ಹೊಂದುವುದಿಲ್ಲವೆಂದು ಅಂದನು**.

**ಮತ್ತಾಯ. 17:1-8**
**1. ಅರು ದಿವಸಗಳಾದ ಮೇಲೆ ಯೇಸು ಪೇತ್ರನನ್ನೂ ಯಾಕೋಬನನ್ನೂ ಇವನ ತಮ್ಮನಾದ ಯೋಹಾನನನ್ನೂ ಮಾತ್ರ ವಿಂಗಡವಾಗಿ ಕರಕೊಂಡು ಎತ್ತರವಾದ ಬೆಟ್ಟಕ್ಕೆ ಹೋದನು.**
**2. ಅಲ್ಲಿ ಅವರ ಕಣ್ಣ ಮುಂದೆ ಆತನ ರೂಪ ಬೇರೆಯಾಯಿತು; ಆತನ ಮುಖವು ಸೂರ್ಯನ ಹಾಗೆ ಪ್ರಕಾಶಿಸಿತು; ಆತನ ವಸ್ತ್ರಗಳು ಬೆಳಕಿನಂತೆ ಬೆಳ್ಳಗಾದವು.**
**3. ಇದಲ್ಲದೆ ಮೋಶೆಯೂ ಎಲೀಯನೂ ಆತನ ಸಂಗಡ ಮಾತಾಡುತ್ತಾ ಅವರಿಗೆ ಕಾಣಿಸಿಕೊಂಡರು.**
**4. ಆಗ ಪೇತ್ರನು ಯೇಸುವಿಗೆ- ಸ್ವಾಮಿ ನಾವು ಇಲ್ಲೇ ಇರುವುದು ಒಳ್ಳೇಯದು, ಅಪ್ಪಣೆಯಾದರೆ ಇಲ್ಲಿ ಮೂರು ಪರ್ಣಶಾಲೆಗಳನ್ನು ಕಟ್ಟುವೆನು; ನಿನಗೊಂದು ಮೋಶೆಗೊಂದು ಎಲೀಯನಿಗೊಂದು ಎಂದು ಹೇಳಿದನು.**
**5. ಹೀಗೆ ಮಾತಾಡುತ್ತಿರುವಾಗಲೇ ಕಾಂತಿಯುಳ್ಳ ಮೋಡವು ಅವರ ಮೇಲೆ ಕವಿಯಿತು, ಇದಲ್ಲದೆ ಆ ಮೋಡದೊಳಗಿಂದ- ಈತನ ಮಾತನ್ನು ಕೇಳಿರಿ ಎಂಬ ಆಕಾಶವಾಣಿಯಾಯಿತು.**
**6. ಶಿಷ್ಯರು ಇದನ್ನು ಕೇಳಿ ಬಹಳವಾಗಿ ಹೆದರಿ ಬೋರಲಬಿದ್ದರು.**
**7. ಆದರೆ ಯೇಸು ಹತ್ತರಕ್ಕೆ ಬಂದು ಅವರನ್ನು ಮುಟ್ಟಿ- ಏಳಿರಿ, ಹೆದರಬೇಡಿರಿ ಅಂದನು.**
**8. ಅವರು ಕಣ್ಣೆತ್ತಿ ನೋಡಿದಾಗ ಯೇಸುವನ್ನೇ ಹೊರತು ಮತ್ತಾರನ್ನೂ ಕಾಣಲಿಲ್ಲ.**

ಕರ್ತನಾದ ಯೇಸುವು ತಾನು ಈ ಭೂಮಿಯಲ್ಲಿರುವಾಗ ತನ್ನ ಶಿಷ್ಯರಿಗೆ ಮುಂಬರುವ ದೇವರ ರಾಜ್ಯದ ಮಹಿಮೆಯ ಮುನ್ನೋಟದ ವಿಷಯವಾಗಿ ಸೂಚಿಸಿದ್ದನು.

ಆತನು ಹೇಳಿದನು ಏನೆಂದರೆ, “ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವನ್ನು (ಮತ್ತು ಮನುಷ್ಯಕುಮಾರನನ್ನು)ನೋಡುವ ತನಕ ಮರಣ ಹೊಂದುವುದಿಲ್ಲವೆಂದು ಅಂದನು.” ಮತ್ತು ಪರ್ವತದ ಮೇಲೆ ಯೇಸು ರೂಪಾಂತರಗೊಂಡಾಗ ತಾನು ಯಾವ

ರೀತಿಯಲ್ಲಿ ಮುಂಬರುವ ಮಹಿಮೆಯಲ್ಲಿ ಪ್ರಕಾಶಿತನೂ ಮನೋಹರನೂ ಆಗಿರುವನು ಎಂಬ ವಿಹಂಗಮ ನೋಟದ ಅರಿವುಂಟಾಗುತ್ತದೆ.

**ಲೂಕ. 21:27–32**
**27. ಅಗ ಮನುಷ್ಯಕುಮಾರನು ಬಲದಿಂದಲೂ ಬಹುಮಹಿಮೆಯಿಂದಲೂ ಮೇಘದಲ್ಲಿ ಬರುವುದನ್ನು ಕಾಣುವರು. 28.ಆದರೆ ಇವು ಸಂಭವಿಸುವುದಕ್ಕೆ ತೊಡಗುವಾಗ ಮೇಲಕ್ಕೆ ನೋಡಿರಿ, ನಿಮ್ಮ ತಲೆ ಎತ್ತಿರಿ; ನಿಮ್ಮ ಬಿಡುಗಡೆಯು ಸಮೀಪವಾಗಿದೆ ಅಂದನು.**
**29.ಆತನು ಅವರಿಗೆ ಒಂದು ಸಾಮ್ಯ ಕೊಟ್ಟು ಹೇಳಿದ್ದೇನೆಂದರೆ – ಅಚಿಜೂರ ಮುಂತಾದ ಮರಗಳನ್ನೂ ನೋಡಿರಿ, 30. ಅವು ಚಿಗುರಿದ ಕೂಡಲೆ ನೀವು ಅದನ್ನು ಕಂಡು ಈಗ ಬೇಸಿಗೆಯು ಹತ್ತಿರವಾಯಿತೆಂದು ನೀವಾಗಿ ತಿಳುಕೊಳ್ಳುತ್ತೀರಲ್ಲ, 31. ಹಾಗೆಯೇ ನೀವು ಸಹ ಇವುಗಳಾಗುವುದನ್ನು ನೋಡುವಾಗ ದೇವರ ರಾಜ್ಯವು ಹತ್ತಿರವಾಯಿತೆಂದು ತಿಳುಕೊಳ್ಳಿರಿ. 32.ಎಲ್ಲಾ ಆಗುವ ತನಕ ಈ ಸಂತತಿಯು ಅಳಿದು ಹೋಗುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ.**

ಕರ್ತನಾದ ಯೇಸು ಕಡೆ ದಿನದ, ತನ್ನ ನಿತ್ಯತ್ವದ ರಾಜ್ಯದ ಸ್ಥಾಪನೆಯ ವಿವರಣೆಯನ್ನು ನೀಡುತ್ತಾನೆ. ಆತನು, ಈ ಎಲ್ಲಾ ಸೂಚಕಕಾರ್ಯಗಳು ಒಂದು ಸಂತಾನದಲ್ಲಿ ಹಾಗೂ ಅದೇ ಸಂತಾನವು ಆತನ ಮಹಿಮೆಯ ರಾಜ್ಯವನ್ನು ಏಕಕಾಲದಲ್ಲೆ ನೋಡುವುದಾಗಿ ಹೇಳುತ್ತಾನೆ.

## ಅರಸನು ಕತ್ತೆಯ ಮೇಲೆ ಸವಾರಿಯೊಡನೆ ಬಂದನು

**ಜೆಕರ್ಯ. 9:9**
**ಚೀಯೋನ್ ನಗರಿಯೇ, ಬಹು ಸಂತೋಷಪಡು; ಯೆರೂಸಲೇಮ್‍ಪುರಿಯೇ, ಹರ್ಷಧ್ವನಿಗೈ! ನೋಡು, ನಿನ್ನ ಅದಸನು ನಿನ್ನ ಬಳಿಗೆ ಬರುತ್ತಾನೆ; ಆತನು ನ್ಯಾಯವಂತನು, ಸುರಕ್ಷಿತನೂ ಶಾಂತಗುಣವಳ್ಳವನಾಗಿಯೂ ಕತ್ತೆಯನ್ನು ಹೌದು, ಪ್ರಾಯದ ಕತ್ತೆಮರಿಯನ್ನು ಹತ್ತಿದವನಾಗಿಯೂ ಬರುತ್ತಾನೆ.**

**ಮಾರ್ಕ. 11:10**
**ನಮ್ಮ ಪಿತೃವಾದ ದಾವೀದನ ರಾಜ್ಯವು ಬರುತ್ತದೆ, ಅದಕ್ಕೆ ಆಶೀರ್ವಾದ; ಮೇಲಣ ಲೋಕಗಳಲ್ಲಿ ಜಯ ಎಂದು ಆರ್ಭಟಿಸಿದರು.**

ಆಗಿನ ಸಮಯದಲ್ಲಿ ಇದೆಂಥ ಪ್ರತಿಕಾಷ್ಠೆಯಾಗಿದೆ! ಯೆಹೂದ್ಯರ ರಾಜನೂ ಸರ್ವಲೋಕದ ಮಹಾರಾಜನೂ ಆದಾತನು ಕತ್ತೆಯಮೇಲೆ ಸವಾರಿಮಾಡುತ್ತಾ ಬಂದನು. ಆದಾಗ್ಯು ಆತನಿಗೆ ನೆರವೇರಿಸುವ, ಎಲ್ಲಾ ಮನುಜರ ರಕ್ಷಣೆ ತನ್ನ ಗುರಿ ಇತ್ತು. ಈ ಸಂಗತಿ ನೆರವೇರಿದಾಗಲೇ, ಈ ಭೂಮಿಯಮೇಲೆ ಆ ರಾಜ್ಯವನ್ನು ಹೊಂದಲು-ನಿರ್ವಹಿಸಲು ಆತನಿಗೆ ಪ್ರಜೆಗಳಿರುವರು.

# ದ್ರಾಕ್ಷಾರಸದ ಫಲವು

**ಮತ್ತಾಯ. 26:29**
**ನಾನು ನನ್ನ ತಂದೆಯ ರಾಜ್ಯದಲ್ಲಿ ದ್ರಾಕ್ಷಾರಸವನ್ನು ನಿಮ್ಮ ಸಂಗಡ ಹೊಸದಾಗಿ ಕುಡಿಯುವ ದಿನದವರೆಗೂ ಇನ್ನು ಕುಡಿಯುವುದೇ ಇಲ್ಲ ಎಂದು ನಿಮಗೆ ಹೇಳುತ್ತೇನೆ ಅಂದನು.**

**ಲೂಕ. 22:16,18,29,30**
**16. ನಾನು ನಿಮಗೆ ಹೇಳುತ್ತೇನೆ, ಇದು ದೇವರ ರಾಜ್ಯದಲ್ಲಿ ನೆರವೇರುವ ತನಕ ನಾನು ಇನ್ನು ಮೇಲೆ ಪಸ್ಕದ ಊಟವನ್ನು ಮಾಡುವುದೇಇಲ್ಲವೆಂದು ಹೇಳಿದನು.**

**18. ಇಂದಿನಿಂದ ದೇವರ ರಾಜ್ಯವು ಬರುವ ತನಕ ನಾನು ದ್ರಾಕ್ಷಾರಸವನ್ನು ಕುಡಿಯುವುದೇಇಲ್ಲವೆಂದು ನಿಮಗೆ ಹೇಳುತ್ತೇನೆ ಅಂದನು.**
**29. ಆದದರಿಂದ ನನ್ನ ತಂದೆಯು ನನಗೆ ರಾಜ್ಯವನ್ನು ನೇಮಿಸಿದ ಪ್ರಕಾರ ನಾನು ನಿಮಗೂ ನೇಮಿಸುತ್ತೇನೆ; 30. ನನ್ನ ರಾಜ್ಯದಲ್ಲಿ ನೀವು ನನ್ನ ಮೇಜಿನ ಮೇಲೆ ಊಟಮಾಡುವಿರಿ, ಕುಡಿಯುವಿರಿ, ಮತ್ತು ಸಿಂಹಾಸನಗಳ ಮೇಲೆ ಕೂತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯತೀರಿಸುವಿರಿ**.

ಮುಂಬರುವ ದೇವರ ರಾಜ್ಯದಲ್ಲಿ ಕರ್ತನ ಮೇಜು ನಮ್ಮ ನಂಬಿಕೆಯನ್ನು ವ್ಯಕ್ತಪಡಿಸುವ ಆಚರಣೆಯಾಗಿದೆ. ಆತನು ತನ್ನ ರಾಜ್ಯದಲ್ಲಿ ತಿರುಗಿ ರೊಟ್ಟಿ-ದ್ರಾಕ್ಷಾರಸವನ್ನು ಸೇವಿಸುವವರೆಗೂ ನಾವು ಇಲ್ಲಿ ಅದನ್ನೇ ಮಾಡುವವರಾಗಿರಬೇಕೆಂದು ಹೇಳುತ್ತಾನೆ! ಆತನು ಹೇಳಿದ ಹಾಗೆ ತಂದೆಯು ತನಗೆ ಕೊಟ್ಟ ರಾಜ್ಯದ ಪ್ರಕಾರವೇ ತಾನು ತನ್ನ ರಾಜ್ಯವನ್ನು ನಮಗೆ ನೀಡುವ ಪ್ರಕಾರ ಆತನ ರಾಜ್ಯದಲ್ಲಿ ನಾವು ಆಳುವುದು, ಅಧಿಕಾರ ಚಲಾಯಿಸುವುದು ಈಗಿನ ನಮ್ಮ ಕರ್ತನ ಮೇಜಿನ ಕಾರ್ಯವನ್ನು ಮಾಡುವ ನಮ್ಮ ನಂಬಿಕೆಯ ತೋರ್ಪಡಿಸುವ ಕಾರ್ಯವಾಗಿರುತ್ತದೆ. ಪ್ರತಿಬಾರಿ ಕರ್ತನ ಮೇಜನ್ನು ಆಚರಿಸುವಾಗ, ನಾವು ನಿತ್ಯತ್ವಕ್ಕೂ ಆತನ ಸ್ತೋತ್ರಗಳನ್ನು ಹಾಡಿಹರಸುತ್ತಾ ಆತನೊಂದಿಗೆ ಸದಾ ಆಳುವವರಾಗಿದ್ದೇವೆ. ವಿಶ್ವಾಸಿಗಳಾಗಿರುವಂತೆಯೇ, ಆತನ ಪರಲೋಕದ ರಾಜ್ಯದಲಿ ನಾವು ಆ ಧನ್ಯತೆಯುಳ್ಳ ನಿರೀಕ್ಷೆಯ ಸ್ಥಳದಲ್ಲಿ ಜೀವಿಸುತ್ತೇವೆ.

**2ತಿಮೊಥೆಯನಿಗೆ. 4:18**
**ನಾನು ಯಾವ ದುಷ್ಕೃತ್ಯವನ್ನೂ ಮಾಡದಂತೆ ಕರ್ತನು ನನ್ನನ್ನು ಕಾಪಾಡಿ ತನ್ನ ಬಳಿಗೆ ಪರಲೋಕರಾಜ್ಯಕ್ಕೆ ಸೇರಿಸುವನು. ಯುಗಯುಗಾಂತರಗಳಲ್ಲಿಯೂ ಆತನಿಗೆ ಸ್ತೋತ್ರ ಆಮೆನ್.**

**2ಪೇತ್ರ. 1:10,11**
**ಅದದರಿಂದ ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ ಆದುಕೊಂಡದ್ದನ್ನೂ ಧೃಢಪಡಿಸಿಕೊಳ್ಳುವುದಕ್ಕೆ ಮತ್ತಷ್ಟು ಪ್ರಯಾಸಪಡಿರಿ, ಹೀಗೆ ನೀವು ಮಾಡಿದರರೆ ಎಂದಿಗೂ ಎಡಹುವುದಿಲ್ಲ.**

## ಕೊನೆಯ ಪ್ರಶ್ನೆ

**ಅಪೊಸ್ತಲರಕೃತ್ಯಗಳು. 1:6–8**
**6. ಕೂಡಿ ಬಂದವರು ಆತನನ್ನು - ಸ್ವಾಮೀ, ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರುಗಿ ಸ್ಥಾಪಿಸಿಕೊಡುವಿಯೋ ಎಂದು ಕೇಳಲು**
**7.ಆತನು ಅವರಿಗೆ- ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳುಕೊಳ್ಳುವುದು ನಿಮ್ಮ ಕೆಲಸವಲ್ಲ.**
**8. ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೇವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು.**

ಪುನರುತ್ಥಾನದ ನಂತರ ಮತ್ತು ಪರಲೋಕಾರೋಹಣದ ಮುಂಚೆಯೂ, ಶಿಷ್ಯರು ಆ ರಾಜನ ಮತ್ತು ರಾಜ್ಯದ ಆಗಮನದ ಎರಡು ಹಂತಗಳ ವಿಷಯವಾಗಿ ಇನ್ನೂ ತಿಳಿದುಕೊಂಡಿರಲಿಲ್ಲ. ಮೊದಲನೇ ಹಂತದಲ್ಲಿ, ಆತನು ತನ್ನ ಆತ್ಮೀಕ ರಾಜ್ಯದ ವಿಷಯವಾಗಿ ಹೇಳಿದ್ದನು. ಹೇಗೂ ಶಿಷ್ಯರುಗಳು ಸ್ಪಷ್ಟವಾಗಿ ಯೇಸುವು ಅತಿ ಶೀಘ್ರದಲ್ಲೇ ತನ್ನ ಅಕ್ಷರಶಃ ರಾಜ್ಯವನ್ನು ಸ್ಥಾಪಿಸುತ್ತಾನೋ ಏನೋ ಎಂಬ ಆಲೋಚನೆಯಲ್ಲಿದ್ದರು. ಆದರೆ ಯೇಸುವು ಅವರ ನಿರಾಶೆಗೆ ತಾನು ಇನ್ನೂ ಆ ಅಕ್ಷರಶಃ ರಾಜ್ಯದ ವಿಷಯದಲ್ಲಿ ಏನನ್ನೂ ಮಾಡದೇ ಈ ಲೋಕದಿಂದ ಹೊರಟುಹೋಗಬೇಕಿತ್ತು! ಹಾಗಾಗಿ ಅವರು ಈ ವಿಷಯದಲ್ಲಿ ಕೇಳಲು, ಆತನು ಬೇರೆಯ ಕಾರ್ಯವನ್ನು ಸೂಚಿಸುತ್ತಾನೆ- ಸರ್ವಲೋಕಕ್ಕೆ ದೇವರ ರಾಜ್ಯದ ಸುವಾರ್ತೆಯನ್ನು ಪವಿತ್ರಾತ್ಮನ ಬಲದಿಂದ ಸಾರಲು ಹೇಳುತ್ತಾನೆ. ಈಗ ನಾವು ಇದೇ ಕಾಲದಲ್ಲಿದ್ದೇವೆ. ಇದುವೇ ನಮ್ಮ ಪ್ರಸ್ತುತ ಆದೇಶ. ಮತ್ತು ಆಗ ತಂದೆಯು ತಾನು ನೇಮಿಸಿದ ಕಾಲದಲ್ಲೇ ತನ್ನ ರಾಜ್ಯವನ್ನು ಸ್ಥಾಪಿಸುವನು.

## ಆಗ ಅಂತ್ಯವು ಬರುತ್ತದೆ.

**1ಕೊರಿಂಥ. 15:24–28**
**24.ಆಮೇಲೆ ಆತನು ಬೇರೆ ಎಲ್ಲಾ ದೊರೆತನವನ್ನೂ ಎಲ್ಲಾ ಅಧಿಕಾರವನ್ನೂ ಬಲವನ್ನೂ ನಿವೃತ್ತಿಮಾಡಿ ತಂದೆಯಾಗಿರುವ ದೇವರಿಗೆ ರಾಜ್ಯವನ್ನು ಒಪ್ಪಿಸಿಕೊಡುವಾಗ ಸಮಾಪ್ತಿ.**
**25. ಯಾಕಂದರೆ ತಾನು ಎಲ್ಲಾ ವಿರೋಧಿಗಳನ್ನು ತನ್ನ ಪಾದಗಲ ಕೆಳಗೆ ಹಾಕಿಕೊಳ್ಳುವ ತನಕ ರಾಜ್ಯವನ್ನಾಳುವುದು ಅವಶ್ಯ.**
**26. ಮರಣವು ಕಡೇ ಶತೃವಾಗಿ ನಿವೃತ್ತಿಯಾಗುವುದು.**
**27. ದೇವರು ಸಮಸ್ತವನ್ನೂ ಆತನ ಪಾದಗಳ ಕೆಳಗೆ ಹಾಕಿ ಆತನಿಗೆ ಅಧೀನಮಾಡಿದ್ದಾನೆಂಬದಾಗಿ ಹೇಳಿಯದೆಯಲ್ಲಾ. ಸಮಸ್ತವೂ ಆತನಿಗೆ ಅಧೀನಮಾಡಲ್ಪಟ್ಟಿದೆ ಎಂದು ಹೇಳುವಾಗ ಸಮಸ್ತವನ್ನು ಅಧೀನಮಾಡಿ ಕೊಟ್ಟಾತನು ಅದರಲ್ಲಿ ಸೇರಲಿಲ್ಲವೆಂಬುದು ಸ್ಪಷ್ಟವಾಗಿದೆ.**
**28. ಸಮಸ್ತವೂ ಆತನಿಗೆ ಅಧೀನವಾದ ಮೇಲೆ ಮಗನು ಸಮಸ್ತವನ್ನೂ ತನಗೆ ಅಧೀನಮಾಡಿಕೊಟ್ಟಾತನಿಗೆ ತಾನೇ ಅಧಿನವಾಗುವನು; ಹೀಗೆ ದೇವರು ಸಮಸ್ತರಲ್ಲಿಯೂ ಸಮಸ್ತವೂ ಆಗುವನು.**

ತಕ್ಕ ಸಮಯಕ್ಕೆ, ಕರ್ತನಾದ ಯೇಸುವು ಆತನೊಂದಿಗೆ ಎತ್ತಲ್ಪಟ್ಟ ಎಲ್ಲಾ ಸಂತರೊಂದಿಗೆ ಪರಲೋಕದಿಂದ ಬರುವ ಸಮಯವು ಪ್ರಚೂರಮಾಡಲ್ಪಡುವುದು. ಆತನು ಕ್ರಿಸ್ತವಿರೋಧಿಯನ್ನೂ ಮತ್ತು ಆತನ ಬೆಂಬಲಿತರನ್ನೂ ಉರುಳಿಸಿಬಿಡುವನು (ಪ್ರಕಟಣೆ. 19,20) ಕೀರ್ತನೆ. 2:6–10 ರ ಪ್ರಕಾರ ನೆರವೇರಿಸಲ್ಪಡುವುದು. ಯೇಸುವು ಈ ಭೂಲೋಕದಲ್ಲಿರುವ ಎಲ್ಲಾ ಅಧಿಕಾರ ಮತ್ತು ಆಳ್ವಿಕೆಯನ್ನು ನಿಲ್ಲಿಸಿಬಿಡುವನು. ತನ್ನ ತಂದೆಯ ಚಿತ್ತದಂತೆ ತನ್ನ ಅಕ್ಷರಶಃ ರಾಜ್ಯವನ್ನು ಈ ಭೂಮಿಯ ಮೇಲೆ ಸ್ಥಾಪಿಸುವನು. 25ನೇ ವಚನದಲ್ಲಿ, ಅಪೋಸ್ತಲನಾದ ಪೌಲನು ಕೀರ್ತನೆ. 110:1 ರಲ್ಲಿ ಹೇಳಿರುವುದನ್ನು ಪ್ರಸ್ತಾಪಿಸಿರುತ್ತಾನೆ.

## ಸಂತರುಗಳು ರಾಜ್ಯವನ್ನು ಹೊಂದುವರು

**ದಾನಿಯೇಲ. 7:13,14,18,27**
**13 .ನಾನು ಕಂಡ ರಾತ್ರಿಯ ಕನಸ್ಸಿನಲ್ಲಿ ಇಗೋ, ಮನುಷ್ಯಕುಮಾರನಂತಿರುವವನು ಆಕಾಶದ ಮೇಘಗಳೊಂದಿಗೆ ಬಂದು ಆ ಮಹಾ ವೃದ್ಧನನ್ನು ಸಮೀಪಿಸಿದನು, ಅವನನ್ನು ಆತನ ಸನ್ನಿಧಿಗೆ ತಂದರು.**
**14. ಸಕಲಜನಾಂಗ ಕುಲಭಾಷೆಗಳವರು ಅವನನ್ನು ಸೇವಿಸಲೆಂದು ಅವನಿಗೆ ದೊರೆತನವೂ ಘನತೆಯೂ ರಾಜ್ಯವೂ ಕೊಡೋಣವಾದವು; ಅವನ ಆಳಿಕೆಯು ಅಂತ್ಯವಿಲ್ಲದ್ದು, ಶಾಶ್ವತವಾದದ್ದು; ಅವನ ರಾಜ್ಯವು ಎಂದಿಗೂ ಅಳಿಯದು.**
**18. ಆದರೆ ರಾಜ್ಯವು ಪರಾತ್ಪರನ ಭಕ್ತರಿಗೆ ಲಭಿಸುವುದು, ಅವರೇ ಅದನ್ನು ತಲತಲಾಂತರಕ್ಕೂ ಶಾಶ್ವತವಾಗಿ ಅನಿಭವಿಸುವರು ಎಂದು ಆ ವಿಷಯಗಳ ತಾತ್ಪರ್ಯವನ್ನು ವಿವರಿಸಿ ತಿಳಿಸಿದನು.**
**27. ಆಗ ಅವನ ರಾಜ್ಯಪ್ರಭುತ್ವಗಳೂ ಸಮಸ್ತಭೂಮಂಡಲದಲ್ಲಿನ ರಾಜ್ಯಗಳ ಮಹಿಮೆಯೂ ಪರಾತ್ಪರನ ಭಕ್ತಜನರಿಗೆ ಕೊಡೋಣವಾಗುವವು; ಆತನ ರಾಜ್ಯವು ಶಾಶ್ವತರಾಜ್ಯ; ಸಕಲ ದೇಶಾಧಿಪತಿಗಳು ಆತನಿಗೆ ಅಧೀನರಾಗಿ ಸೇವೆಮಾಡುವರು ಎಂದು ಹೇಳಿದನು.**

**1ಕೊರಿಂಥ. 6:2,3**
**2. ದೇವಜನರು ಲೋಕಕ್ಕೆ ತೀರ್ಪುಮಾಡುವರೆಂಬದು ನಿಮಗೆ ತಿಳಿಯದೋ? ಲೋಕವು ನಿಮ್ಮಿಂದ ತೀರ್ಪನ್ನು ಹೊಂದಬೇಕಾಗಿರುವಲ್ಲಿ ಅತ್ಯಲ್ಪ ಸಂಗತಿಗಳನ್ನು ಕುರಿತು ತೀರ್ಪುಮಾಡುವುದಕ್ಕೆ ಅಯೋಗ್ಯರಾಗಿದ್ದೀರೋ?**
**3. ನಾವು ದೇವದೂತರಿಗೂ ತೀರ್ಪುಮಾಡುವವೆಂದು ನಿಮಗೆ ತಿಳಿಯದೋ? ಐಹಿಕ ಜೀವದ ಕಾರ್ಯಗಳನ್ನು ಕುರಿತು ನಾವು ತೀರ್ಪುಮಾಡುವುದು ದೊಡ್ಡದೋ?**

**ಓಬದ್ಯ. 1:21**
**ರಕ್ಷಕರು ಚೀಯೋನ್ ಪರ್ವತದಲ್ಲಿ ಎದ್ದು ಏಸಾವಿನ ಪರ್ವತವನ್ನು ಆಳುವರು; ಆಗ ರಾಜ್ಯವು ಯೆಹೋವನದ್ದಾಗಿರುವುದು.**

ಮಹೋನ್ನತನಾದ ಕರ್ತನ ಸೇವಕರು ಈ ಪ್ರಾಪಂಚಿಕ ರಾಜ್ಯದ ಜವಾಬ್ದಾರಿಗಳನ್ನು ಕಾರ್ಯಗತಗೊಳಿಸುವರು. ಮತು ಪ್ರಕಟಣೆ.20:11–15ರಲ್ಲಿ ಉಲ್ಲೇಖಿಸಿರುವ ಬಿಳಿಸಿಂಹಾಸನದ ನ್ಯಾಯತೀರ್ಪನ್ನು ಅವರುಗಳು ಅಂತ್ಯಗೊಳಿಸುವರು.

**2ತಿಮೊಥೆಯನಿಗೆ. 4:1**
**ದೇವರ ಮುಂದೆ ಮತ್ತು ಜೀವಿಸುವವರಿಗೂ ಸತ್ತವರಿಗೂ ನ್ಯಾಯತಿರಿಸುವುದಕ್ಕೆ ಬರುವ ಕ್ರಿಸ್ತ ಯೇಸುವಿನ ಮುಂದೆ ಆತನ ಪ್ರತ್ಯಕ್ಷತೆಯ ಮೇಲೆಯೂ ಆತನ ರಾಜ್ಯದ ಮೇಲೆಯು ಆಣೆಯಿಟ್ಟು ನಾನು ನಿನಗೆ ಖಂಡಿತವಾಗಿ ಹೇಳುತ್ತೇನೆ.**

# 11.ರಾಜ್ಯದ ಆದೇಶ

**ಮತ್ತಾಯ. 6:9,10**
**9.ಅದದರಿಂದ ನೀವು ಹೀಗೆ ಪ್ರಾರ್ಥನೆ ಮಾಡತಕ್ಕದ್ದು-**
**10. ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ.**

ಯೇಸುವು ಆತನ ರಾಜ್ಯವನ್ನು ನಮಗೆ ಆತ್ಮೀಕ ರೀತಿಯಲ್ಲಿ ತೋರಿಸಲು ಬಂದಿದ್ದನು. ಈಗ ನಾವು ಆ ರಾಜ್ಯದಲ್ಲಿ ಜೀವಿಸುವವರಾಗಿಯೂ ಹಂಚಿಕೊಳ್ಳುವವರಾಗಿಯೂ ಇದ್ದೇವೆ. ಆತನು ಅದನ್ನು ಇರಿಸಲಾಗಿರುವ ಪರಿಸರ ಮಸುಕಾಗುವದಲ್ಲದ ಆದರೆ ಬೆಳೆಯುತ್ತಿರುವ ಸಾಸಿವೆಕಾಳಿನಂತೆ ಅಥವಾ ಹುಳಿಯಂತೆ ವ್ಯಾಪಿಸುತ್ತದೆ ಮತ್ತು ಒಳನುಸುಳುತ್ತದೆ. ಆತನು ಈ ಭೂಮಿಯಲ್ಲಿಟ್ಟಿರುವ ಆ ರಾಜ್ಯವನ್ನು ಆತನ ಮಗ/ಮಗಳಾಗಿರುವ ನಾವುಗಳು ಇಂದಿಗೂ ಅದನ್ನು ಮುನ್ನಡೆಸುವಂತೆ ಆತನು ಅಪೇಕ್ಷಿಸುತ್ತಾನೆ. ಆತನ ರಾಜ್ಯವು ಈ ಭೂಮಿಯಲ್ಲಿ ಮತ್ತು ಆತನ ಚಿತ್ತವು ಪರಲೋಕದಂತೆಯೇ ಇಲ್ಲಿಯು ಇರುವಂತೆ ಆತನ ರಾಜ್ಯದ ಆದೇಶವಾಗಿದೆ.

## ನಿಮ್ಮೊಳಗಿರುವ ರಾಜ್ಯ

**ಲೂಕ. 17:20,21**
**20. ದೇವರ ರಾಜ್ಯವು ಯಾವಾಗ ಬರುವದೆಂದು ಫರಿಸಾಯರು ಆತನನ್ನು ಕೇಳಿದಾಗ ಆತನು ಅವರಿಗೆ- ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದ್ದಲ್ಲ.**
**21. ಇಗೋ ಇಲ್ಲಿ ಇದೆ, ಅಗೋ ಅಲ್ಲಿ ಅದೆ ಎಂದು ಹೇಳುವುದಕ್ಕಾಗದು; ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ ಅಂತ ತಿಳುಕೊಳ್ಳಿರಿ ಎಂದು ಉತ್ತರ ಕೊಟ್ಟನು.**

ದೇವರ ರಾಜ್ಯ- ಆತನ ಆಳಿಕೆ ಮತ್ತು ನಿಯಮ- ಇವುಗಳು ನಮ್ಮಲ್ಲಿ ಕಾರ್ಯಮಾಡುತ್ತವೆ, ನಮ್ಮಲ್ಲಿ ನಮ್ಮಮೂಲಕವಾಗಿ. ನಮ್ಮಲ್ಲಿ ದೇವರ ರಾಜ್ಯವಿದೆ ಎಂದು ಪ್ರಜ್ಞೆವುಳ್ಳವರಾಗಿ ಇರಬೇಕು. ದೇವರ ರಾಜ್ಯದ ನೀತಿ, ಸಂತೋಷ, ಸಮಾಧಾನ ನಮ್ಮೊಳಗೇ ಇದೆ. ದೇವರ ರಾಜ್ಯದ ಬಲಾಧಿಕಾರಗಳೂ ನಮ್ಮಲ್ಲಿವೆ. ದೇವರ ರಾಜ್ಯದ ಸೋಲಿಸುವ ಶಕ್ತಿ ನಮ್ಮೊಳಗಿದೆ, ನಾವು ಹೋಗುವಲ್ಲೆಲ್ಲಾ ದೇವರ ರಾಜ್ಯವು ನಮ್ಮೊಂದಿಗೇ ಇರುವಂಥದ್ದಾಗಿದೆ. ನಾವು ಎಲ್ಲೇ ಇದ್ದರೂ ದೇವರ ರಾಜ್ಯದ ಪ್ರಗತಿಯ ಅವಕಾಶ ನಮಗಿರುತ್ತದೆ.

ನಾವು ಹಾದುಹೋಗುವ ಪ್ರತಿ ಸಂದರ್ಭಗಳಲ್ಲಿ ದೇವರ ರಾಜ್ಯದ ಅಧಿಕಾರ, ಆಳ್ವಿಕೆ ಮತ್ತು ಅಭಿವ್ಯಕ್ತಿತ್ವದ ಅವಕಾಶ ನಮಗಿದೆ.

# ದೇವರ ರಾಜ್ಯದಲ್ಲಿ ಮುನ್ನುಗ್ಗುವುದು

**ಮತ್ತಾಯ. 11:12**
**12. ಇದಲ್ಲದೆ ಸ್ನಾನಿಕನಾದ ಯೋಹಾನನ ಕಾಲದಿಂದ ಈವರೆಗೂ ಪರಲೋಕರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ; ಬಲಾತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನ ಮಾಡಿಕೊಳ್ಳುತ್ತಾರೆ.**

**ಲೂಕ. 16:16**
**16. ಧರ್ಮಶಾಸ್ತ್ರವೂ ಪ್ರವಾದಿಗಳೂ ಯೋಹಾನನವರೆಗೆಯೇ. ಈಚೆಗೆ ದೇವರ ರಾಜ್ಯವು ಸಾರಲ್ಪಡುತ್ತಾ ಇದೆ. ಅದರಲ್ಲಿ ಸಕಲರೂ ಬಲಾತ್ಕಾರವಾಗಿ ನುಗ್ಗುತ್ತಾರೆ**.

ಇದುವೇ ದ್ವಂದ್ವಶಾಸ್ತ್ರದಂತೆ ಕಾಣುತ್ತದೆ. ದೇವರ ರಾಜ್ಯ ನಮ್ಮೊಳಗೇ ಇದೆ, ಆದರೂ ನಾವು ದೇವರ ರಾಜ್ಯದೊಳಗೆ ಪ್ರವೇಶಿಸಬೇಕು. ದೇವರ ರಾಜ್ಯ ಉಪದೇಶ ಮತ್ತು ಬೋಧನೆಗಳು ರಾಜ್ಯದೊಳಗೆ ಪ್ರವೇಶಿಸಲು ನಮ್ಮನ್ನು ಉತ್ತೇಜಿಸಬೇಕು. “ಒಳ ನುಗ್ಗು” ಅಂದರೆ, ಬಲವಾಗಿ ರಭಸವಾಗಿ ಒಳನುಗ್ಗು ಎಂದರ್ಥ. ಒಂದು ‘ರಭಸ’ದ ಅಥವಾ ‘ಬಲ’ದ ಅಂಶವುಂಟು ಅದರ ಮೂಲಕ ದೇವರ ರಾಜ್ಯದ ಕಾರ್ಯಗಳನ್ನು ಕೈಗೊಳ್ಳಬೇಕು.

ಇಲ್ಲಿ ಒಂದು ವಿರೋಧಭಾಸವುಂಟು, ನಾವು ದೇವರ ರಾಜ್ಯದ ಮಕ್ಕಳೂ ದೇವರ ರಾಜ್ಯದ ಹೋರಾಟಗಾರರೂ ಎಂದು ಕರೆಯಲ್ಪಟ್ಟಿದ್ದೇವೆ. ಆದರೆ ದೇವರು ನಮ್ಮನ್ನು ಮಕ್ಕಳನ್ನಾಗಿಯೋ ಅಥವಾ ಹೋರಾಟಗಾರರಾಗಿಯೋ ನಮ್ಮನ್ನು ಕರೆದಿದ್ದಾನೆಂದು ನಾವು ಸರಿಯಾಗಿ ಆಲೋಚಿಸಿ ತಿಳುಕೊಳ್ಳಬೇಕು.

ಇನ್ನೊಂದೆಡೆ ನಾವು ಮಕ್ಕಳಾಗಿ ದೇವರ ರಾಜ್ಯವನ್ನು ಅಂಗೀಕರಿಸಬೇಕು. ಯೇಸುವು ಲೂಕ. 12:32 ರಲ್ಲಿ ಹೇಳಿದ ಹಾಗೆ, “ಚಿಕ್ಕಹಿಂಡೇ ಹೆದರಬೇಡ; ಆ ರಾಜ್ಯವನ್ನು ನಿಮಗೆ ದಯಪಾಲಿಸುವುದಕ್ಕೆ ನಿಮ್ಮ ತಂದೆಯು ಸಂತೋಷವುಳ್ಳವನಾಗಿದ್ದಾನೆ”.

ಆದರೂ ಇನ್ನೊಂದೆಡೆ, ಯೋಧರಾಗಿ ನಾವು ಮಾಡಬೇಕಾದಾಗ ಅಕ್ರಮಣಕಾರಿಯಾಗಿ ರಾಜನು ತನ್ನಲ್ಲಿ ನಮಗೆ ಲಭ್ಯವಾಗಿದ್ದನ್ನು ಮುಂದುವರಿಸುವವರಾಗಿರಬೇಕು. ನಾವು ರಾಜನ ವಿರುದ್ಧ ಹೋರಾಡುತ್ತಿಲ್ಲ ಏಕೆಂದರೆ ಆತನು ಒಬ್ಬನೇ ಅಲ್ಲ ಅದನ್ನು ನಮ್ಮಿಂದ ದೂರವಿಡುವುದು. ಬದಲಿಗೆ ನಾವು ನಮ್ಮ ವಿರುದ್ಧ

ಸ್ವಂತ ಶರೀರ, ಶಾರೀರಿಕ ಆಲೋಚನೆಗಳು, ಇಹಲೋಕದ ನಡುವಳಿಕೆ, ದುಷ್ಟ ಮಕ್ಕಳು- ಮತ್ತು ಪರಲೋಕರಾಜ್ಯದಲ್ಲಿ ನಮ್ಮದಾದ ಪಾತ್ರವನ್ನು ಕಂಡುಹಿಡಿಯುವಲ್ಲಿ ನಾವು ಹೋರಾಡುವವರಾಗಿದ್ದೇವೆ. ದೇವರ ರಾಜ್ಯದಲ್ಲಿ ಕೆಲವು ಸಂಗತಿಗಳು ಅನುಭವಿಸಲೇ ಆಗುವುದಿಲ್ಲ, ಅದಕ್ಕಾಗಿ ಎತ್ತಿಹಿಡಿದು ಚಿತ್ತದಿಂದ ಅಕ್ರಮಣಶೀಲತೆ ರಭಸದಿಂದ ನಿಭಾಯಿಸದಿದ್ದರೆ ದೇವರ ರಾಜ್ಯದೊಳಗೆ ಪ್ರವೇಶಿಸಲಾಗುವುದಿಲ್ಲ. ಒಂದು ಸಮೂಹದಂತೆ, ಒಟ್ಟಾಗಿ ಬಂದು ಎತ್ತಿಹಿಡಿದು ನಮ್ಮ ಪಟ್ಟಣದಲ್ಲಿ, ದೇಶದಲ್ಲಿ, ಸರ್ವ

ದೇಶದಲ್ಲಿ ದೇವರಿಗಾಗಿ ಬಲವಾಗಿ ನಿಂತುಕೊಳ್ಳಬೇಕು. ದೇವರ ಚಿತ್ತವನ್ನು ನೆರವೇರಿಸಲು ಮತ್ತು ಯಾವುದೇ ಪರಿಸ್ಥಿತಿಯಲ್ಲಿ ದೇವರಿಗಾಗಿ ನಾವು ನಿಲ್ಲಲು, ಸಭೆಯಾಗಿ ಒಟ್ಟಾಗಿ ಎತ್ತಿಹಿಡಿಯಬೇಕು.

## ರಾಜನಿಗೆ ಸರ್ವವೂ ಒಳಪಟ್ಟು

ದೇವರ ರಾಜ್ಯದ ಆದೇಶವನ್ನು ನೆರವೇರಿಸಲು ಮೊದಲ ಹಂತದಲ್ಲಿ, ಆ ರಾಜನಿಗೆ ನಮ್ಮ ಜಿವಿತವು ಎಲ್ಲೆಡೆಯಲ್ಲೂ ಒಳಪಟ್ಟದ್ದಾಗಿರಬೇಕು. ಆ ರಾಜನ ಆಳ್ವಿಕೆಯನ್ನು ನಮ್ಮ ಜೀವಿತದ ಪ್ರತಿ ಪ್ರಾಂತ್ಯದಲ್ಲಿ ಸ್ವಾಗತಿಸಬೇಕು ಮತ್ತು ಕರ್ತನು ನಮ್ಮನ್ನು ಅನುದಿನದ ಜೀವಿತದಲ್ಲಿ ಮುಟ್ಟಿರಬೇಕು. ನಾವು "ದೇವರ ರಾಜ್ಯ"ದಲ್ಲಿ ಜೀವಿಸುತ್ತಾ ಪ್ರಸರಿಸಬೇಕು. ನಾವು ಈ ಭೂಮಿಯಲ್ಲಿ ಮಾಡುವ ಕಾರ್ಯಗಳು ಆತನ ರಾಜ್ಯದ ಅಭಿವೃದ್ಧಿಪರವಾಗಿರಬೇಕು. ಆತನ ಆಳ್ವಿಕೆಯು ನಮ್ಮಲ್ಲಿ ನಮ್ಮ ಮೂಲಕವಾಗಿ ಹರಡಬೇಕು. ಯೇಸು ಹೇಳಿದಂತೆ, "ಆತನ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕ ಪಡಿರಿ" ಎಂಬಂತೆ, ದೇವರ ರಾಜ್ಯದ ಅನ್ವೇಷಣೆಯು ಸೇವಿಸುವ ಹಾಗಿರಬೇಕು. ಅತ್ಯಮೂಲ್ಯವುಳ್ಳ ಮುತ್ತಿನಂತೆ ಮತ್ತು ಭೂಮಿಯಲ್ಲಿ ಅವಿತಿರುವ ನಿಧಿಯಂತೆ, ನಮಗಿರುವ ನಮ್ಮ ಎಲ್ಲಾ ಕನಸುಗಳು, ನಮ್ಮ ಧ್ಯೇಯ ಮತ್ತು ಉದ್ದೇಶಗಳು "ದೇವರ ರಾಜ್ಯದ ಬುಟ್ಟಿ"ಯಲ್ಲಿ ಸಂಪೂರ್ಣವಾಗಿ ಸಮರ್ಪಿಸಬೇಕು. ನಮಗೆ ತೊಡಕಾಗುವ ಒಂದು ವಿಷಯ ಮತ್ತು ಜೀವಿಸುವ ಸಂಗತಿ ಏನೆಂದರೆ, ಆತನ ಚಿತ್ತವು ಭೂಮಿಯಲ್ಲಿ ನೆರವೇರುವುದು ಆತನ ರಾಜ್ಯ ಈ ಧರೆಗೆ ಬರುವುದು.

## ದೇವರ ರಾಜ್ಯದ ಪ್ರಭಾವವನ್ನು ಬಿಚ್ಚಿಡುವುದು

ನಮ್ಮ ಸ್ಥಾನವನ್ನು ಈ ಭೂಮಿಯಲ್ಲಿ ಸರಿಯಾದರೀತಿಯಲ್ಲಿಟ್ಟುಕೊಳ್ಳಬೇಕು. ಯೇಸು ತಾನು ಬರುವವರೆಗೂ ಕಾರ್ಯವನ್ನು ಮಾಡಲು ಹೇಳಿರುತ್ತಾರೆಯೇ ಹೊರತು ತಾನು ಬರುವವರೆಗೂ ನಾವು ಮಠಗಳಲ್ಲಿ, ಸಭೆಗಳಲ್ಲಿ ಅವಿತುಕೊಂಡಿರಲು ಹೇಳಿಲ್ಲ. ಒಂದೇ ಮಾರ್ಗವೆಂದರೆ ನಮ್ಮನ್ನು ಈ ಲೋಕದಲ್ಲಿ ದೇವರ ರಾಜ್ಯದ ಪ್ರಭಾವವನ್ನು ಮಹಿಮೆಪಡಿಸಲು ಸದಾ ಆತನ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು.

ನಿಮ್ಮ ಪರ್ವತಗಳಲ್ಲಿ ಹತ್ತಿನಿಂತುಕೊಳ್ಳಿರಿ. ನಿಮ್ಮ ಪರ್ವತ ಅಥವಾ ರಂಗ ಯಾವ ವಿಷಯದಲ್ಲಿ ದೇವರು ನಿಮ್ಮನ್ನು ಕರೆದಿದ್ದಾನೋ- ಯಾವ ಕಲೆಗಾಗಿ ಅಥವಾ ಯಾವ ಮಾಧ್ಯಮದಲ್ಲಿ, ವಿದ್ಯಾಭ್ಯಾಸದಲ್ಲಿ, ವ್ಯಾಪಾರದಲ್ಲಿ, ಸರ್ಕಾರದಲ್ಲಿ, ಕುಟುಂಬದಲ್ಲಿ, ಧರ್ಮದಲ್ಲಿ ನಿಮಗೆ ಪ್ರಭಾವಿತತೆಯಾಗುತ್ತದೆ? ನಿಮ್ಮ ಬೆಟ್ಟಕ್ಕನುಸಾರವಾಗಿ ಸ್ಥಾನ ಮಾಡಿಕೊಳ್ಳಿರಿ. ನಿಮ್ಮಲ್ಲಿ ದೇವರ ರಾಜ್ಯದ ಸಾಸಿವೆಕಾಳನ್ನು(ಸಂಪೂರ್ಣತೆ), ಹುಳಿಹಿಟ್ಟನ್ನು(ಪ್ರಸರಿಸುವ) ನಿಮ್ಮಲ್ಲಿ ನಿಮ್ಮ ಪರಿಸರದಲ್ಲಿ ನಿಮ್ಮ ಮೂಲಕ

ಪ್ರವೇಶಿಸುವಂತೆ ಮತ್ತು ಛೇಧಿಸುವಂತೆ ಅಪೇಕ್ಷಸಿರಿ. ಆಗ ನೀವು ದೇವ ರಾಜ್ಯದಂತೆ ಜೀವಿಸುತ್ತಾ ಆಲೋಚಿಸುತ್ತಾ ಇರಲು ಪ್ರಭಾವಿತರಾಗುವಿರಿ. ಇಹ ಲೋಕದ ಪ್ರಪಂಚಕ್ಕೆ ಅನುಸಾರ ನೀವು ನಡೆಯುವುದಿಲ್ಲ. ವಿಭಿನ್ನ ಪ್ರಪಂಚದ ಸಂಸ್ಕೃತಿಯನ್ನು ಹೊಂದಿದವರಾಗಿರುವಿರಿ. ಸೋಲಿಸುವ ಸಂಸ್ಕೃತಿ- ನಿಮ್ಮ ಸುತ್ತಲೂ ಇರುವ ಇತರ ಸಂಸ್ಕೃತಿಗಿಂತಲೂ ನೀವು ಬಲಿಷ್ಟಪ್ರಮಾನದಲ್ಲಿರುವಿರಿ.

## ದೇವರ ರಾಜ್ಯದ ಆಕ್ರಮಣವನ್ನು ಮುಂದುವರಿಸುವುದು

ಹೀಗೆ ಪ್ರಾರ್ಥಿಸಲು ಆರಂಭಿಸಿರಿ, "ನಿನ್ನ ರಾಜ್ಯವು ಬರಲಿ, ಪರಲೋಕದಲ್ಲಿ ನಿನ್ನ ಚಿತ್ತ ನೆರವೇರುವಂತೆ ಈ ಭೂಲೋಕದಲ್ಲಿಯೂ ನೆರವೇರಲಿ". ನೀವು ಎಲ್ಲೇ ಇದ್ದರೂ ನಿಮ್ಮ ಮನೆಗಾಗಿ, ನೆರೆಯವರಿಗಾಗಿ, ನಿಮ್ಮ ಶಾಲಾ-ಕಾಲೇಜಿಗಾಗಿ, ಯಾವುದೇ ಸ್ಥಳದಲ್ಲಿದ್ದರೂ ಎಲ್ಲವುಗಳಿಗಾಗಿ ಹೀಗೆ ಪ್ರಾರ್ಥಿಸಿರಿ. ಆಗ ದೇವರ ರಾಜ್ಯವನ್ನು ನಿಮ್ಮ ಬಳಿಗೇ ತರಲು ಅವಕಾವಿರುವುದು. ನೀವು ಹೀಗೆ ಪ್ರಾರ್ಥಿಸಲು, ನಿಮ್ಮ ಪ್ರಪಂಚದಲ್ಲಿ ದೇವರ ರಾಜ್ಯವು ಮುಂಗಡವಾಗಿ ನಿಮ್ಮ ಜೀವಿತದ ಮೂಲಕ ಕಾರ್ಯ ನಿರ್ವಹಿಸುತ್ತದೆ. ನೀವು ಶಾಲೆಗೆ ಹೋಗುವಾಗ ಕೇವಲ ವಿದ್ಯಾರ್ಥಿಯಾಗಿ ಅಲ್ಲ ಆದರೆ ದೇವರ ಮಗ/ಮಗಳಾಗಿ ಅಲ್ಲಿರುತ್ತೀರಿ. ನಿಮ್ಮ ಕಾರ್ಯಾಲಯದಲ್ಲಿ ಕೇವಲ ದುಡಿಯುವವರಾಗಿಯೇ ಅಲ್ಲ ಆದರೆ ನೀವು ದೇವರ ರಾಜ್ಯದ ಪ್ರಗತಿಪರರಾಗಿರುತ್ತೀರಿ. ನಿಮಗೆ ಅಲ್ಲಿ ಸಂದೇಶ ಸಾರಲು- "ದೇವರ ರಾಜ್ಯವು ಇಲ್ಲಿಯೇ ಅದೆ!" ಎಂಬದಾಗಿ ಅವಕಾಶವಿರುತ್ತದೆ. ದೇವರ ರಾಜ್ಯದ ಆಗಮನದ ಆದೇಶ ಮತ್ತು ನಿಮ್ಮ ಶಾಲೆಯಲ್ಲಿ ದೇವರ ವಿತ್ತವು ನೆರವೇರುವ ರೀತಿಯನ್ನು ನೋಡುವಿರಿ. ಮಾತ್ರವಲ್ಲದೇ ಸಾಧಾರಣ ಪಿಸುಮಾತಿನ ಪ್ರಾರ್ಥನೆಯೂ ಕಾರ್ಯಮಾಡುತ್ತದೆ. ಆತನ ರಾಜ್ಯವನ್ನು ಯಾವ ರೀತಿಯಲ್ಲಿ ಪ್ರಗತಿಸಲ್ಪಡಬೇಕೆಂದು ನೋಡಿಕೊಳ್ಳಿರಿ. ನಿಮ್ಮ ಮನಸ್ಸನ್ನು ಆಲೋಚನೆಗಳನ್ನು ತೆರೆದು ಉಪಾಯಗಳು, ಯೋಜನೆಗಳು ಮತ್ತು ದೇವರು ತನ್ನ ರಾಜ್ಯಕ್ಕಾಗಿ ಏನು ಮಾಡಲು ಬಯಸುತ್ತಾನೋ ಎಂಬೀ ವಿಷಯಗಳಿಗಾಗಿ ಆಲೋಚಿಸಿಕೊಳ್ಳಿರಿ. ಆತನು ಒಂದುವೇಳೆ ಪ್ರಾರ್ಥನೆಕೂಟವನ್ನು ನಡೆಸಲು ನಿಮಗೆ ಹೇಳಬಹುದು, ನೀವಿರುವ ಸ್ಥಳದಲ್ಲೇ ಜನಗಳನ್ನು ಕೂಡಿಸಲು ಹೇಳಬಹುದು, ನೀವಿರುವ ಸ್ಥಳದಲ್ಲೇ ಯಾರಿಗಾದರೂ ಯಾವುದೋರೀತಿಯಲ್ಲಿ ಸಹಾಯ ಮಾಡುವ ಸೇವೆಯನ್ನೂ ಹೇಳಬಹುದು, ಯಾವುದಾದರೂ ಅತ್ಯವಶ್ಯಕ ವಿಷಯಕ್ಕಾಗಿ ಪ್ರಾರ್ಥನೆ ಮಾಡಲು ಹೇಳಿ ಅದರಿಂದ ಕಾರ್ಯಪ್ರವೃತ್ತರಾಗಲೂ ಹೇಳಬಹುದು., ನಿಮ್ಮ ಸುತ್ತಲಿರುವ ಜನರಿಗೆ ನೀವು ಪ್ರಭಾವಿತರಾಗಿ ಅದೇ ಸ್ಥಳದಲ್ಲಿ ನೀವು ಕಾರ್ಯ ನಿರ್ವಹಿಸಲು ಒಂದು ನಿಮ್ಮ ಜೀವಿತದ ಕುರಿತಾದ ಸಾಕ್ಷಿಹೇಳಲು ಹೇಳಬಹುದು, ನೀವು ಮಾಡುವ ಕೆಲಸದಲ್ಲೇ ಕರ್ತನು ತನ್ನ ರಾಜ್ಯದ ತತ್ವಗಳನ್ನು ಸಂಯೋಜಿಸಲು ಹೇಳಬಹುದು ಇದರ ಮೂಲಕ ಹುಳಿಹಿಟ್ಟು ಹೇಗೆ ತಾನು ಹಿಟ್ಟಿನಲ್ಲಿ ಹರಡಿಕೊಳ್ಳುವ ಪ್ರಕಾರ ಆ ಸಂಸ್ಥೆಯ ಸಂಸ್ಕೃತಿಗೆ ನೀವು

ಹಂತಹಂತವಾಗಿ ಪ್ರಭಾವಬೀರಲು ಅವಕಾಶವಾಗುತ್ತದೆ. ನೀವು ಅಲ್ಲಿದ್ದುಕೊಂಡು ದೇವರ ರಾಜ್ಯದ ಪ್ರಗತಿಯನ್ನು ಅಭಿಯೋಗವನ್ನು ನೋಡುವವರಾಗಿರುತ್ತೀರಿ.

## ದೇವರ ರಾಜ್ಯದ ಬಲ, ಅಧಿಕಾರ ಮತ್ತು ಪ್ರಭುತ್ವದಲ್ಲಿ ನಡೆಯುವುದು.

**ಲೂಕ. 10:1,9**
**1. ಇದಾದ ಮೇಲೆ ಸ್ವಾಮಿಯು ಇನ್ನೂ ಎಪ್ಪತ್ತು ಮಂದಿಯನ್ನು ನೇಮಿಸಿ ಅವರನ್ನು ಇಬ್ಬಿಬ್ಬರಾಗಿ**
**9. ಅಲ್ಲಿರುವ ರೋಗಿಗಳಿಗೆ ವಾಸಿಮಾಡಿ ಅವರಿಗೆ – ದೇವರ ರಾಜ್ಯವು ನಿಮ್ಮ ಸಮೀಪಕ್ಕೆ ಬಂದದೆ ಎಂದು ಹೇಳಿರಿ.**

ನೋಡಿರಿ ದೇವರ ರಾಜ್ಯ ವೂ ಯಾವಾಗಲೂ ಬಲದೊಂದಿಗೆ ಬರುವಂಥದ್ದಾಗಿದೆ. ನಾವು ಪ್ರತಿಬಿಂಬಿಸುವ ಮತ್ತು ಅದರ ಒಂದು ಭಾಗವಾಗಿರುವವರು ಇತರೆ ದುಷ್ಟಶಕ್ತಿಗಿಂತಲೂ ಬಲವುಳ್ಳವರಾಗಿದ್ದೇವೆ. ನಿಮ್ಮಲ್ಲಿ ಪಟ್ಟಬದ್ದವಾಗಿರುವ ದೇವರ ರಾಜ್ಯದ ಶಕ್ತಿಯನ್ನು ಅವಕಾಶ ಸಿಗುವಲ್ಲಿ ಅದನ್ನು ಉಪಯೋಗಿಸಿರಿ. ಯೇಸುವಿನ ನಾಮವನ್ನು ನೀವು ಉಪಯೋಗಿಸುವಾಗ ಸರ್ವ ಪರಲೋಕವು ನಿಮ್ಮನ್ನು ಬೆಂಬಲಿಸುತ್ತದೆ. ಅಧಿಕಾರವನ್ನು ಚಲಾಯಿಸಲು ನೀವು ಒತ್ತಾಯಪೂರ್ಣವಾಗಿರಬೇಕು. ಕೆಲವೊಮ್ಮೆ ದುರಾತ್ಮಶಕ್ತಿಗಳು ಬಹಳ ಬಲವಾಗಿರುತ್ತವೆ ಅವುಗಳು ಮೊಂಡತನದಿಂದ ನಿಮಗೆ ಕಾರ್ಯ ಮಾಡಲು ಬಿಡುವುದಿಲ್ಲ. ನಾವೋ ದುರಾತ್ಮಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಸೈತಾನನನ್ನು ಸೋಲಿಸಿ ಆತನನ್ನು ಮೆಟ್ಟಿನಿಲ್ಲು ನಾವು ಶಕ್ತರಾಗಿದ್ದೇವೆಂಬ ಮನೋಭಾವನೆ ನಿರಂತರವಾಗಿರಬೇಕು. ವಿಶ್ವಾಸಿಗಳಾಗಿರುವ ನಾವು ಒಂದು ಮಹಾ ಸಮೂಹವಾಗಿದ್ದು ದೇವರ ರಾಜ್ಯದ ಬಲ ಅಧಿಕಾರಗಳನ್ನು ಪ್ರಚೂರಪಡಿಸುವವರಾಗಿರಬೇಕು. ದೇವರ ರಾಜ್ಯದ ಶಕ್ತಿಯನ್ನು ಪ್ರದರ್ಶಿಸಲು ಅದ್ಭುತಕಾರ್ಯಗಳನ್ನು ಮಾಡಲು ದುಷ್ಟಶಕ್ತಿಗಳನ್ನು ಕುಂದಿಸಿ, ವಿಶ್ವಾಸಿ ಸಮೂಹದವರಾದ ನಾವು ರೂಢಿಯ ಮಟ್ಟವನ್ನು ಬೆಳೆಸಿಕೊಳ್ಳಬೇಕು.

## ಇದೆಲ್ಲವೂ ರಾಜನ ಕುರಿತಾದದ್ದು!

ಕಡೇಯದಾಗಿ, ನಮ್ಮ ದೇವರ ರಾಜ್ಯ ಆದೇಶದಲ್ಲಿ, ಇದೆಲ್ಲವೂ ರಾಜನ ವಿಷಯದ್ದೇ ಎಂದು ತಿಳಿದಿರಬೇಕು. ಇದು ನಮ್ಮ ಸ್ಥಳೀಯ ಸಭೆ, ನಾವು, ನಮ್ಮ ಸೇವೆ ಮತ್ತು ನಮ್ಮ ಖ್ಯಾತಿಯಲ್ಲ. ಇದು ಯಾವುದೂ ಅಲ್ಲ! ಕಟ್ಟಕಡೆಗೆ ಇದೆಲ್ಲವೂ ಯೇಸುವೇ! ನಾವು ಆತನು ಉನ್ನತಕ್ಕೆತ್ತಲ್ಪಟ್ಟಿರುವುದನ್ನು,ಮಹಿಮೆಹೊಂದಿರುವುದನ್ನು,ಆರಾಧಿಸಲ್ಪಟ್ಟಿರುವುದನ್ನು ಮತ್ತು ಸ್ತುತಿಸಲ್ಪಟ್ಟಿರುವುದನ್ನು ನೋಡಬೇಕು, ನಾವು ಏನೇ ಮಾಡಿದರೂ ಯೇಸುವಿನ ಧ್ವಜ ಇಡೀ ದೇಶದಲ್ಲೇ ಹಾರಾಡುವುದನ್ನು ನೋಡಬೇಕು.!

**ಮತ್ತಾಯ. 6:13**
**"ರಾಜ್ಯವೂ ಬಲವೂ ಮಹಿಮೆಯೂ ಸದಾ ಆತನದ್ದೇ. ಆಮೆನ್**

## ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ ಸೇವಕರ ಸಮಾವೇಸವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ “ಆಲ್ ಪೀಪಲ್ಸ್ ಸಭೆ ಬೆಂಗಳೂರು” ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು.
Account Name:All Peoples Church
Account Number: 0057213809,
IFSC Code: CITI0000004
Bank: Citibank N.A. 506-507
Level 5 Prestige Meridian 2, #30.
M.G. Road Banglore – 560 001

ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು **FCRA** ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!

ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

**ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು**

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು-
-ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜಸ್ಥಳ
ದೇವರ ಉದ್ದೇಶಗಳಿಗೆ ಜನ್ಮಕೊಡುವುದು

ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು-
-ನೆರವೇರಿಸುವುದು.
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ,ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ
ಆಸ್ತಿವಾರಗಳು ಭಾಗ-1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ದೇವರ ರಾಜ್ಯ
ಪ್ರಾಚೀನ ಹೆಗ್ಗುರುತು
ಯೇಸುವಿನ ಪ್ರಬಲ ಹೆಸರು

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ
ದೇವರ ಮನೆ
ಮದುವೆ ಮತ್ತು ಕುಟುಂಬ
ದೈವಿಕ ದಯೆ
ದೈವಿಕ ಕ್ರಮ –ನಗರ ವ್ಯಾಪ್ತಿ ಸಭೆಗಳಲ್ಲಿ
ಶುದ್ದೀಕರಿಸುವ ಬೆಂಕಿ
ಬದ್ಧತೆಯ ಬಲ
ಜಗಳರಹಿತವಾದಜೀವಿ ಜೀವಿಸುವುದು

ಕೆಲಸ ಮತ್ತುಆದರ ಮೂಲ ವಿನ್ಯಾಸ
ನಾವು ವಿಭಿನ್ನರು

ತಂದೆಯ ಪ್ರೀತಿ
ನಮ್ಮ ವಿಮೋಚನೆ
ಆತ್ಮಿಕವಾಗಿಮನಸುಳ್ಳವರಾಗಿರುವುದು=
=ಲೌಕಿಕ ಜ್ಞಾನವಂತರಾಗಿರುವುದು
ದೇವರಮಾರ್ಗದರ್ಶನ ಪಡೆದುಕೊಳ್ಳುವುದು
ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ
ಪ್ರತಿಉದ್ದೇಶಕ್ಕ ಒಂದು ಸಮಯವಿದೆ
ಶ್! ಹರಟೆ ಬೇಡ
ದೇವರ ವಿಮೋಚನ ಹೃದಯ
ಪವಿತ್ರಾತ್ಮನ ವರಗಳು
ಕೆಲಸದ ಸ್ಥಳದಲ್ಲಿನ ಸ್ತ್ರೀಯರು
ಮನಸ್ಸಿನ ವಿಜಯ

**ಉಚಿತ ಇ- ಪುಸ್ತಕಗಳು ನಮ್ಮ ಚರ್ಚ್ ವೆಬ್ ಸೈಟ್apcwo.org/publications ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ.ಡಿ.ಎಫ್ ಅನುವಾದನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ.ಇಂತಹ ಉಚಿತ ಪುಸ್ತಕಗಳಿಗಾಗಿ ಇ –ಮೇಲ್bookrequests@apcwo.org ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನುಸಂಪರ್ಕಿಸಹುದಾಗಿದೆ.**

**ಉಚಿತ ಆಡಿಯೋ,ವಿಡಿಯೋ ಸಂದೇಶಗಳುಪ್ರಸಂಗ ಟಿಪ್ಪಣಿಗಳಿಗಾಗಿನಮ್ಮವೆಬ್ ಸೈಟನ್ನು ಸಂಪರ್ಕಿಸಿ (apcwo.org/sermons)ಮತ್ತು ಇತರೆಅನೇಕ ಅಧ್ಯಯನ ಸಂಗ್ರಹ ಬಳಸಹುದು.**

## ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕ ಕಾರ್ಯ, ಅದ್ಭುತಕಾರ್ಯ, ಮಹಾತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2:4,5, ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಆಲ್ ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿರಿ. www.apcwo.org ಅಥವಾ Contact@apcwo.org ಗೆ ಇ-ಮೇಲ್ ಕಳುಹಿಸಿರಿ.

## ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ – ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು,ದೇವರು, ಒಳ್ಳೆಯ ದೇವರಾಗಿದ್ದಾನೆ , ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ನಮಗೆ ಪ್ರಕಟಿಸುತ್ತವೆ**.

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು

**“ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ” ಎಂದು ಹೇಳುತ್ತದೆ. ( ರೋಮಪುರ 6:23)** ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ,ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.
**“ ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು” (ಅಪೊಸ್ತಲರ ಕೃತ್ಯ 10:43)**

**“ ನೀನು ಯೆಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು ಎಂಬುದೇ” (ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ದೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

ಪ್ರಿಯ ಕರ್ತನಾದ ಯೇಸುವ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು

ಕ್ಷಮಿಸಲ್ಪಟ್ಟೆನು. ಯಾರು ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.

ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ.
ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.

ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ " ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ದೀಕರಣ ಪಡೆದುಕೊಂಡೆ" ಎಂದು ಹೇಳುತ್ತೇನೆ.

ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು. ಆಮೆನ್

## ಆಲ್ ಪೀಪಲ್ಸ್ ಚರ್ಚ್
## ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು—ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಏ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳು ನೀಡುತ್ತೇವೆ.
ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (C.Th.)
ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (D.Th.)
ಮೂರು ವರ್ಷದ ಬ್ಯಾಚುಲರ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮದ್ಯಾಹ್ನ 1 ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮದ್ಯಾಹ್ನ 2 ರಿಂದ 5 ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ತರಗತಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾಂತ್ಯದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಟ್ಟಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್ ಲೋಡ್ ಮಾಡಲು apcwo.org/biblecollege ಅನ್ನು ಸಂಪರ್ಕಿಸಿರಿ.

APC-BC is accredited by the Nations Association for Thelogical Accreditaion (NATA)

ಸತ್ಯವೇದದ ಮೂಲಕವಾಗಿ ದೇವರ ರಾಜ್ಯವು ಒಂದು ಪ್ರಮುಖ ವಿಷಯವಾಗಿದೆ. ಯೇಸುವು ಆತನ ಭೂ ಲೋಕದ ಸೇವೆಯನ್ನು ಪರಲೋಕ ರಾಜ್ಯದ ಆಗಮನದ ಕುರಿತು ಸಾರುವ ಮುಖಾಂತರ ಆರಂಭಿಸಿದನು. ಆತನ ಸ್ವರ್ಗಾರೋಹಣಕ್ಕೆ ಮೊದಲೂ ಆತನ ಅಂತಿಮ ದಿವಸಗಳ ಅವಧಿಯಲ್ಲಿ, ದೇವರ ರಾಜ್ಯದ ಕುರಿತು ಆತನು ಉಪದೇಶಿಸಿದನು. ದೇವರ ರಾಜ್ಯವು ನಮ್ಮೊಳಗೆ ಇದೆ ಎಂಬುದನ್ನು ತಿಳಿಯಬೇಕು. ಈ ಲೋಕಕ್ಕೆ ಒಳ್ಳೆಯ ಬೀಜಗಳಾಗಿ ಬಿತ್ತಲ್ಪಟ್ಟಂತಹ ದೇವರ ರಾಜ್ಯದ ಪುತ್ರರು ಮತ್ತು ಪುತ್ರಿಯರು ನಾವಾಗಿದ್ದೇವೆಂಬುದನ್ನು ನಾವು ಗುರುತಿಸಬೇಕು.

.

ಈ ಅಧ್ಯಯನವು “ದೇವರ ರಾಜ್ಯದ ದೃಷ್ಟಿಕೋನದಲ್ಲಿ ಹೇಗೆ ಕಾರ್ಯ ಮಾಡಬೇಕು. ಮತ್ತು ಜೀವಿಸಬೇಕು, ನೀವು ಮಾಡುವಂತಹ ಪ್ರತಿಯೊಂದು ಕಾರ್ಯವು ಭೂಮಿಯ ಮೇಲೆ ಅರಸನ ಆಧಿಪತ್ಯ ವಿಸ್ತರಿಸಲು – ನಿಮ್ಮ ಮೂಲಕ ಮತ್ತು ನಿಮ್ಮೊಳಗೆ ಆತನ ಆಳ್ವಿಕೆಯು ಬಿಡುಗಡೆಗೊಳ್ಳಬೇಕೆಂಬುದನ್ನು ಕಲಿಸುತ್ತದೆ. ನಿಮ್ಮ ಜೀವಿತದ ಮೇಲಿರುವ ದೇವರ ರಾಜ್ಯದ ಅಧಿಕೃತ ಆದೇಶವನ್ನು ಹೇಗೆ ನೆರವೇರಿಸಬೇಕು – ಆತನ ರಾಜ್ಯವು ಬರುವುದನ್ನು ನೋಡಲೂ ಮತ್ತು ನೀವು ಇರುವ ಕಡೆಯಲ್ಲೇ ನಿಮ್ಮ ಮೂಲಕವಾಗಿ ಆತನ ಚಿತ್ತವು ನೆರವೇರಲ್ಪಡಲಿ ಎಂಬುದನ್ನು ನೀವು ಕಲಿಯುತ್ತೀರಿ.

ಶಿಷ್ ರಾಯ್‌ಚೂರ್

All Peoples Church & World Outreach
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043 Karnataka, INDIA

Phone: +91-80-25452617
Email: contact@apcwo.org
Website: apcwo.org